॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಕಾಶೀನಾಥಗ್ರಂಥಮಾಲಾ

ಪುಷ್ಪ ೬೩

# ಶ್ರೀ ರಾ ಜ ಶೇ ಖ ರ ವಿ ಲಾ ಸ

ಸಂಗ್ರಾಹಕ :

**ಬಿ. ರಾಜಶೇಖರಯ್ಯ**

ವಿದ್ವಾನ್, ಕನ್ನಡ ಪಂಡಿತ್, ಬಿ. ಎಸ್‌ಸಿ., ಮತ್ತು

ಶಿಕ್ಷಾಶಾಸ್ತ್ರೀ (Dip-in-Ed.)

ಅಲಂಕಾರಶಾಸ್ತ್ರಾಧ್ಯಾಪಕ,

...ರಾಜ ಸಂಸ್ಕೃತ ಮಹಾಪಾಠಶಾಲೆ, ಮೈಸೂರು

033,3NBR,1
K8R

510

...:

... ಮಹಾಚಾರ್ಯತತ್ವಪ್ರಕಾಶಕ'

...ಹಾದೇವಯ್ಯನವರು

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

೧೯೬೮

ಬೆಲೆ: ೧ ರೂ.

1-50

033,3NBR,1 510
K8R
Rajshekharaya, B
Rajshekhara vilasa.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಕಾಶೀನಾಥಗ್ರಂಥಮಾಲಾ

ಪುಷ್ಪ ೬೩

# ಶ್ರೀ ರಾ ಜ ಶೇ ಖ ರ ವಿ ಲಾ ಸ

ಸಂಗ್ರಾಹಕ :

**ಬಿ. ರಾಜಶೇಖರಯ್ಯ**

ವಿದ್ವಾನ್, ಕನ್ನಡ ಪಂಡಿತ್, ಬಿ.ಎಸ್‌ಸಿ., ಮತ್ತು

ಶಿಕ್ಷಾಶಾಸ್ತ್ರೀ (Dip-in-Ed.)

ಅಲಂಕಾರಶಾಸ್ತ್ರಾಧ್ಯಾಪಕ,

ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆ, ಮೈಸೂರು

ಪ್ರಕಾಶಕರು :

ನಾಗನೂರು ಬೃಹನ್ಮಠಾಧ್ಯಕ್ಷರಾದ ' ಮಹಾಚಾರ್ಯತತ್ತ್ವಪ್ರಕಾಶಕ '

ವೇ॥ ಪಂ॥ ಮಹಾದೇವಯ್ಯನವರು

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

೧೯೬೮

ಬೆಲೆ : ೧ ರೂ.

ಪ್ರಥಮ ಮುದ್ರಣ ೧೯೩೬

O33,3NBR,1
K8R

Publisher—
B. Mahadevaiah
Printer—
D. Rajarathnam

Sree Panchacharya
Electric Press
Sayaji Rao Road,
Mysore

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ......
510

# ಪ್ರಕಾಶಕರ ನುಡಿ

ಕನ್ನಡ ಮಹಾಕವಿ ಷಡಕ್ಷರಿ ವಿರಚಿತ " ಶ್ರೀ ರಾಜಶೇಖರವಿಲಾಸ " ಎಂಬ ಚಂಪೂಗ್ರಂಥವು ಸಾಮಾನ್ಯವಾಗಿ ಎಲ್ಲರಿಗೂ ಅರ್ಥವಾಗದಿರುವುದರಿಂದ ಮತ್ತು ಪಂಚಾಕ್ಷರೀ ಮಹಾಮಂತ್ರದ ಮಹಿಮೆ ಸರ್ವರಿಗೂ ತಿಳಿಯಲೆಂಬ ಉದ್ದೇಶದಿಂದ ಮೈಸೂರು ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯ ಅಧ್ಯಾಪಕರಾದ ಶ್ರೀ ರಾಜಶೇಖರಯ್ಯನವರಿಗೆ ನಾವು ಸೂಚಿಸಿದ ಮೇರೆಗೆ ಅವರು ಮೇಲ್ಕಂಡ ಚಂಪೂಗ್ರಂಥದ ಸಾರವನ್ನು ಮೊದಲು ನಮ್ಮ ಪತ್ರಿಕೆಗೂ, ನಂತರ ಗ್ರಂಥಕ್ಕೂ ಬರೆದು ಕೊಟ್ಟದ್ದಲ್ಲದೆ ಸದರ ಗ್ರಂಥದ ಸ್ವಾಮಿತ್ವವನ್ನು ಕೂಡ ನಮಗೆ ವಹಿಸಿಕೊಟ್ಟು ನಮ್ಮ ಕಾಶೀನಾಥ ಗ್ರಂಥಮಾಲೆಯ ೬೩ ನೇ ಗ್ರಂಥವಾಗಿ ಪ್ರಚಾರಪಡಿಸುವಂತೆ ಒಪ್ಪಿಗೆ ಕೊಟ್ಟಿರುವುದು ನಮಗೂ ವಾಚಕರಿಗೂ ಸಂತೋಷವನ್ನುಂಟುಮಾಡದೆ ಇರಲಾರದು.

ಇದೀಗ ಸಾಹಿತ್ಯಕ್ಷೇತ್ರದಲ್ಲಿ ಮುನ್ನಡಿ ಇಡುತ್ತಿರುವ ಇವರಿಂದ ಇಂಥ ಅನೇಕ ಧಾರ್ಮಿಕಗ್ರಂಥಗಳು ಉದಯವಾಗಿ ಕಾಶೀನಾಥಗ್ರಂಥಮಾಲೆಯಲ್ಲಿ ಸೇರಿ ಗ್ರಂಥಮಾಲೆಯು ವೈಶಿಷ್ಟ್ಯಪೂರ್ಣವಾಗಿ ಬೆಳಗಲೆಂದು ಹಾರೈಸಿ ಶ್ರೀ ರಾಜಶೇಖರಯ್ಯನವರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಉತ್ತರೋತ್ತರ ಆಯುರ್ಬುದ್ಧಿಯಶಸ್ಸುಗಳನ್ನಿತ್ತು ಕಾಪಾಡಲೆಂದು ಬೇಡುತ್ತೇವೆ.

ಪ್ರಕಾಶಕರು.

# ಮೊದಲ ಮಾತು

ಕ್ರಿ. ಶ. ೨ ನೇ ಶ.ದ 'ಶಿಲಪ್ಪದಿಗಾರಂ' ಎನ್ನುವ ತಮಿಳುಗ್ರಂಥದಲ್ಲಿ ಬರುವ ಹಸು–ಕರುವಿನ ಕಥೆಯೊಂದನ್ನು ಮೂಲವನ್ನಾಗಿಟ್ಟುಕೊಂಡು ಗುಬ್ಬಿಯ ಮಲ್ಲಣಾರ್ಯನು 'ಭಾವಚಿಂತಾರತ್ನಂ' ಎನ್ನುವ ಪದ್ಯಕಾವ್ಯವನ್ನು ರಚಿಸಿದನು. ಇದರಲ್ಲಿ ರಾಜನಾದ ಸತ್ಯೇಂದ್ರಚೋಳನ ಕಥೆಯನ್ನು ಹೇಳಿ ಪಂಚಾಕ್ಷರೀ ಮಹಾಮಂತ್ರದ ಮಹಿಮೆಯನ್ನು ವಿವರಿಸಿದೆ. ಇದೇ ಕಥೆಯನ್ನೇ ಆಧಾರವನ್ನಾಗಿಟ್ಟುಕೊಂಡು ಮಹಾಕವಿ ಷಡಕ್ಷರಿಯು 'ರಾಜಶೇಖರವಿಲಾಸ'ವನ್ನು ಚಂಪೂ ಶೈಲಿಯಲ್ಲಿ ರಚಿಸಿರುವನು. ಸಂಸ್ಕೃತ ಮತ್ತು ಕನ್ನಡಭಾಷೆಗಳೆರಡರಲ್ಲಿಯೂ ಉದ್ದಾಮಪಂಡಿತನಾದ ಈತನ ಸಹಜವಾದ ಪಾಂಡಿತ್ಯ ಮತ್ತು ಪ್ರತಿಭೆಗಳು ಬಾಣ–ಕಾಳಿದಾಸರ ಪಾಂಡಿತ್ಯ ಮತ್ತು ಪ್ರತಿಭೆಗಳಿಗೂ ಮಿಗಿಲೆನ್ನುವುದು ಈ ಗ್ರಂಥವನ್ನು ಓದಿದವರಿಗೆ ಅರಿವಾಗುತ್ತದೆ.


ಶ್ರೀಪಂಚಾಕ್ಷರೀಮಂತ್ರದ ಪ್ರಭಾವವನ್ನು ವಿವರಿಸುವ ಈ ಅಮೂಲ್ಯ ಗ್ರಂಥದ ಸಂಕ್ಷಿಪ್ತ ತಿಳಿಗನ್ನಡಾನುವಾದಪ್ರಚಾರವು ಅತ್ಯವಶ್ಯವೆನ್ನುವ ದೃಷ್ಟಿಯಿಂದ ಶ್ರೀ ಪಂಚಾಚಾರ್ಯ ಪ್ರಭಾಪತ್ರಿಕಾ ಸಂಪಾದಕರೂ, ನಾಗನೂರು ಬೃಹನ್ಮಠಾಧ್ಯಕ್ಷರೂ ಆದ 'ಮಹಾಚಾರ್ಯ ತತ್ತ್ವಪ್ರಕಾಶಕ' ಪಂ॥ ವೇ॥ ಬ್ರ॥ ಶ್ರೀ ಮಹಾದೇವಯ್ಯನವರ ಸಂಪೂರ್ಣ ಪ್ರೇರಣೆ ಮತ್ತು ಪ್ರೋತ್ಸಾಹಗಳು, ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಲು ಮುಖ್ಯಕಾರಣವಾದುವು. ಇದನ್ನೇ ಗ್ರಂಥರೂಪವಾಗಿ ಹೊರತರಬೇಕೆಂಬ ಇವರ ಸತ್ಯಸಂಕಲ್ಪವು ತಮ್ಮ ಶ್ರೀ ಕಾಶೀನಾಥ ಗ್ರಂಥಮಾಲೆಯ ೬೩ನೇ ಪುಷ್ಪವನ್ನಾಗಿ ಪ್ರಕಟಪಡಿಸಿ ನನ್ನನ್ನಾಶೀರ್ವದಿಸಿದೆ. ಅವಶ್ಯಕತೆಯ ದೃಷ್ಟಿಯಿಂದ ಶಿವನ ಪಂಚವಿಂಶತಿ ಲೀಲೆಗಳನ್ನು ಪುರಾಣಾದಿಗಳ ಆಧಾರದಿಂದ ಇದರಲ್ಲಿ ಸಂಗ್ರಹಿಸಿದೆ. ಮಾನ್ಯ ಸಹೃದಯರಿಗೆ ಈ ಗ್ರಂಥವು ಆನಂದವನ್ನುಂಟುಮಾಡಿದಲ್ಲಿ ಕನ್ನಡಮ್ಮನ ಪಾದಕಮಲದಲ್ಲಿ ಅರ್ಪಿತವಾಗುತ್ತಿರುವ ನನ್ನ ಈ ಪ್ರಪ್ರಥಮ ಕುಸುಮಕಾಣಿಕೆ ಸಾರ್ಥಕವಾಗಲಿ! ಮತ್ತು ಮಾನ್ಯ ಪ್ರಕಾಶಕರ ಪ್ರಯತ್ನವೂ ಸಫಲವಾಗಲಿ!!

ಬಿ. ರಾಜಶೇಖರಯ್ಯ.

# ಶ್ರೀರಾಜಶೇಖರವಿಲಾಸ

ಸಹೋದರಿಯರಿಗೆ

# ಶ್ರೀ ರಾಜಶೇಖರವಿಲಾಸ



## ೧. ಶಿವಭಕ್ತ ಸತ್ಯೇಂದ್ರಚೋಳ

ಐರಾವತ ಮುಂತಾದ ದಿವ್ಯ ವಸ್ತುಗಳಿಗೆ ತೌರುಮನೆಯಾಗಿ, ಮೀನು ಮೊದಲಾದ ಜಲಚರಗಳಿಗೆ ಆವಾಸಸ್ಥಾನವಾಗಿ, ಅತ್ಯಮೂಲ್ಯರತ್ನಗಳಿಗೆ ಆಕರವಾಗಿ, ಹೆಚ್ಚು ಗಂಭೀರವೂ ಮತ್ತು ವಿಸ್ತಾರವೂ ಆದ ಸಮುದ್ರ ರಾಜನು ಭೂಮಂಡಲದಲ್ಲಿ ಒಪ್ಪುತ್ತಿದ್ದನು. ಈ ಸಮುದ್ರಮಧ್ಯದಲ್ಲಿ, ವಾಸುಕಿಯ ಫಣಾರತ್ನದಂತೆ ಮನೋಹರವಾದ ಮೇರುಪರ್ವತವು ಸೂರ್ಯ ಮಂಡಲದವರೆವಿಗೂ ಹಬ್ಬಿ ಮೆರೆಯುತ್ತಿತ್ತು. ಇದರ ರಮ್ಯವಾದ ತಪ್ಪಲ ಪ್ರದೇಶದಲ್ಲಿ ಎಲ್ಲ ಋತುಗಳಲ್ಲೂ ಫಲಪುಷ್ಪಸಮೃದ್ಧಿಯಾಗುಳ್ಳ ನಾನಾ ವಿಧದ ಮರ–ಗಿಡ–ಬಳ್ಳಿಗಳು ಕಂಗೊಳಿಸುತ್ತಿದ್ದುವು. ಆದುದರಿಂದ ಇದು ದೇವತೆಗಳ ವಿಹಾರಸ್ಥಾನವಾಗಿತ್ತು. ಜಿತೇಂದ್ರಿಯರಾದ ಅನೇಕ ಮಹರ್ಷಿಗಳ ದಿವ್ಯಾಶ್ರಮಗಳು ಇಲ್ಲಿ ಒಪ್ಪುತ್ತಿದ್ದುವು. ನಾನಾವರ್ಣದ ಕಮಲಗಳಿಂದ ಶೋಭಿತಗಳಾದ ಅನೇಕ ಮನೋಹರ ಸರೋವರಗಳು, ಯಕ್ಷ-ಕಿನ್ನರ-ಕಿಂಪುರುಷ-ಗಂಧರ್ವಾದಿಗಳ ಆಕರ್ಷಕವಾದ ಕ್ರೀಡಾಸ್ಥಾನ ಗಳಾಗಿದ್ದುವು. ರಮಣೀಯಗಳಾದ ಗುಹೆಗಳಿಂದ ಕೂಡಿ ಪ್ರಶಾಂತವೂ ರಮ್ಯವೂ ಆದ ತಪೋವನಗಳಿಂದಲೂ ಮತ್ತು ಸಿಂಹ-ಶಾರ್ದೂಲಾದಿ ವನ್ಯ ಮೃಗಗಳಿಂದ ಭೀಕರವಾದ ಮಹಾರಣ್ಯಗಳಿಂದಲೂ ಕೂಡಿತ್ತಲ್ಲದೆ, ಶಿವ ಲೋಕವಾದ ಕೈಲಾಸವನ್ನೇ ತನ್ನ ಉತ್ತುಂಗಶಿಖರದಲ್ಲಿ ಹೊತ್ತು ಬೆಳಗುತ್ತಿತ್ತು.

ಇಂತಹ ಈ ಮೇರುಪರ್ವತದ ದಕ್ಷಿಣದಲ್ಲಿ, ಭೂದೇವಿಯ ಸೀಮಂತ ರತ್ನದಂತೆ ಚೋಳಮಂಡಲವು ರಾರಾಜಿಸುತ್ತಿತ್ತು. ದೇವಗಂಗೆಯಂತೆ ಪವಿತ್ರವೂ, ಲೋಕಪೂಜ್ಯವೂ, ಪುಣ್ಯಪ್ರದವೂ ಮತ್ತು ಮನೋಹರವೂ ಆದ ಕಾವೇರಿ ಮುಂತಾದ ನದಿಗಳು ಈ ಚೋಳದೇಶವನ್ನಲಂಕರಿಸಿದ್ದುವು. ಈ ನದಿಗಳ ಬಯಲುಪ್ರದೇಶಗಳು ಸದಾಕಾಲವೂ ಅಚ್ಚಹಸಿರ ಪೈರುಗಳಿಂದ

ಪರಿಶೋಭಿಸುತ್ತಿದ್ದುವು. ದೇಶಮಧ್ಯದ ಅನೇಕ ರಾಜಮಾರ್ಗಗಳು ಭೂದೇವಿಯ ಬೈತಲೆಯಂತಿದ್ದವು. ಈ ಹೆದ್ದಾರಿಗಳ ಇಕ್ಕೆಲಗಳಲ್ಲಿ ತಳಿರು ತೋರಣಾದಿಗಳಿಂದ ಅಲಂಕೃತಗಳಾದ ಅರವಟ್ಟಿಗೆಗಳಲ್ಲಿ ದಾರಿಹೋಕರ ನೀರಡಿಕೆಯನ್ನು ಹೋಗಲಾಡಿಸಿ ಮನಸ್ಸಿಗೆ ಆನಂದವನ್ನುಂಟುಮಾಡಲು ಸುಂದರ ರಮಣಿಯರೇ ಅವರಿಗೆ ನೀರುಹಾಕುತ್ತಿದ್ದರು. ಎಲ್ಲ ಕಾಲಗಳಲ್ಲೂ ಹೂ-ಹಣ್ಣುಗಳಿಂದ ತುಂಬಿ ಪರಿಶೋಭಿಸುತ್ತಿರುವ ಈ ದೇಶದ ವನಪ್ರದೇಶಗಳು ಎಲ್ಲ ಜಾತಿಯ ಖಗ-ಮೃಗಾದಿಗಳಿಗೆ ಆವಾಸಸ್ಥಾನವಾಗಿದ್ದವು. ನಿತ್ಯತೃಪ್ತರಾದ ಜನ-ಅತುಲೈಶ್ವರ್ಯ-ಹೇರಳವಾದ ಧಾನ್ಯ-ಮೊದಲಾದವುಗಳ ಸಮೃದ್ಧಿಯಿಂದ ಈ ದೇಶವು ಸುಖದಲ್ಲಿ ದೇವಲೋಕವನ್ನೇ ಮೀರಿಸಿತ್ತು. ಬಡತನ-ಚೋರಭೀತಿ-ಕುಟಿಲನೀತಿ ಮೊದಲಾದವು ಈ ದೇಶದಲ್ಲಿ ಎಲ್ಲಿಡೆಯೂ ಹೇಳಹೆಸರಿಲ್ಲದಂತಿದ್ದವು; ಅಷ್ಟೇ ಅಲ್ಲದೆ ಇದು ಸಾಕ್ಷಾತ್ ಧರ್ಮದ ನೆಲೆಬೀಡಾಗಿತ್ತು.

ಹೀಗಿರುವ ಚೋಳಮಂಡಲದ ಮಧ್ಯದಲ್ಲಿ ಭೂಮಿಯ ಕಂಠಹಾರದ ಮಧ್ಯಮಣಿಯಂತೆ ಧರ್ಮವತೀನಗರವು ಕಣ್ಗೊಪ್ಪಿತ್ತು. ನವರತ್ನರಾಜಿಗಳಾದ ಉಪ್ಪರಿಗೆಗಳು ಗಗನಚುಂಬಿಗಳಾಗಿ ಈ ನಗರದ ಕೀರ್ತಿ ಮತ್ತು ಕಾಂತಿಗಳನ್ನು ಚಂದ್ರಮಂಡಲದವರೆವಿಗೂ ಬೆಳಗಿಸಿದ್ದವು. ಸಕಲ ಸಂಪತ್ತುಗಳಿಗೆ ಈ ನಗರಿಯು ಆಗರವೆಂಬುದನ್ನು ರಮ್ಯವಾದ ಹರ್ಮ್ಯಗಳೇ ಸೂಚಿಸುತ್ತಿದ್ದವು. ಮನೋಹರಗಳಾದ ಉದ್ಯಾನವನಗಳು; ಬಾಳೆ-ತೆಂಗು-ಅಡಿಕೆ ಮುಂತಾದ ಹುಲುಸಾದ ತೋಟಗಳು; ಈ ತೋಟಗಳಲ್ಲಿ ಕೋಗಿಲೆ ಮುಂತಾದ ಪಕ್ಷಿಗಳ ಇಂಪಾದ ಸ್ವರಗಳು ಕೂಡಿ ನಗರದ ವೈಭವವನ್ನು ಹೆಚ್ಚಿಸಿದ್ದವು. ಈ ನಗರಿಯ ನಂದನೋದ್ಯಾನಗಳಲ್ಲಿ ಪರಿಶೋಭಿಸುತ್ತಿದ್ದ ಫಲಪುಷ್ಪಭಾರಗಳಿಂದ ಬಾಗಿದ ಲತೆಗಳೂ, ಕ್ರೀಡೆಗಾಗಿ ನಿರ್ಮಿತಗಳಾಗಿದ್ದ ಲತಾಮಂಟಪಗಳೂ, ಕಮಲ-ಕಹ್ಲಾರಾದಿಪುಷ್ಪಗಳಿಂದ ಕಂಗೊಳಿಸುತ್ತಿದ್ದ ಸರೋವರಗಳೂ, ಸಕಲಜಾತಿಯ ವೃಕ್ಷಸಮುದಾಯಗಳೂ, ಶುಕ-ಪಿಕ-ಭ್ರಮರಾದಿ ಪಕ್ಷಿಸಂಕುಲಗಳೂ ಜನರ ಮನಸ್ಸನ್ನು ಸೂರೆಗೊಂಡಿದ್ದವು. ಇವೆಲ್ಲದರಿಂದ ನಗರದ ಕೀರ್ತಿಲತೆಯು ಎಲ್ಲೆಡೆ ಹಬ್ಬಿತ್ತು. ಹೀಗೆ ಇಂದ್ರನ ಅಮರಾವತಿಯನ್ನೂ ಮೀರಿಸಿ ನಿಂತ ಶೋಭೆ ಈ ನಗರಿಯದು. ಮುಗಿಲೆತ್ತ

ರವ ಅಭೇದ್ಯವಾದ ಕೋಟೆಯು ಈ ನಗರಿಗೆ ಪ್ರಧಾನ ರಕ್ಷೆಯಾಗಿತ್ತು. ಅದರ ಸುತ್ತಣ ಕಂದಕವು ಸಮುದ್ರದಷ್ಟು ಆಳವಾಗಿ ಶತ್ರುಗಳಿಗೆ ದುರ್ಗಮವಾಗಿತ್ತು.

ಇಲ್ಲಿಯ ಜನರು ಧರ್ಮಪರಾಯಣರಾಗಿ, ಯಾವಾಗಲೂ ಶಿವಪೂಜೆ-ಶಿವಧ್ಯಾನ-ಶಿವಪುರಾಣಶ್ರವಣ-ಶಿವಭಕ್ತರಸೇವೆ-ಗುರುಜಂಗಮಾರ್ಚನೆಗಳಲ್ಲಿ ಕಾಲ ಕಳೆಯುತ್ತಾ, ಶೈವಧರ್ಮಿಗಳಾಗಿ ಶಿವಭಕ್ತಿಸಂಪನ್ನರಾಗಿದ್ದರು. ಶ್ರೀದೇವಿಯು ಈ ನಗರಿಯನ್ನೇ ಆವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದ ಳೆಂಬಂತೆ ಅಖಂಡವಾದ ಐಶ್ವರ್ಯದಿಂದ ತುಂಬಿ ತುಳುಕಾಡುತ್ತಿತ್ತು. ಅಂಗಡಿಗಳ ಸಾಲುಗಳು ಅನೇಕವಿಧದ ಆಕರ್ಷಕ ವಸ್ತುಗಳಿಂದ ತುಂಬಿ ಜನರ ಮನಸ್ಸನ್ನು ಸೆಳೆಯುತ್ತಿದ್ದವು. ರಾಜಬೀದಿಗಳಲ್ಲಿ ಸುಮಂಗಲೆಯರ ಸಡಗರ, ರಾಜಪುರುಷರ ಅತ್ಯವಸರದ ಕಾರ್ಯಚಟುವಟಿಕೆ, ಮಂಗಳವಾದ್ಯ ನಿನಾದ ಮುಂತಾದವು ಮೆರೆದಿದ್ದವು. ಇಂತೀ ಸಕಲ ಸಂಪತ್ತುಗಳಿಗೆ ಗಣಿಯೆನಿಸಿದ ಈ ಧರ್ಮವತೀ ನಗರಿಗೆ ಲೋಕೈಕವಿಖ್ಯಾತ ಶಿವಭಕ್ತನಾದ ಸತ್ಯೇಂದ್ರಚೋಳನು ರಾಜನಾಗಿದ್ದನು.

ರಾಜಶ್ರೇಷ್ಠನಾದ ಈತನಲ್ಲಿ, ಸಕಲ ಶ್ರೇಷ್ಠ ವಸ್ತುಗಳೂ ಇರಲೇ ಬೇಕೆಂಬಂತೆ ಸ್ತ್ರೀರತ್ನ-ಪಂಡಿತರತ್ನ-ಮಂತ್ರಿರತ್ನ-ಗುರುರತ್ನ-ಸೈನ್ಯರತ್ನ-ಮಂತ್ರರತ್ನ ಮುಂತಾದ ಅಪಾರ ರತ್ನಗಳು ಕಂಗೊಳಿಸುತ್ತಿದ್ದವು. ತಾನು ಮಹಾಶಿವಭಕ್ತನೂ-ಶಿವಭಕ್ತಕಿಂಕರನೂ ಆಗಿದ್ದುದರಿಂದ ತನ್ನ ನಾಡಲ್ಲೆಲ್ಲ ಶಿವನ ಲೀಲೆಯೇ ನರ್ತಿಸುತ್ತಿತ್ತು. ಈತನ ಈ ನಿರ್ಮಲ ಕೀರ್ತಿಯು ಜಗದ ನಾಲ್ದೆಸೆಗಳಲ್ಲೂ ಹರಡಿತ್ತು.

ಶಂಕರನಿಗೆ ಶಂಕರಿಯಿರುವಂತೆ ಸರ್ವರೀತಿಯಿಂದ ಅನ್ವರ್ಥವಾಗಿ ಅಮೃತಮಯಳೆನಿಸಿರುವ ಅಮೃತಮತಿ ಮಹಾದೇವಿಯು ಅಂತಃಪುರದ ಲಕ್ಷ್ಮಿಯೆನಿಸಿ, ಈತನ ಪಟ್ಟದರಸಿಯಾಗಿ, ಚಂದ್ರನಲ್ಲಿ ಚಂದ್ರಿಕೆಯು ಬೆಳಗುವಂತೆ ಈಕೆಯು ರಾಜನ ಕಾಂತಿಯೇ ಆಗಿ ಬೆಳಗುತ್ತಿದ್ದಳು. ತನ್ನ ಅಪಾರವಾದ ಭಕ್ತಿ-ಪ್ರೀತಿಗಳಿಂದ ಪತಿಯ ಹೃದಯವನ್ನು ಸೂರೆಗೊಂಡು ಅವನ ಹೃದಯೇಶ್ವರಿಯಾಗಿದ್ದಳು.

ಪ್ರತಿ ಕಾರ್ಯಗಳಲ್ಲಿ ಸಹಕಾರಿಯಾಗಲು ಈತನಿಗೆ ಪತಿವ್ರೋಹಿ ಯೆಂಬ ಮಂತ್ರಿಶ್ರೇಷ್ಠನಿದ್ದನು. ಶಿವಭಕ್ತಿಸಂಪನ್ನನಾದ ಈತನು ಸಕಲ ಶಾಸ್ತ್ರ ಪಾರಂಗತನೂ, ದಂಡನೀತಿಕುಶಲನೂ ಆಗಿದ್ದನು. ಹೀಗಿದ್ದರೂ, ಮಕ್ಕಳಿಲ್ಲದ ಪ್ರಬಲ ಚಿಂತೆ ಈತನನ್ನು ಕಾಡುತ್ತಿತ್ತಾದರೂ ಕಾರ್ಯಗೌರವ ಗಳಿಂದ ಅದನ್ನು ಎಣಿಸುತ್ತಿರಲಿಲ್ಲ. ಆದರೆ ಈತನ ಪತ್ನಿಯು ಮಾತ್ರ ಈ ಚಿಂತೆಯಲ್ಲೇ ಕೊರಗಿ ಸೊರಗಿದ್ದಳು. ಈಕೆಯನ್ನು ಸಂತೈಸಿ ಮಹಾ ಮಂತ್ರಿಯು ಸಪತ್ನೀಕನಾಗಿ ಗುರುಶ್ರೇಷ್ಠರಾದ ಚಿಧ್ಘನಶಿವಾಚಾರ್ಯರ ಸೇವೆಯನ್ನು ಭಕ್ತಿಯಿಂದಾಚರಿಸಿ, ಅವರ ವರಪ್ರಸಾದದಿಂದ ಸತ್ಪುತ್ರನೋ ರ್ವನನ್ನು ಪಡೆದು, ಆತನಿಗೆ ಮಿತವಚನನೆಂದು ಹೆಸರಿಟ್ಟು ಸುಖಸಂತೋಷ ದೀಂದಿದ್ದನು. ಈ ಮಗುವು ರಾಜರಾಣಿಯರಿಗೂ ಕಣ್ಮಣಿಯಾಗಿತ್ತು.

ಹೀಗಿರಲು, ಒಂದುದಿನ ರಾಜನು ಒಡ್ಡೋಲಗದಲ್ಲಿರುವಾಗ, ಕಾಶೀ ಕ್ಷೇತ್ರವಾಸಿಯಾದ ಶ್ರೀ ವಿಶ್ವೇಶ್ವರಮೂರ್ತಿಗೆ ಪವಿತ್ರವಾದ ಗಂಗಾನದಿಯ ತೀರ್ಥದಿಂದ ಸಹಸ್ರ ಕುಂಭಾಭಿಷೇಕವನ್ನು ಮಾಡಿಸಬೇಕೆಂಬ ತನ್ನ ಅಪೂರ್ವ ಹಂಬಲವನ್ನು ಮಂತ್ರಿಯಾದ ಪತಿವ್ರೋಹಿಗೆ ತಿಳುಹಿಸಿ ದನು. ಸರ್ವಜ್ಞನಾದ ಮಂತ್ರಿಯು, 'ಜೀಯಾ! ತಮ್ಮ ಈ ಶರೀರವೇ ದಿವ್ಯವಾದ ಕಾಶೀಕ್ಷೇತ್ರ, ತಮ್ಮ ಪವಿತ್ರವಾದ ಹೃದಯವೇ ಆ ಶ್ರೀ ವಿಶ್ವೇಶ್ವರಮೂರ್ತಿಯ ನೆಲೆವೀಡು, ತಮ್ಮ ಪರಿಶುದ್ಧವಾದ ಶಿವಭಕ್ತಿಯೇ ಪಾವನವಾದ ಗಂಗಾತೀರ್ಥ; ಆದಾಗ್ಯೂ ತಮ್ಮಿಚ್ಛೆಯಂತೆ ಆ ದಿವ್ಯ ಗಂಗಾ ತೀರ್ಥವನ್ನು ಇಲ್ಲಿಗೇ ತರಿಸುತ್ತೇನೆ; ಶ್ರೀ ಸ್ವಾಮಿಯ ಕುಂಭಾಭಿಷೇಕವು ಇಲ್ಲಿಯೇ ನಡೆಯಲಿ, ಎಂದು ಬಿನ್ನವಿಸಿ, ನಮಸ್ಕರಿಸಿ, ಮಂಗಳವಾದ್ಯಗಳ ಸಮೇತ, ಏಳುನೂರು ಗಾವುದುದ್ದಕ್ಕೂ ಮಾಹೇಶ್ವರ ಸಮೂಹವನ್ನು ಸಾಲಾಗಿ ನಿಲ್ಲಿಸಿ ಸಹಸ್ರ ಸುವರ್ಣಘಟಗಳಿಂದ ಆ ಗಂಗಾತೀರ್ಥವನ್ನು ತರಿಸಿದನು. ಆನಂದಗೊಂಡ ರಾಜನು ಶುಚಿರ್ಭೂತನಾಗಿ, ಪರಮಭಕ್ತಿ ಯಿಂದ, ವಿಧಿಪೂರ್ವಕವಾಗಿ ಇಷ್ಟಲಿಂಗಸ್ವರೂಪಿಯಾದ ಶ್ರೀ ಸಾಂಬಸದಾ ಶಿವಮೂರ್ತಿಗೆ ವೈಭವದ ಅಭಿಷೇಕವನ್ನು ನಡೆಸಲು, ಭಕ್ತಿಯು ಉಕ್ಕಿಬಂದು ಶ್ರೀ ಗಿರಿಜಾರಮಣನನ್ನು ಹಾಡಿ-ಹೊಗಳಿ ತನ್ಮಯನಾಗಿ ಸ್ತೋತ್ರ ಮಾಡಿದನು.

ಒಂದಾನೊಂದುದಿನ ಅಮೃತಮತಿ ಮಹಾದೇವಿಯು ಪೂಜಾದಿಗಳನ್ನು ಮುಗಿಸಿಕೊಂಡು ಪುರಾಣಶ್ರವಣವನ್ನು ಮಾಡುತ್ತಿರಲು, ಮಾರ್ಕಂಡೇಯನ ಬಾಲಲೀಲೆಗಳ ವರ್ಣನೆಗಳನ್ನು ಕೇಳಿ, ತನಗೆ ಅಂತಹ ಸುಪುತ್ರನೋರ್ವನಿಲ್ಲವಲ್ಲಾ ! ಎಂದು ಮನದಲ್ಲಿಯೇ ಮರುಗುತ್ತಾ, ' ಪುತ್ರನಿಲ್ಲದ ಭಾಗ್ಯವು ಭಾಗ್ಯವೇ ಅಲ್ಲ, ಕುವರನಿಲ್ಲದ ಮನೆಯು ಮನೆಯೇ ಅಲ್ಲ, ಮಗನನ್ನು ಅಕ್ಕರೆಯಿಂದ ಬಿಗಿದಪ್ಪಿ ಒಲವಿನಿಂದ ಮಾತನಾಡಿಸಿ ಪ್ರೀತಿಯಿಂದ ಲಲ್ಲೆಮಾಡಿ ನಗಿಸಿ ಆಲಿಂಗಿಸಲು ಬಂದರೆ ದೂರ ನೂಕಿ, ಸಿಟ್ಟಾಗಲು ಮತ್ತೆ ಮೊಲೆಹಾಲುಣಿಸಿ, ತೊಟ್ಟಿಲಲ್ಲಿ ತೂಗಿ ಮಲಗಿಸಿ ಆನಂದಿಸುವ ತಾಯಿಯು ಯಾವ ಪವಿತ್ರ ವ್ರತವನ್ನಾಚರಿಸಿರಬೇಕು ? ಇಲ್ಲದಿದ್ದರೆ, ಆಕೆಗೆ ಇಂತಹ ಸುತನ ಸುಖವೆಲ್ಲಿಯದು ? ' ಎಂದು ಚಿಂತಿಸುತ್ತಿರುವಾಗ, ದುಃಖವುಮ್ಮಳಿಸಿಬರಲು ಅಲಂಕಾರಗಳನ್ನು ತೆಗೆದೊಗೆದು ಮಂಚದಮೇಲೆ ಮಲಗಿದಳು. ಇಷ್ಟರಲ್ಲಿ ರಾಜನು ದೇವಿಯ ದರ್ಶನಕ್ಕೆಂದು ಅಂತಃಪುರಕ್ಕೆ ಆಗಮಿಸಿದನು. ಅಳಲನ್ನು ಪ್ರಯಾಸದಿಂದ ತಡೆದು ಮೇಲೇಳಲುಪಕ್ರಮಿಸುತ್ತಿದ್ದ ರಾಣಿಯ ಕೈಹಿಡಿದು ಮಂಚದಮೇಲೆ ಕುಳಿತು, ಕಳೆಗುಂದಿದ ಆಕೆಯ ಮುಖಚಂದ್ರನನ್ನು ನಿರೀಕ್ಷಿಸಿ, ' ದೇವಿ ! ಮುಖಚಂದ್ರನ ಕಾಂತಿ ಕುಂದಿರಲು ಕಾರಣವೇನು ? ' ಎಂದು ಕೇಳಿದನು. ನಾಚಿ ತಲೆಬಾಗಿ ಕುಳಿತಿರಲು, ಆಕೆಯ ದೂತಿಯು ನಡೆದ ವೃತ್ತಾಂತವೆಲ್ಲವನ್ನೂ ತಿಳಿಸಿದಳು. ಆಗ ರಾಜನು, ' ಹೌದು ಪ್ರೀಯೇ ! ನನಗೂ ಸಹ ಅಂತಹ ಶಿವಭಕ್ತಿಸಂಪನ್ನನಾದೋರ್ವ ಸುಪುತ್ರನನ್ನು ಪಡೆಯಬೇಕೆಂಬ ಬಯಕೆಯಿದೆ ' ಎಂದು ಪತ್ನಿಗೆ ಹೇಳಲು, ದೇವಿಯು, ' ಸ್ವಾಮಿ ! ಅರ್ಭಕನಾಡದ ಅಂಗಳ ಮಂಜುಳವಲ್ಲ, ಅಂತಹ ಸುಕುಮಾರನೋರ್ವನನ್ನು ಪಡೆಯಲು ನನ್ನ ಮನಸ್ಸು ಬಯಸಿದೆ, ಎಂದು ಹೇಳಿದಳು. ರಾಜನು ರಾಣಿಯನ್ನು ಅನೇಕ ಹಿತೋಕ್ತಿಗಳಿಂದ ಸಮಾಧಾನಪಡಿಸುತ್ತಾ, ' ಸರಸಿಜಾನನೆ ! ನಮ್ಮ ಗುರುವು ಕರುಣಿಸಿದರೆ, ಆತನ ವರಪ್ರಸಾದದಿಂದ ಅಂತಹ ಪುತ್ರರತ್ನವನ್ನೇ ನೀನೂ ಪಡೆಯಬಲ್ಲೆ, ಚಿಂತಿಸದೆ ನಿನ್ನ ಮನಸ್ಸನ್ನು ಶಿವಪೂಜೆಯಲ್ಲಿ ತೊಡಗಿಸು ' ಎಂದು ಹೇಳಿ ಅಲ್ಲಿಂದ ಹೊರಟನು.

ಇವರ ಮನೋರಥವನ್ನು ನೆರವೇರಿಸಲು ಸಾಕ್ಷಾತ್ ಪರಶಿವನೇ

ಮೂರ್ತಿವೆತ್ತು ಬಂದಂತೆ ಕುಲಗುರುವಾದ ಚಿದ್ಘನಶಿವಾಚಾರ್ಯರು ಮುಂದೊಂದುದಿನ ಅರಮನೆಗೆ ದಯಮಾಡಿಸಿದರು. ಅವರನ್ನು ಅಪಾರ ವೈಭವಗಳಿಂದ ಎದುರ್ಗೊಂಡು, ತಮ್ಮ ಭಕ್ತಿ-ವೈಭವಗಳಿಗನುಗುಣವಾಗಿ ಶ್ರೀಗುರುವಿನ ಪಾದಾರವಿಂದಗಳ ಸೇವೆಯನ್ನು ದಂಪತಿಗಳೀರ್ವರೂ ನೆರವೇರಿಸಿದರು. ಪ್ರಸಾದ ಪಾದೋದಕಗಳನ್ನು ಸೇವಿಸಿ ಅಮಿತ ಶಿವಾನಂದಿಗಳಾದರು. ಇವರ ಭಕ್ತಿ-ಶ್ರದ್ಧೆಗಳಿಗೆ ಪ್ರಸನ್ನನಾದ ಗುರುವು ಇಷ್ಟಾರ್ಥವನ್ನು ಬೇಡಬಹುದೆಂದು ಕೇಳಿದ್ದಾಗ, ಆ ದಂಪತಿಗಳು ತಮಗೆ ಸಂತಾನವಿಲ್ಲದ ದುಃಖವನ್ನು ಮರೆತು, "ಶ್ರೀಪರಶಿವನ ಪಂಚವಿಂಶತಿಲೀಲೆಗಳನ್ನು ಶ್ರೀಗುರುವು ಕೃಪೆಮಾಡಿ ಅಪ್ಪಣೆಕೊಡಿಸಬೇಕು" ಎಂದು ಪ್ರಾರ್ಥಿಸಿದರು. ಇವರ ಶಿವಭಕ್ತಿಗೆ ತಲೆದೂಗಿ ಗುರುವರನು ಇವರ ಪ್ರಾರ್ಥನೆಯಂತೆ ಲೀಲಾಮಯಮೂರ್ತಿಯಾದ ಶ್ರೀಪರಶಿವನ ಪಂಚವಿಂಶತಿ (೨೫) ಲೀಲೆಗಳನ್ನು ವಿವರಿಸತೊಡಗಿದನು.

## ೨. ಪರಶಿವನ ಪಂಚವಿಂಶತಿಲೀಲೆಗಳು

### ೧. ಚಂದ್ರಧರಲೀಲೆ

ಜಗದಾದಿಯಲ್ಲಿ ರೂಪುನಾಮರಹಿತನಾದ ಪರಮಾತ್ಮನು ಸತ್ತ್ವರಜಸ್ತಮೋಗುಣಸ್ವರೂಪಳಾದ ತನ್ನ ಮೂಲಪ್ರಕೃತಿಯ ಸಹಾಯದಿಂದ ಪಂಚಭೂತಗಳನ್ನೂ, ಬ್ರಹ್ಮ-ವಿಷ್ಣು ಮತ್ತು ರುದ್ರರನ್ನೂ ಸೃಷ್ಟಿಸಿ, ಬ್ರಹ್ಮನಿಗೆ ಸೃಷ್ಟಿಕಾರ್ಯವನ್ನೂ, ವಿಷ್ಣುವಿಗೆ ರಕ್ಷಣಾಕಾರ್ಯವನ್ನೂ ವಹಿಸಿಕೊಟ್ಟು ರುದ್ರನಿಗೆ ಸ್ಥಿರಪಟ್ಟವನ್ನು ಕಟ್ಟಿ ಸೃಷ್ಟಿ-ಸ್ಥಿತಿ-ಸಂಹಾರಾದಿಕಾರ್ಯಗಳನ್ನು ನೋಡಿಕೊಳ್ಳುವಂತೆ ಅವರನ್ನು ನಿಯಮಿಸಿದನು. ಮಹೇಶನ ಅಪ್ಪಣೆಯಂತೆ ಬ್ರಹ್ಮನು ಸೃಷ್ಟಿಯಲ್ಲಿ ತೊಡಗಿ ಮೊಟ್ಟಮೊದಲು ಸನಕ-ಸನಂದ-ಸನತ್ಕುಮಾರ-ಸನಸ್ಸುಜಾತ ಮತ್ತು ಸನಾತನರೆಂಬ ಐವರು ಮಾನಸಪುತ್ರರನ್ನು ಪಡೆದು ಅವರನ್ನು ಸೃಷ್ಟಿಕಾರ್ಯಮಾಡಲು ಆಜ್ಞಾಪಿಸಿದನು. ಮೋಕ್ಷಾಪೇಕ್ಷಿಗಳಾದ ಇವರು "ನಮ್ಮಿಂದ ಆ ಕಾರ್ಯವಾಗದು" ಎಂದು ಹೇಳಿ ತಪಸ್ಸಿಗೆ ಹೊರಟುಹೋದರು.

ಅನಂತರ ಬ್ರಹ್ಮನು ಪರಶಿವನನ್ನು ಕುರಿತು ಉಗ್ರತಪಸ್ಸು ಮಾಡಿದನು. ಶಿವನು ಪ್ರತ್ಯಕ್ಷನಾಗಿ, ನಿನ್ನ ಶರೀರದಿಂದಲೇ ಪುತ್ರರನ್ನು ಪಡೆದು ಅವರಿಂದ ಕಾರ್ಯವನ್ನು ಮಾಡಿಸು ಎಂದಪ್ಪಣೆಮಾಡಿ ಅಂತರ್ಧಾನನಾದನು. ಆಗ ಬ್ರಹ್ಮನು ಮನಸ್ಸಿನಿಂದ ಮರೀಚಿಯನ್ನೂ, ಕಣ್ಣಿನಿಂದ ಅತ್ರಿಯನ್ನೂ, ಮುಖದಿಂದ ಅಂಗೀರಸನನ್ನೂ, ಕಿವಿಯಿಂದ ಪುಲಸ್ತ್ಯನನ್ನೂ, ನಾಭಿಯಿಂದ ಪುಲಹನನ್ನೂ, ಕೈಯಿಂದ ಕ್ರತುವನ್ನೂ, ಚರ್ಮದಿಂದ ಭೃಗುವನ್ನೂ, ಪ್ರಾಣದಿಂದ ವಸಿಷ್ಠನನ್ನೂ ಮತ್ತು ಅಂಗುಷ್ಠದಿಂದ ದಕ್ಷನನ್ನೂ ಸೃಷ್ಟಿಸಿದನು. ಇವರಿಗೆ ಸೃಷ್ಟಿಮಾಡಲು ಹೇಳಿದಾಗ, ಆಗ ಇವರೆಲ್ಲರೂ ನಮಗೆ ಆ ಕಾರ್ಯವನ್ನು ಮಾಡಲು ಶಕ್ತಿಸಾಲದು ಎಂದು ಹೇಳಿದರು. ಇದರಿಂದ ಚಿಂತಾಮಗ್ನನಾದ ಬ್ರಹ್ಮನು ಶಿವನ ಕ್ರಿಯಾಶಕ್ತಿಯನ್ನು ಧ್ಯಾನಿಸತೊಡಗಿದನು. ಅವನ ಧ್ಯಾನಕ್ಕೆ ಮೆಚ್ಚಿ ಶಕ್ತಿಯು ಪ್ರತ್ಯಕ್ಷಳಾದಳು. ಬ್ರಹ್ಮನು ನಮಸ್ಕರಿಸಿ, ದೇವಿ! ನೀನು ಪರಶಿವನಲ್ಲಿ ಬೆರೆತಿರುವವರೆವಿಗೂ ನಾನು ಸೃಷ್ಟಿಕಾರ್ಯಮಾಡಲು ಸಾಧ್ಯವಿಲ್ಲವಾಗಿದೆ. ಆದ್ದರಿಂದ

ನೀನೇ ನನ್ನ ಈ ಪುತ್ರರಲ್ಲೊಬ್ಬನಿಗೆ ಮಗಳಾಗಿ ಜನಿಸಿ ಪರಶಿವನಿಗೆ ಪತ್ನಿಯಾದರೆ, ಆಗ ನಮ್ಮಲ್ಲಿರುವ ಶಕ್ತಿಯರೂ ಸ್ತ್ರೀಯರಾಗಿ ಜನಿಸುವರು. ಇದರಿಂದ ನನ್ನ ಸೃಷ್ಟಿಕಾರ್ಯ ಸುಲಭವಾಗುತ್ತದೆ. ಅದರಂತೆ ಕರುಣಿಸಬೇಕು ಎಂದು ಪ್ರಾರ್ಥಿಸಿದನು. ಅದಕ್ಕನುಮತಿಸತಕ್ಕವಳಾಗಿ ದೇವಿಯು ಬ್ರಹ್ಮನಿಗೆ, ನಿನ್ನ ವರಶಕ್ತಿಯನ್ನು ಹೊರಗೆಡಹಿ, ಸರಸ್ವತಿಯೆಂಬ ಹೆಸರುಳ್ಳ ಆಕೆಯನ್ನು ಪತ್ನಿಯನ್ನಾಗಿ ಪಡೆದು ಅವಳೊಡನೆ ಸೃಷ್ಟಿಕಾರ್ಯವನ್ನು ಮಾಡು; ನಿನ್ನಿಷ್ಟದಂತೆ ನಾನೂ ಅವತರಿಸುವೆನು ಎಂದಭಯವಿತ್ತು ಅಂತರ್ಧಾನಳಾದಳು.

ಅನಂತರ ಬ್ರಹ್ಮನು ತನ್ನ ವರಶಕ್ತಿಯನ್ನು ಸರಸ್ವತಿಯನ್ನಾಗಿ ನಿರ್ಮಿಸಿ ಅವಳಿಂದ ಸ್ವಯಂಭು-ಶತರೂಪೆ ಎಂಬ ದಂಪತಿಗಳನ್ನು ನಿರ್ಮಾಣ ಮಾಡಿಸಿದನು. ಈ ದಂಪತಿಗಳಿಗೆ ಪ್ರಿಯವ್ರತ, ಉತ್ತಾನಪಾದ ಎಂಬಿಬ್ಬರು ಗಂಡು ಮಕ್ಕಳೂ, ಆಕೂತಿ, ದೇವಹೂತಿ ಮತ್ತು ಪ್ರಸೂತಿ ಎಂಬ ಮೂವರು ಹೆಣ್ಣು ಮಕ್ಕಳೂ ಜನಿಸಿದರು. ದಕ್ಷಬ್ರಹ್ಮನು ಪ್ರಸೂತಿಯನ್ನು ಮದುವೆಯಾಗಿ ಅನೇಕ ಕನ್ಯೆಯರನ್ನು ಪಡೆದು ಅವರಲ್ಲಿ ಕೆಲವರನ್ನು ಧರ್ಮ-ಕಶ್ಯಪ ಮುಂತಾದವರಿಗೂ, ಉಳಿದ ಅಶ್ವಿನಿ ಮುಂತಾದ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೂ ವಿವಾಹಮಾಡಿಕೊಟ್ಟನು. ಚಂದ್ರನು ಎಲ್ಲರಲ್ಲೂ ಮೊದಮೊದಲು ಸಮಾನಾನುರಾಗದಿಂದಿದ್ದನಾದರೂ, ಕ್ರಮಕ್ರಮವಾಗಿ ರೋಹಿಣಿಯೆಂಬುವಳಲ್ಲಿ ಮಾತ್ರವೇ ಹೆಚ್ಚು ಪ್ರೀತಿಯಿಂದಿರತೊಡಗಿದನು. ಇದನ್ನು ತಿಳಿದ ಬ್ರಹ್ಮನು ಚಂದ್ರನಿಗೆ ಬಹುವಿಧವಾಗಿ ನೀತಿ ಹೇಳಿದನು. ಆದರೂ ಅವನು ಕೇಳಲಿಲ್ಲ. ಕೋಪಗೊಂಡ ಬ್ರಹ್ಮನು ನಿನ್ನ ಕಲೆಗಳೆಲ್ಲಾ ನಾಶವಾಗಲಿ ಎಂದು ಶಪಿಸಿದನು. ಬ್ರಹ್ಮನ ಶಾಪದಂತೆ ಚಂದ್ರನ ಕಲೆಗಳೆಲ್ಲಾ ಕ್ರಮಕ್ರಮವಾಗಿ ದಿನಗಳೆದಂತೆ ಕಡಿಮೆಯಾಗುತ್ತಾ ಬಂದವು. ಇದರಿಂದ ದುಃಖಗೊಂಡ ಚಂದ್ರನು ಶಿವನನ್ನು ಪ್ರಾರ್ಥಿಸಿದನು. ದಯಾಮಯನಾದ ಶಂಕರನು ಚಂದ್ರನನ್ನು ತನ್ನ ಶಿರಸ್ಸಿನಲ್ಲಿ ಧರಿಸಿ ಚಂದ್ರನನ್ನುದ್ಧರಿಸಿ ಚಂದ್ರಶೇಖರನೆನಿಸಿದನು.

## ೨. ಉಮಾಮಹೇಶ್ವರಲೀಲೆ

ಬ್ರಹ್ಮನಿಗೆ ತಾನು ಕೊಟ್ಟ ಅಭಯವಚನದಂತೆ ಶಿವನ ಶಕ್ತಿಯು ದಕ್ಷಬ್ರಹ್ಮ-ಪ್ರಸೂತಿಯರಿಗೆ ಮಗಳಾಗಿ ಜನಿಸಿದಳು. ಬ್ರಹ್ಮನು 'ಉಮಾ' ಎಂದು ನಾಮಕರಣಮಾಡಿದನು. ಉಮೆಯು ಶಿವನಚೈತನ್ಯವೇ ಬೆಳೆಯುತ್ತಿರುವಂತೆ ಬೆಳೆದು ಎಲ್ಲರನ್ನೂ ಸಂತೋಷಗೊಳಿಸುತ್ತಿದ್ದಳು. ಈಕೆಯು ಶಿವನಪ್ರಸಾದವನ್ನಲ್ಲದೆ ಮತ್ತೇನನ್ನೂ ಮುಟ್ಟುತ್ತಿರಲಿಲ್ಲ. ಹೀಗೆ ಬೆಳೆದ ದಾಕ್ಷಾಯಣಿಯು ಕ್ರಮವಾಗಿ ಸಕಲ ವಿದ್ಯಾಪಾರಂಗತಳಾದಳು. ದಿನಗಳು ಉರುಳಿದಂತೆ ಈಕೆಯ ದೇಹಕಾಂತಿಯೂ ಶುಕ್ಲಪಕ್ಷದ ಚಂದ್ರನ ಕಾಂತಿಯಂತೆ ವೃದ್ಧಿಹೊಂದುತ್ತಿತ್ತು. ಜಗತ್ತನ್ನೇ ವಿಸ್ಮಯಗೊಳಿಸುವ ಸೌಂದರ್ಯರಾಶಿಯಿಂದ ಎಲ್ಲರ ಮನಸ್ಸನ್ನೂ ಸೂರೆಗೊಳ್ಳುತ್ತಿದ್ದಳು. ಗುರುಹಿರಿಯರ ಸೇವೆ, ವ್ರತ-ಉಪವಾಸಾದಿಗಳ ಆಚರಣೆ ಮುಂತಾದವುಗಳಿಂದ ತನ್ನ ಅಂತಃಶಕ್ತಿಯನ್ನು ಇನ್ನೂ ಹೆಚ್ಚಿಸಿಕೊಂಡಳು.

ಇಷ್ಟರಲ್ಲಿ ದಕ್ಷಬ್ರಹ್ಮನು ಪ್ರಾಪ್ತವಯಸ್ಕಳಾದ ಈಕೆಗೆ ವಿವಾಹ ಮಾಡಬೇಕೆಂದು ಬಯಸಿದನು. ಈಕೆಗೆ ಈಶ್ವರನೇ ಯೋಗ್ಯನಾದ ವರನೆಂದು ತಿಳಿದ ಬ್ರಹ್ಮನು ಶಿವನನ್ನು ಕುರಿತು ಉಗ್ರವಾದ ತಪಸ್ಸು ಮಾಡಿದನು. ಈತನ ಮನೋಭೀಷ್ಟವನ್ನರಿತ ಪರಶಿವನು ಪ್ರತ್ಯಕ್ಷನಾಗಿ, ಉಮೆಯನ್ನು ಸ್ವೀಕರಿಸಬೇಕೆಂಬ ಬ್ರಹ್ಮನ ಪ್ರಾರ್ಥನೆಯನ್ನಂಗೀಕರಿಸಿ ಅಂತರ್ಧಾನನಾದನು. ಈ ವೃತ್ತಾಂತವನ್ನು ತನ್ನ ಪುತ್ರನಾದ ದಕ್ಷಬ್ರಹ್ಮನಿಗೆ ತಿಳಿಸಿ ವಿವಾಹಕ್ಕೆ ಸಕಲಸಿದ್ಧತೆಗಳನ್ನು ಮಾಡಿಸಿದನು. ಜಗನ್ನಿಯಾಮಕನೇ ತನ್ನ ಅಳಿಯನಾಗುವನೆಂದರಿತ ದಕ್ಷಬ್ರಹ್ಮನು ತನ್ನ ಎಲ್ಲ ಅಳಿಯಂದಿರೊಡನೆ ಪರಶಿವನನ್ನು ಹೆಚ್ಚು ವೈಭವಾದರಾದಿಗಳಿಂದ ಎದುರ್ಗೊಂಡು ಸನ್ಮಾನಿಸಿ ಶುಭಮುಹೂರ್ತದಲ್ಲಿ ವಿಧಿವತ್ತಾಗಿ ತನ್ನ ಪುತ್ರಿಯನ್ನು ಕನ್ಯಾದಾನಮಾಡಿ ಅಳಿಯನಿಗೆ ಅಖಂಡವಾದ ಶ್ರೇಷ್ಠವಸ್ತುಗಳನ್ನು ಬಳುವಳಿಯಾಗಿತ್ತನು. ಈ ಎಲ್ಲವನ್ನೂ ಪರಿಗ್ರಹಿಸಿದ ಪರಮೇಶ್ವರನು ಎಲ್ಲರನ್ನೂ ಆಶೀರ್ವದಿಸಿ ಸತಿಯೊಡನೆ ಕೈಲಾಸಕ್ಕೆ ಬಂದು ಉಮಾಮಹೇಶ್ವರನೆನಿಸಿ ವಿಜೃಂಭಿಸಿದನು.

## ೩. ವೃಷಭವಾಹನಲೀಲೆ

(ಅ) ಚತುರ್ದಶ ಭುವನಗಳನ್ನು ತನ್ನ ಉದರದಲ್ಲಿ ಧರಿಸಿರುವ ಪರಮೇಶ್ವರನು ತನ್ನೀಭಾರವನ್ನು ಹೊರಬಲ್ಲವರು ಯಾರೂ ಇಲ್ಲವೆಂದು ಚಿಂತಿಸಿ ತನ್ನನ್ನು ಹೊರಲು ತನ್ನ ಸದ್ಧರ್ಮವೇ ಸಮರ್ಥವೆಂದು ಬಗೆದು ಅದನ್ನೇ ಮನದಲ್ಲಿ ನೆನೆದನು. ಕೂಡಲೇ ಶಿವನ ಆ ಧರ್ಮವು ಸಮಸ್ತ ರೂಪಿನಿಂದಲೂ ಹೊರಬಂದು ಅಪ್ಪಣೆಯೇನೆಂದು ಪ್ರಾರ್ಥಿಸಲು, ಪರಶಿವನು 'ಧರ್ಮಸ್ವರೂಪನೇ! ನನ್ನ ಗರ್ಭದಲ್ಲಿ, ಹದಿನಾಲ್ಕು ಲೋಕಗಳು ಅಡಗಿರುತ್ತವೆ. ಈ ಲೋಕಗಳ ಭಾರಸಹಿತ ನನ್ನನ್ನು ಹೊರತಕ್ಕ ಸಾಮರ್ಥ್ಯವುಳ್ಳವರು ಯಾರೂ ಇಲ್ಲವಾಗಿ, ನನ್ನ ಧರ್ಮಸ್ವರೂಪನಾಗಿರುವ ನಿನ್ನನ್ನೇ ನೆನೆದೆನು. ಇದಕ್ಕಾಗಿ ನೀನೇ ಸಮರ್ಥನಾಗಿರುವೆಯಾದ್ದರಿಂದ ನನಗೆ ನೀನು ವಾಹನವಾಗಬೇಕು' ಎಂದಪ್ಪಣೆಮಾಡಿದನು. ಆಕ್ಷಣವೇ ಶಿವನ ಆ ಸದ್ಧರ್ಮವು ವೃಷಭನ ಆಕಾರವನ್ನು ತಾಳಿತು. ನಾಲ್ಕು ವೇದಗಳೇ ನಾಲ್ಕು ಪಾದಗಳು, ಆರು ಶಾಸ್ತ್ರಗಳೇ ಷಟ್ಕರಣ (ಆರು ಇಂದ್ರಿಯ)ಗಳು, ಓಂಕಾರ ಪ್ರಣವವೇ ಶಿರಸ್ಸು, ಮಹಾಮಂತ್ರ ಮಾತೆಯಾದ ಶಿವಪಂಚಾಕ್ಷರಿಯೇ ಮುಖ, ಗಂಧರ್ವವೇದ-ಧನುರ್ವೇದಗಳೇ ಎರಡೂ ಕಿವಿಗಳು, ತೀರ್ಥಸಮೂಹವೇ ಬಾಲ, ಶಿವಾಗಮಗಳೇ ಪ್ರಾಣಗಳು, ಈ ಮುಂತಾದ ದಿವ್ಯಸ್ವರೂಪಗಳನ್ನುಳ್ಳ ವೃಷಭನನ್ನು ನೋಡಿ ಸಂತೋಷಗೊಂಡು ಪರಮೇಶ್ವರನು ನನ್ನನ್ನಗಲದೆ ಸದಾಕಾಲವೂ ನನ್ನ ಸಾನ್ನಿಧ್ಯದಲ್ಲಿ ಇರಬೇಕು ಎಂದಾಜ್ಞಾಪಿಸಿ ಜಗನ್ಮಾತೆಯೊಂದಿಗೆ ಆ ವೃಷಭವನ್ನೇರಿ ವೃಷಭವಾಹನನೆನಿಸಿದನು.

(ಆ) ಮತ್ತೊಂದು ಕಲ್ಪದಲ್ಲಿ, ರಾಕ್ಷಸರ ಸಂಹಾರಕ್ಕಾಗಿ ಶ್ರೀವಿಷ್ಣುವು ಶಿವನಲ್ಲಿದ್ದ ಜಲಂಧರ ಸಂಹಾರಕ ಚಕ್ರವನ್ನು ಪಡೆಯ ಬಯಸಿ ಉಗ್ರವಾದ ತಪಸ್ಸುಮಾಡತೊಡಗಿದನು. ಈತನ ತಪೋಜ್ವಾಲೆಯು ಸಕಲಜಗತ್ತನ್ನೂ ದಹಿಸಲು ಪ್ರಾರಂಭಿಸಲು, ದಿವ್ಯದೃಷ್ಟಿಯಿಂದರಿತ ಪರಮಾತ್ಮನು ವಿಷ್ಣುವಿಗೆ ಪ್ರತ್ಯಕ್ಷನಾಗಿ ವರವೇನೆಂದು ಪ್ರಶ್ನಿಸಿದನು. ಅದಕ್ಕೆ ವಿಷ್ಣುವು, ದೇವಾ! ರಾಕ್ಷಸರನ್ನು ಸಂಹರಿಸಿ ಲೋಕಸಂರಕ್ಷಣೆಯನ್ನು ನಡೆಸಬೇಕಾಗಿರುವುದರಿಂದ ದುಷ್ಟಶಿಕ್ಷೆಗಾಗಿ ನಿನ್ನಲ್ಲಿರುವ ಜಲಂಧರ ಸಂಹಾರಕ ಚಕ್ರವನ್ನು ದಯ

ಪಾಲಿಸು ಎಂದು ಬೇಡಿದನು. ಅದರಂತೆ ಶಂಕರನು ನೀಡಲು, ವಿಷ್ಣುವು ಚಕ್ರಬಲದಿಂದ ಲೋಕಸಂರಕ್ಷಣೆಮಾಡುತ್ತಾ ಅಹಂಕಾರಿಯಾಗಿದ್ದನು. ಒಂದುಸಾರಿ ಶಿವಭಕ್ತಶ್ರೇಷ್ಠನಾದ ದಧೀಚಿಮಹರ್ಷಿಯೊಡನೆ ಯುದ್ಧ ಮಾಡುತ್ತಿರುವಾಗ ಮುನಿಯ ಪ್ರಭಾವವನ್ನರಿಯದೆ ಆತನ ಮೇಲೆ ಚಕ್ರ ವನ್ನು ಪ್ರಯೋಗಿಸಿದನು. ಅಪಾರವಾದ ಶಿವತೇಜಸ್ಸುಳ್ಳ ಆ ಮುನಿಯು ಕೂಡಲೇ ಆ ಚಕ್ರವನ್ನು ನಾಶಮಾಡಿದನು. ಇದರಿಂದ ನಿರಹಂಕಾರಿಯಾದ ವಿಷ್ಣುವು ತನ್ನ ತಪ್ಪನ್ನರಿತು, ಪುನಃ ಆ ಚಕ್ರವನ್ನು ಪಡೆಯಬೇಕೆಂದಾಶಿಸಿ ಶಿವನನ್ನು ಪೂಜಿಸುತ್ತಾ ತನ್ನ ನೇತ್ರಕಮಲವನ್ನೇ ಶಿವನಪಾದಕ್ಕರ್ಪಿಸಿ ಪ್ರತ್ಯಕ್ಷಮಾಡಿಕೊಂಡು ಪುನಃ ಚಕ್ರವನ್ನು ಪಡೆದನಲ್ಲದೆ, 'ಸ್ವಾಮಿ! ಇನ್ನುಮುಂದೆ ನಿನ್ನ-ವಿಷಯದಲ್ಲಿ ಮತ್ತು ನಿನ್ನ ಭಕ್ತರ ವಿಷಯದಲ್ಲಿ ನನಗಹಂಕಾರವುಂಟಾಗದಂತೆ ಅನುಗ್ರಹಿಸು' ಎಂದು ಬೇಡಿದನು. ಆಗ ಶಂಕರನು ನನ್ನ ಸದ್ಧರ್ಮಾಂಶನಾದ ಈ ವೃಷಭನಂತೆ ನೀನೂ ಸಹ ಇಂತಹ ಪವಿತ್ರಾಕಾರವನ್ನು ಹೊಂದಿ ನನ್ನ ಧ್ವಜದಲ್ಲಿ ನೆಲಸಿರು' ಎಂದಪ್ಪಣೆ ಮಾಡಿ ಅಂತೆಯೇ ವೃಷಭರೂಪಿಯಾದ ವಿಷ್ಣುವನ್ನು ತನ್ನ ಧ್ವಜದಲ್ಲಿ ಧರಿಸಿ ವೃಷಭಧ್ವಜನೆನಿಸಿದನು.

## ೪. ತಾಂಡವೇಶ್ವರಲೀಲೆ

(ಅ) ಸೃಷ್ಟಿ-ಸ್ಥಿತಿ-ಲಯಾದಿ ಕಾರಣನಾದ ಪರಮಾತ್ಮನು ಪ್ರಳಯ ಕಾಲದಲ್ಲಿ ತಾನೇ ಸಂಹಾರಮೂರ್ತಿಯಾಗಿ ಸಕಲ ಜೀವರಾಶಿಗಳನ್ನೂ, ವಿಷ್ಣು ಬ್ರಹ್ಮೇಂದ್ರಾದಿ ಸಕಲ ದೇವತೆಗಳನ್ನೂ ಸಂಹರಿಸಿ (ತನ್ನಲ್ಲಡಗಿಸಿ), ತನ್ನ ಸಂಹಾರಶಕ್ತಿಯೊಂದಿಗೆ ತಾನೇತಾನಾಗಿ ನರ್ತಿಸುತ್ತಾನೆ. ಅನಂತರ ಪೂರ್ವದಂತೆ ಪುನಃ ಎಲ್ಲವನ್ನೂ ಸೃಷ್ಟಿಸುತ್ತಾನೆ. ಹೀಗೆ ಪ್ರಳಯಕಾಲದಲ್ಲಿ ರುದ್ರನು ಆಚರಿಸುವ ಈ ನರ್ತನವೇ ತಾಂಡವವೆನಿಸಿ, ಶಂಕರನು ತಾಂಡವೇಶ್ವರನೆನಿಸಿದ್ದಾನೆ.

(ಆ) ಪೂರ್ವಕಾಲದಲ್ಲಿ ಅಂಧಕಾಸುರನು ಭೂಮಂಡಲವನ್ನೆಲ್ಲ ತನ್ನ ಪರಾಕ್ರಮದಿಂದ ವಶಪಡಿಸಿಕೊಂಡು, ಇಂದ್ರಾದಿ ಅಷ್ಟದಿಕ್ಪಾಲಕರನ್ನು ಗೆದ್ದು, ಬ್ರಹ್ಮಲೋಕ-ವಿಷ್ಣುಲೋಕಗಳನ್ನೂ ಸ್ವಾಧೀನಮಾಡಿಕೊಂಡು,

ಮುಂದೆ ಮಾಡಬೇಕಾದ ಕಾರ್ಯವನ್ನು ಕುರಿತು ಸಭೆಯಲ್ಲಿ ವಿಚಾರ ಮಾಡುತ್ತಿರುವಾಗ ನಾರದಮುನಿಗಳು ಅಲ್ಲಿಗೆ ಬಂದರು. ಉಚಿತಮರ್ಯಾದೆ ಗಳೊಂದಿಗೆ ಅವರನ್ನು ಸ್ವಾಗತಿಸಿ ಉನ್ನತಾಸನದಲ್ಲಿ ಕೂಡ್ರಿಸಿದನು. ಸಂತೋಷಗೊಂಡ ಮುನಿಗಳು, ರಾಜೇಂದ್ರ ! ನೀನೀಗ ಸಮಸ್ತಲೋಕಕ್ಕೂ ಅಧಿಪತಿಯಾಗಿರುವೆ ; ಆದರೆ, ನಿನ್ನಿಂದ ಪರಾಜಿತರಾದ ಆ ಇಂದ್ರಾದಿಗಳೆಲ್ಲರೂ ಪರಮೇಶ್ವರನಲ್ಲಿಗೆ ಹೋಗಿ ನಿನ್ನೊಡನೆ ಯುದ್ಧಕ್ಕೆ ಅವನನ್ನು ಪ್ರೇರಿಸು ತ್ತಿದ್ದಾರೆ. ಕಾಲವು ಮಿಂಚುವುದಕ್ಕೆ ಮುನ್ನವೇ ನಿನ್ನನ್ನೆಚ್ಚರಿಸಲು ಬಂದೆನು. ಎಂದು ಹೇಳಿ ಹೊರಟುಹೋದರು. ಕೂಡಲೇ ಸಕಲ ಸೈನ್ಯದೊಡನೆ ಅಂಧಕಾಸುರನು ಕೈಲಾಸಕ್ಕೆ ಹೊರಡಲನುವಾದನು. ಅಷ್ಟರಲ್ಲಿ ಈತನ ಚಿಕ್ಕಪ್ಪನ ಮಗನಾದ ಪ್ರಹ್ಲಾದನು ಈತನ ಬಳಿ ಬಂದು, ಅನುಜ! ಜಗದೊಡೆಯನಾದ ಪರಮೇಶ್ವರನೊಡನೆ ವೈರವನ್ನು ಸಾಧಿಸಬೇಡ, ನಿನ್ನ ತಂದೆಯನ್ನೂ ಮತ್ತು ನನ್ನ ತಂದೆಯನ್ನೂ ಸಂಹರಿಸಿದ ವರಾಹ ಮತ್ತು ನೃಸಿಂಹಮೂರ್ತಿಗಳನ್ನೇ ಸಂಹರಿಸಲಿಲ್ಲವೇ ಈ ಶಂಕರನು ? ಅಲ್ಲದೆ, ನೀನು ಶಂಕರನ ವರಪುತ್ರನಾಗಿರುವೆ. ಹೇಗೆಂದರೆ, ಒಂದುಸಾರಿ ಜಗನ್ಮಾತೆಯು ಲೀಲೆಗೋಸ್ಕರ ಶಂಕರನ ಕಣ್ಣುಗಳನ್ನು ಮುಚ್ಚಿದಳು. ಸೂರ್ಯಚಂದ್ರರೇ ಅವನ ಕಣ್ಣುಗಳಾದ್ದರಿಂದ ಜಗತ್ತಿನಲ್ಲಿ ಗಾಢಾಂಧಕಾರವೇ ಆವರಿಸಿತು. ಮತ್ತೆ ಆಕೆ ಕೈತೆಗೆಯಲು ಬೆಳಕು ಹಬ್ಬಿ ಮೊದಲಿದ್ದ ಅಂಧಕಾರವೆಲ್ಲಾ ಒಂದುಗೂಡಿ ಶಿಶುರೂಪವನ್ನು ತಾಳಿದ ಆ ನೀನೇ ಶಿವನ ಸಮಿಾಪದಲ್ಲಿ ನಿಂತಿರಲು, ಆ ವೇಳೆಯಲ್ಲೇ ನಿನ್ನ ತಂದೆಯೂ ಸಂತಾನಕ್ಕಾಗಿ ಶಿವನನ್ನು ಕುರಿತು ತಪಸ್ಸು ಮಾಡುತ್ತಿರಲಾಗಿ, ನಿನ್ನನ್ನೇ ಶಂಕರನು ನಿಮ್ಮ ತಂದೆಗೆ ಮಗನನ್ನಾಗಿ ದಯಪಾಲಿಸಿದನು. ಹೀಗೆ ತಂದೆಯಾದ ಆತನೊಡನೆ ನಿನಗೆ ಯುದ್ಧವು ಸರಿಯಲ್ಲ. ನಮ್ಮೆಲ್ಲರ ಸೌಖ್ಯಕ್ಕೆ ಆತನೇ ಕಾರಣನಲ್ಲವೇ? ಯೋಚಿಸು ' ಎಂದು ಮುಂತಾಗಿ ಎಷ್ಟು ಹೇಳಿದರೂ ಕೇಳದೆ ಅಹಂಕಾರ ಮತ್ತನಾಗಿ ಹೊರಟೇಬಿಟ್ಟನು.

ಕೈಲಾಸದಲ್ಲಿ ದೇವಾಸುರರ ಯುದ್ಧವು ಪ್ರಾರಂಭವಾಯ್ತು. ಕ್ರಮ ಕ್ರಮವಾಗಿ ರಾಕ್ಷಸರ ಕೈ ಕುಗ್ಗಲು, ಆಯುಧಪಾಣಿಯಾಗಿ ಅಂಧಕಾಸುರನೇ ಮುನ್ನುಗ್ಗಿಬಂದನು. ದೇವಸೈನ್ಯವನ್ನು ಭೇದಿಸಿಕೊಂಡು ಶಿವನೆಡೆಗೆ

ಧಾವಿಸಿ ಶಿವನಮೇಲೆ ಅಪಾರವಾಗಿ ಬಾಣಗಳ ಮಳೆಯನ್ನೇ ಸುರಿಸಿದನು. ಶಂಕರನು ಇವನ ಧನುಸ್ಸನ್ನೇ ಕತ್ತರಿಸಿ ತನ್ನ ತ್ರಿಶೂಲದಿಂದ ತಿವಿದು ಮೇಲೆತ್ತಿದನು. ತ್ರಿಶೂಲದ ಸಂಸರ್ಗದಿಂದ ಅಂಧಕಾಸುರನಿಗೆ ಜ್ಞಾನೋದಯವಾಗಿ ಶಂಕರನನ್ನು ಪ್ರಾರ್ಥಿಸತೊಡಗಿದನು. ಕರುಣಾಕರನು ಈತನ ಸ್ತೋತ್ರಕ್ಕೆ ಮೆಚ್ಚಿ ಬೇಕಾದ ವರವನ್ನು ಬೇಡಲು ಹೇಳಿದನು. ಆಗ ಆ ಅಸುರನು, 'ದೇವಾ! ಪಾಪಭೂಯಿಷ್ಠವಾದ ಈ ನನ್ನ ದೇಹವನ್ನು ಪವಿತ್ರವಾದ ನಿನ್ನ ಪಾದಗಳ ಸ್ಪರ್ಶದಿಂದ ಪವಿತ್ರಗೊಳಿಸಿ, ನನ್ನ ದೇಹವನ್ನೇ ವೇದಿಕೆಯನ್ನಾಗಿ ಮಾಡಿಕೊಂಡು ನರ್ತಿಸಬೇಕಾಗಿ ಬೇಡುತ್ತೇನೆ' ಎಂದನು. ಅದರಂತೆಯೇ ಶಿವನು ವ್ಯಾಘ್ರ-ಗಜಚರ್ಮಗಳನ್ನು ಹೊದೆದು, ಸರ್ಪಾಭರಣನಾಗಿ, ಭಸ್ಮ ತ್ರಿಪುಂಡ್ರ-ರುದ್ರಾಕ್ಷಿ-ರುಂಡಮಾಲಾದಿಗಳನ್ನು ಧರಿಸಿ, ಕಾಲಲ್ಲಿ ಕಿರುಗೆಜ್ಜೆ-ಕೈಯಲ್ಲಿ ಡಮರುಗಳನ್ನು ಹೊಂದಿ, ದೇವತೆಗಳು ಹರ್ಷೋದ್ಗಾರಮಾಡುತ್ತಿರಲು ಅಂಧಕನ ಬೆನ್ನಮೇಲೆ ತಾಂಡವ ನೃತ್ಯವನ್ನು ಮಾಡಿ ತಾಂಡವೇಶ್ವರನೆನಿಸಿದನು.

## ೫. ಗಿರಿಜಾಧವಲೀಲೆ

ಗಿರಿರಾಜ ಹಿಮವಂತನ ಧರ್ಮಪತ್ನಿ ಮೇನಕಾದೇವಿ. ಇವರಿಗೆ ಮೈನಾಕನೆಂಬ ಪುತ್ರನಿದ್ದನು. ಪುತ್ರಿಯೋರ್ವಳನ್ನು ಬಯಸಿದ ಮೇನಕೆಯು ದೇವಿಯನ್ನು ಕುರಿತು ತಪಸ್ಸನ್ನಾಚರಿಸಿದಳು. ಪ್ರಸನ್ನಳಾದ ಜಗನ್ಮಾತೆಯು ಪುತ್ರಿಯಾಗಿ ಜನಿಸಲು ಅಭಯವಿತ್ತಳು. ಅಂತೆಯೇ ದಕ್ಷಬ್ರಹ್ಮನ ಯಾಗದ ಯೋಗಾಗ್ನಿಯಲ್ಲಿ ತನ್ನ ದೇಹವನ್ನು ಕಳೆದುಕೊಂಡ ಜಗನ್ಮಾತೆಯು ಮೇನಕೆಯ ಗರ್ಭವನ್ನು ಸೇರಿದಳು. ಶಿವಭಜನೆ-ಶಿವಪೂಜೆ ಮೊದಲಾದ ಶಿವಸಂಬಂಧ ಕಾರ್ಯಗಳಲ್ಲೇ ಮೇನಕೆಯು ನಿರತಳಾಗಿದ್ದಳು. ಶುಭಮುಹೂರ್ತದಲ್ಲಿ ಭವಾನಿಯ ಜನನವಾಯಿತು. ಶುಭವೇಳೆಯಲ್ಲಿ 'ಗಿರಿಜೆ' ಎಂದು ಹೆಸರಿಟ್ಟರು. ಗಿರಿಜೆಯು ಶಿವಲೀಲೆಯೇ ಮೂರ್ತಿವೆತ್ತಂತೆ ಶಿವನಲ್ಲಿ ಲೀನಚಿತ್ತಳಾಗಿ ದಿನಗಳೆದಂತೆ ಬೆಳೆಯುತ್ತಾ ಚಂದ್ರಿಕೆಯಂತೆ ಪ್ರಕಾಶಿಸಿದಳು. ತಂದೆ ತಾಯಿಗಳಿಗೆ ಸಾಕ್ಷಾತ್ ಶಕ್ತಿಯೇ ಅವತರಿಸಿರುವಳೆಂಬುದು ತಮ್ಮ ವ್ಯಾಮೋಹದಿಂದಾಗಿ ಮರೆತೇ

ಹೋಯ್ತು. ಅಲ್ಪಕಾಲದಲ್ಲೇ ಸಕಲಶಾಸ್ತ್ರಪಾರಂಗತಳಾದ ಗಿರಿಜೆಯಲ್ಲಿ ಇವರ ಪ್ರೀತಿವಾತ್ಸಲ್ಯಗಳು ಬಹಳ ಹೆಚ್ಚಿದವು. ಯೌವನವತಿಯಾದ ಈಕೆಗೋಸ್ಕರ ವರಾನ್ವೇಷಣೆಗೆ ತೊಡಗುತ್ತಿರುವಷ್ಟರಲ್ಲಿ ನಾರದರು ಇವರನ್ನು ಎಚ್ಚರಿಸಿ 'ಈಕೆಗೆ ಜಗದೀಶ್ವರನೇ ಪತಿಯಲ್ಲದೆ ಬೇರಾರೂ ಪತಿಯಾಗಲು ಸಾಧ್ಯವೇ ಇಲ್ಲ. ಇವಳು ಜಗನ್ಮಾತೆಯೆಂಬುದನ್ನು ಮರೆಯಬೇಡಿ. ಆದ್ದರಿಂದ ಹೇಮಕೂಟದಲ್ಲಿ ತಪಸ್ಸುಗೈಯುತ್ತಿರುವ ಶಿವನ ಬಳಿಗೆ ಸೇವೆಗಾಗಿ ಈ ಗಿರಿಜೆಯನ್ನು ಕಳುಹಿಸಿರಿ' ಎಂದು ಹೇಳಿದರು.

ತಂದೆ ತಾಯಿಯರ ಅಪ್ಪಣೆಯಂತೆ ಗಿರಿಜೆಯು ಜಯೆವಿಜಯೆಯರೆಂಬ ಸಖಿಯರೊಡನೆ ಶಿವನೆಡೆಗೆ ಬಂದು ಶಿವನ ನಿತ್ಯಸೇವೆಯಲ್ಲಿ ತೊಡಗಿದಳು. ಇಷ್ಟರಲ್ಲಿ ಇಂದ್ರಾದಿಗಳಿಂದ ಪ್ರೇರಿತನಾದ ಮನ್ಮಥನು ಯೋಗಿಯಾದ ಶಂಕರನನ್ನು ಜಯಿಸುತ್ತೇನೆಂಬ ಅಹಂಕಾರದಿಂದ ಅಲ್ಲಿಗೆ ಬಂದು ತನ್ನ ಸಂಮೋಹನ ಮುಂತಾದ ಅಸ್ತ್ರಗಳನ್ನು ಶಿವನಮೇಲೆ ಪ್ರಯೋಗಿಸಿದನು. ತಪಸ್ಸಿನಿಂದ ವಿಮುಖನಾದ ಶಂಕರನು ಕೋಪಗೊಂಡು ತನ್ನ ಫಾಲನೇತ್ರಾಗ್ನಿಯಿಂದ ಮನ್ಮಥನನ್ನು ದಹಿಸಿ, ಚಿತ್ತವಿಭ್ರಮವಾದ್ದರಿಂದ ತಾನೂ ಅಲ್ಲಿಂದ ಅದೃಶ್ಯನಾದನು.

ಈ ಘಟನೆಯಿಂದ ಗಿರಿಜೆಯು, 'ಶಿವನೇ ನನ್ನನ್ನರಸಿ ನನ್ನಬಳಿ ಬರುವಂತೆ ಮಾಡುತ್ತೇನೆ.' ಎಂದು ಸಂಕಲ್ಪಿಸಿ, ಉಡುಗೆ ತೊಡುಗೆಗಳನ್ನು ಬಿಸುಟ ನಾರುಮಡಿಯುಟ್ಟು ಉಗ್ರ ತಪಸ್ಸಿನಲ್ಲಿ ತೊಡಗಿದಳು. ಬಾಲೆಯಾದರೂ ಈಕೆಯ ತಪಸ್ಸು, ಸಹಸ್ರಾರು ವರ್ಷಗಳಿಂದಲೂ ತಪಸ್ಸು ಮಾಡುತ್ತಿದ್ದ ಮಹರ್ಷಿಗಳಿಗೂ ಅತ್ಯಾಶ್ಚರ್ಯವನ್ನುಂಟುಮಾಡಿತು. ಈಕೆಯ ತಪೋಜ್ವಾಲೆಯು ನಭೋಮಂಡಲವನ್ನೇ ವ್ಯಾಪಿಸಿತು. ಪ್ರಸನ್ನನಾದ ಶಂಕರನು ಈಕೆಯನ್ನು ಪರೀಕ್ಷಿಸಲೋಸುಗ ಯತಿವೇಷದಿಂದ ಅಲ್ಲಿಗೆ ಬಂದು ಆಕೆಯ ದೃಢಭಕ್ತಿಯನ್ನೂ, ನಿಷ್ಕಳಂಕ ಪ್ರೇಮವನ್ನೂ ಪರೀಕ್ಷಿಸಿ ಕೊನೆಗೆ ಪ್ರತ್ಯಕ್ಷನಾದನು. ತನ್ನ ಹೃದಯದ ದಿವ್ಯ ಮಂಗಳಮೂರ್ತಿಯು ಎದುರಲ್ಲೇ ನಿಂತಿರುವುದನ್ನು ಕಂಡ ಗಿರಿಜೆಗೆ ಆನಂದಾಶ್ಚರ್ಯಗಳು ಒಮ್ಮೆಗೇ ಮೂಡಿಬಂದು ಲಜ್ಜೆಯ ಪುತ್ಥಳಿಯಾಗಿ ನಿಂತುಬಿಟ್ಟಳು.

ಶಂಕರನು, 'ಮಂಗಳೇ! ಇಂದಿನಿಂದ ನನ್ನ ಶರೀರಾರ್ಧವೇ ನಿನ್ನದು, ನಿನ್ನಿಷ್ಟದಂತೆ ನಿನ್ನನ್ನು ಪರಿಗ್ರಹಿಸುತ್ತೇನೆ ಎಂದು ವಚನವಿತ್ತನು.

ಗಿರಿರಾಜನು ಅತಿ ವೈಭವದಿಂದ ಜಗನ್ಮಾತಾಪಿತೃಗಳ ವಿವಾಹವನ್ನು ಭವ್ಯವಾದ ಕಲ್ಯಾಣಮಂಟಪದಲ್ಲಿ ವಿಧಿವತ್ತಾಗಿ ನೆರವೇರಿಸಿದನು. ಗಿರಿಜೆಯ ಕೈ ಹಿಡಿದ ಶಂಕರನು ಗಿರಿಜಾಧವನೆನಿಸಿದನು.

## ೬. ಭಿಕ್ಷಾಟನಲೀಲೆ

ಮೇರುಪರ್ವತದಲ್ಲಿ ನವಬ್ರಹ್ಮರು-ತನ್ನ ಮಾನಸಪುತ್ರರು-ಮನು ಮುನಿಗಳು ಮುಂತಾದವರೊಂದಿಗೆ ಬ್ರಹ್ಮನು ಒಡ್ಡೋಲಗದಲ್ಲಿರಲು, ದಕ್ಷ ಬ್ರಹ್ಮ ಮುಂತಾದವರು ಬ್ರಹ್ಮನನ್ನು ಕುರಿತು, 'ದೇವಾ! ನಿತ್ಯನೂ ಜಗತ್ಪತಿಯೂ ಜಗದಾರಾಧ್ಯನೂ ಆದ ದೇವ ದೇವನಾರು? ಅವನನ್ನು ಸೇವಿಸಿ ಧನ್ಯರಾಗೋಣ' ಎಂದು ಕೇಳಿದರು. ಅದಕ್ಕೆ ಬ್ರಹ್ಮನು, 'ಆ ದೇವ-ದೇವನು ನಾನೇ. ನನ್ನಿಂದಲೇ ಸೃಷ್ಟಿಸ್ಥಿತಿಲಯಾದಿಗಳು ನಡೆಯುತ್ತಿವೆ, ಹರಿ-ಹರಾದಿಗಳೂ ನನ್ನಧೀನರು. ಆದ್ದರಿಂದ ಮೋಕ್ಷದಾಯಕನಾದ ನನ್ನನ್ನೇ ಸೇವಿಸಿರಿ 'ಎಂದನು. ಸೃಷ್ಟಿಕರ್ತನ ಈ ಅಹಂಕಾರದಿಂದ, ಜಗತ್ತೇ ಅಧರ್ಮದಿಂದ ತುಂಬಿತು. ಪ್ರಳಯ ಸೂಚಕದ ಉತ್ಪಾತಗಳು ಕಂಡವು. ಇದನ್ನರಿತ ವಿಷ್ಣುವು ಬ್ರಹ್ಮನಲ್ಲಿಗೆ ಬಂದು, ಈ ಅಹಂಕಾರ ನಿನಗೆ ಸಲ್ಲದು, ನಮ್ಮೆಲ್ಲರನ್ನು ಸೃಷ್ಟಿಸಿ ನಮಗಧಿಪತಿಯಾಗಿರತಕ್ಕವನು ಶಿವನಲ್ಲವೇ? ಲೀಲಾಮಯನಾದ ಆತನು ಯಾರೆಂಬುದನ್ನು ನಿನ್ನ ವೇದಗಳಿಂದಲೇ ತಿಳಿದುಕೋ ಎಂದನು. ವೇದಗಳೂ ಸಹ ಆಗ ಮುಂದೆ ಬಂದು ಶಿವನನ್ನೇ ಹೊಗಳಿದವು. ಆದರೇನು? ಮೂರ್ಖನಿಗೆ ಉಪದೇಶನೀಡಿದಂತಾಯ್ತು. ಇನ್ನೂ ಹೆಚ್ಚು ಗರ್ವದಿಂದ ವಿಷ್ಣುವನ್ನೇ ನಿಂದಿಸಿದನು.

ಇಷ್ಟರಲ್ಲಿ ಬ್ರಹ್ಮನ ಅಜ್ಞಾನಮಯ ಚಿತ್ತದಿಂದ ಪರಶಿವನು, ಐದು ಮುಖ-ಹತ್ತು ಭುಜ–ಹದಿನೈದು ನೇತ್ರ-ಇಪ್ಪತ್ತು ಬಾಹು-ಜಟಾಪಟಲ-ಚರ್ಮಾಂಬರ ಮೊದಲಾದವುಗಳನ್ನು ಹೊಂದಿ ಉದ್ಭವಿಸಿ ಬಂದನು. ವಿಷ್ಣು ಇಂದ್ರಾದಿಗಳು ಭಕ್ತಿಯಿಂದ ಸ್ತುತಿಸಿದರು. ಆದರೆ ಬ್ರಹ್ಮನು, "ಐದುಮುಖಗಳಿದ್ದ ಮಾತ್ರಕ್ಕೇ ಈತನು ದೊಡ್ಡವನೋ? ನನಗೂ ಐದು ಮುಖಗ

ಳುಂಟು. ಸ್ಮಶಾನವಾಸಿಯಾದ ಈತನು ಎಲ್ಲರಿಂದ ಸೇವಿಸಲ್ಪಡುತ್ತಿರುವ ನನಗೆ ಸಮಾನನೋ?" ಎಂದು ಮುಂತಾಗಿ ನಿಂದಿಸಿದನು. ಕೂಡಲೇ ಶಂಕರನು ಕೋಪಗೊಂಡು ತನ್ನ ಎಡಗೈ ಕಿರುಬೆರಳ ಉಗುರಿನಿಂದ ಬ್ರಹ್ಮನ ಐದನೇ ಶಿರಸ್ಸನ್ನು ಚಿವುಟಿದನು. ಬ್ರಹ್ಮನ ಛಿನ್ನವಾದ ಶಿರಸ್ಸಿನಿಂದ ರಕ್ತವು ಧಾರಾಕಾರವಾಗಿ ಸುರಿಯುತ್ತಿತ್ತು. ತತ್ತರಿಸಿಹೋದ ಬ್ರಹ್ಮನು ಶಿವನ ಅಡಿದಾವರೆಗಳಲ್ಲಿ ಹಾಗೆಯೇ ಮೂರ್ಛೆಹೋದನು. ಶಿವನು ಕೃಪೆಮಾಡಲು ಎಚ್ಚೆತ್ತ ಬ್ರಹ್ಮನು ಶಿವನನ್ನು ಬಹುವಾಗಿ ಸ್ತುತಿಗೈದು, ತನ್ನೆಲ್ಲ ಅಪರಾಧ ಗಳನ್ನು ಕ್ಷಮಿಸಿ ಕಾಪಾಡಬೇಕೆಂದು ಬೇಡಿದನು. ಪ್ರಸನ್ನನಾದ ಶಂಕರನು ನಿನ್ನಿಷ್ಟಾರ್ಥವೇನು? ಎಂದು ಕೇಳಲು, 'ನನ್ನ ಈ ಅಪರಾಧಕ್ಕೆ ಶಿಕ್ಷೆ ಯಾಗಬೇಕು. ಅದರಂತೆ ನಿನ್ನನ್ನು ನಿಂದಿಸಿದ ಈ ನನ್ನ ತಲೆಯೋಡಿನಲ್ಲಿ ರಕ್ತವನ್ನು ಸುರಿಸುವ ಭಿಕ್ಷೆಮಾಡಿ ಇದನ್ನು ನಿನ್ನ ಕೈಯಲ್ಲಿ ಸದಾ ಧರಿಸುವ ಕೃಪೆಮಾಡು' ಎಂದು ಬೇಡಿದನು.

ಅದರಂತೆ ಕರುಣಿಸಿದ ಪರಶಿವನು ದೇವಾಸುರದೇವತೆಗಳನ್ನು ಪರೀಕ್ಷಿಸುವ ದೃಷ್ಟಿಯಿಂದ ಭಿಕ್ಷಾಟನೆಗೆ ಹೊರಟನು. ಮೊದಲು ವೈಕುಂಠಕ್ಕೆ ಬಂದನು. ವಿಷ್ಣುವು ತನ್ನ ಹಣೆಯನ್ನು ಆಯುಧದಿಂದ ಸೀಳಿ ಕಪಾಲದಲ್ಲಿ ರಕ್ತವನ್ನು ಸುರುಹಿದನು. ಕಪಾಲದಿಂದ ಒಂದು ಬಿಂದು ರಕ್ತವೂ ಹೊರಬರಲಿಲ್ಲ. ಶಕ್ತಿಹೀನನಾದ ವಿಷ್ಣುವು ಮೂರ್ಛೆಗೊಂಡನು. ಶಿವನು ಅವನ ಭಕ್ತಿಗೆ ಮೆಚ್ಚಿ ಅವನನ್ನನುಗ್ರಹಿಸಿ ಮುಂದೆ ದಿವ್ಯತೇಜೋ ಮೂರ್ತಿಯಾಗಿ ಬೆಳಗುತ್ತಾ ದೇವಲೋಕಕ್ಕೆ ಬಂದನು ಅಲ್ಲಿನ ದೇವತಾ ಸ್ತ್ರೀಯರು ಇವನರೂಪಕ್ಕೆ ಮರುಳಾಗಿ ಇವನನ್ನೇ ನೆರಳಿನಂತೆ ಅನುಸರಿಸು ತ್ತಿದ್ದರು. ಇದಾವುದನ್ನೂ ಲೆಕ್ಕಿಸದ ಶಂಕರನು ಇಂದ್ರನಲ್ಲಿಗೆ ಬಂದನು. ತನ್ನೆಲ್ಲ ವಸ್ತುಗಳನ್ನು ಭಿಕ್ಷೆಯಾಗಿ ನೀಡಿದರೂ ಕಪಾಲವು ತುಂಬದೇ ಇರಲು ಅಮೃತವನ್ನೇ ಅರ್ಪಿಸಲು ದೇವೇಂದ್ರನು ಸಿದ್ಧನಾಗಿ ಬಂದನು. ಇವನ ನಿಸ್ವಾರ್ಥಕ್ಕೆ ಮೆಚ್ಚಿದ ಶಂಕರನು, 'ನಿನ್ನೀ ಭಿಕ್ಷದಿಂದ ತೃಪ್ತನಾದೆ, ಈ ಅಮೃತವನ್ನು ವ್ಯರ್ಥಮಾಡಬೇಡ, ನಿನಗೆ ಮಂಗಳವಾಗಲಿ' ಎಂದು ಆಶೀರ್ವದಿಸಿ ಹೊರಟು ಹಾಗೆಯೇ ಉಳಿದ ದಿಕ್ಪಾಲಕಾದಿಗಳ ಭಕ್ತಿಯನ್ನೂ ಭಿಕ್ಷೆಯ ನೆಪದಿಂದ ಪರೀಕ್ಷಿಸುತ್ತಾ ಭಿಕ್ಷಾಟನಾಮೂರ್ತಿಯೆನಿಸಿ ಮೆರೆದನು.

## ೭. ಕಾಮದಹನಲೀಲೆ

ಅತ್ತ ಗಿರಿರಾಜನ ಮಗಳಾದ ಗಿರಿಜೆಯು ಹೇಮಕೂಟದಲ್ಲಿ ತಪಸ್ಸು ಮಾಡುತ್ತಿದ್ದ ಶಂಕರನ ಸೇವೆಯಲ್ಲಿ ತೊಡಗಿರುತ್ತಾಳೆ. ಇತ್ತ ಭೂಲೋಕದಲ್ಲಿ ತಾರಕಾಸುರನು, ಬ್ರಹ್ಮನನ್ನು ಕಠೋರ ತಪಸ್ಸಿನಿಂದ ಪ್ರತ್ಯಕ್ಷಮಾಡಿಕೊಂಡು 'ಜನನ ಮರಣರಹಿತನಾದ ಪರಶಿವನ ವೀರ್ಯದಿಂದ ಜನಿಸಿದ ಏಳುದಿನದ ಪುತ್ರನಿಂದ ಮರಣ'ವಾಗುವಂತೆ ವರವನ್ನು ಪಡೆದುಕೊಂಡು, ಅದರ ಬಲದಿಂದ ಮೂರು ಲೋಕಗಳನ್ನೂ ಗೆದ್ದು ಲೋಕಕಂಟಕನಾಗಿದ್ದನು. ಇವನ ಉಪಟಳವನ್ನು ತಾಳಲಾರದೆ ದೇವೇಂದ್ರಾದಿಗಳೆಲ್ಲರೂ ವಿಷ್ಣುವಿನಲ್ಲಿ ಮೊರೆಯಿಟ್ಟರು. ಆಗ ವಿಷ್ಣುವು, 'ಪರಶಿವನ ಶಕ್ತಿಸ್ವರೂಪಿಣಿಯಾದ ಪಾರ್ವತಿಯು ಶಿವನ ಸೇವೆಯಲ್ಲಿದ್ದರೂ ಶಿವನು ಆಕೆಯಲ್ಲಿ ಮನಸ್ಸಿಡದೆ ತಪಸ್ಸಿನಲ್ಲಿರುವುದರಿಂದ ಯಾರಾದರೂ ಸಮರ್ಥರು ಶಿವನ ಮನಸ್ಸನ್ನು ಪಾರ್ವತಿಯೆಡೆಗೆ ಒಲಿಯುವಂತೆ ಮಾಡಿದರೆ ನಿಮ್ಮ ಕಾರ್ಯಸಿದ್ಧಿಯಾಗುತ್ತದೆ' ಎಂದು ಹೇಳಿ, ಈ ಕಾರ್ಯಕ್ಕೆ ಸಮರ್ಥನಾದ ತನ್ನ ಪುತ್ರ ಮನ್ಮಥನನ್ನು ಕರೆಯಿಸಿ, 'ಪುತ್ರನೇ! ತಾರಕಾಸುರನನ್ನು ಸಂಹರಿಸಲು ಶಿವಕುಮಾರನುದಯವಾಗಬೇಕಾಗಿದೆ. ಈಗ ನೀನು ನಿನ್ನ ಅಮೋಘ ಬಾಣಗಳಿಂದ ಶಿವನ ಮನಸ್ಸನ್ನು ಚಂಚಲಗೊಳಿಸಿ ಪಾರ್ವತಿಯಲ್ಲಿ ನೆಡುವಂತೆ ಮಾಡಬೇಕು. ಈ ಕಾರ್ಯಕ್ಕೆ ನೀನೇ ಸಮರ್ಥ' ಎಂದು ಹೇಳಲು, ಮನ್ಮಥನು, 'ಜೀಯಾ! ಸಂಯಮಿಯಾದ ಶಂಕರನಲ್ಲಿ ಸಾಹಸವನ್ನು ಮಾಡಿ ನಾನು ಬದುಕಬಲ್ಲೆನೇ?' ಎಂದನು. ಆಗ ಪುನಃ, 'ಈ ಕಾರ್ಯದಲ್ಲಿ ನಿನ್ನ ಪ್ರಾಣವೇ ನಷ್ಟವಾದರೂ ಇದರಿಂದ ನಿನ್ನ ಕೀರ್ತಿ ಹೆಚ್ಚುವುದಲ್ಲದೆ ಮೂರು ಲೋಕಗಳ ರಕ್ಷಣೆಯೂ ಆಗುತ್ತದೆ ಮತ್ತು ನಿನಗೆ ಶ್ರೇಯಸ್ಸೂ ಬರುತ್ತದೆ. ಆದ್ದರಿಂದ ನೀನೇ ಈ ಕಾರ್ಯವನ್ನು ನಡೆಸಬೇಕು' ಎಂದೊಡಂಬಡಿಸಿ ಕಳುಹಿಸಿದನು.

ಶಿವನ ತಪೋಭೂಮಿಯಲ್ಲಿ ವಸಂತಮಾಸವು ತಲೆದೋರಿ ಮರಗಿಡ ಬಳ್ಳಿಗಳೆಲ್ಲ ಚಿಗುರಿದವು. ಪಿಕಧ್ವನಿಯು ಮನಗಳನ್ನು ಸೂರೆಗೊಳ್ಳುತ್ತಿತ್ತು. ರತಿಯಿಂದೊಡಗೂಡಿದ ಮನ್ಮಥನು ಅಲ್ಲಿಗೆ ಬಂದನು. ಕಾಮೋದ್ರೇಕವನ್ನುಂಟುಮಾಡುವ ಮನ್ಮಥನ ಸೈನ್ಯವೆಲ್ಲ ನಂದಿಯ ಕೋಪಾಗ್ನಿಗೆ

ತುತ್ತಾಯಿತು. ಇದರಿಂದ ಖಿನ್ನನಾದ ಮನ್ಮಥನು ಏನುಮಾಡಬೇಕೆಂದು ಚಿಂತಿಸುತ್ತಿರಲು, ನನ ಉತ್ಸಾಹವೆಂಬಂತೆ ಪಾರ್ವತಿಯು ಅಲ್ಲಿಗೆ ಬಂದಳು. ಅವಳ ಕೃಪೆಯಿಂದ ಶಿವನಿದ್ದೆಡೆಗೆ ಬಂದು, ಶಿವನಿಗೆ ನಮಸ್ಕರಿಸಿ, ಆತನಿಗೆ ಸ್ವಲ್ಪ ದೂರದಲ್ಲಿ ಮಂಡಿಯೂರಿ ಧನುಸ್ಸನ್ನು ಸಿದ್ಧಮಾಡಿಕೊಂಡು ಮನ್ಮಥನು ಪುಷ್ಪಬಾಣಗಳನ್ನು ಪ್ರಯೋಗಿಸಿದನು. ಶಿವನು ಕದಲದಿರಲು ಪಂಚಬಾಣಗಳನ್ನು ಏಕಕಾಲದಲ್ಲೇ ಪ್ರಯೋಗಿಸಿದನು. ಇದರಿಂದ ಶಿವನ ಮನಸ್ಸು ಚಂಚಲಗೊಂಡಿತಾದರೂ ಅದನ್ನು ತಡೆದು ಈ ಚಾಂಚಲ್ಯಕ್ಕೆ ಕಾರಣರಾರೆಂದು ನೋಡಿ ದೃಷ್ಟಿಗೋಚರನಾದ ಮನ್ಮಥನನ್ನು ತನ್ನ ಫಾಲನೇತ್ರಾಗ್ನಿಯಿಂದ ಸುಟ್ಟು ಭಸ್ಮಮಾಡಿ ಕೂಡಲೇ ಅದೃಶ್ಯನಾದನು. ದುಃಖಿತಳಾದ ರತಿಯು ಗಿರಿಜೆಯ ಶರಣುಹೊಕ್ಕಳು. ಆಗ ಗಿರಿಜೆಯು, 'ಹೆದರಬೇಡ, ಉಗ್ರವಾದ ತಪಸ್ಸುಮಾಡಿ, ಶಿವನನ್ನು ಪ್ರತ್ಯಕ್ಷಮಾಡಿಕೊಂಡು ನಿನ್ನ ಸೌಭಾಗ್ಯವನ್ನುಳಿಸಿಕೊಡುತ್ತೇನೆ' ಎಂದಭಯವಿತ್ತು ತಪಸ್ಸಿಗೆ ತೊಡಗಿದಳು.

ಪಾರ್ವತಿಯ ತಪಸ್ಸಿಗೆ ಮೆಚ್ಚಿದ ಶಂಕರನು ಪ್ರತ್ಯಕ್ಷನಾಗಲು, 'ಸ್ವಾಮಿ! ನನಗಾಗಿ ನಿನ್ನ ಅಗ್ನಿನೇತ್ರಕ್ಕೆ ತುತ್ತಾದ ಮನ್ಮಥನನ್ನು ಬದುಕಿಸಿ ಈ ರತಿಯನ್ನನುಗ್ರಹಿಸು' ಎಂದು ಬೇಡಲು, ಶಂಕರನು, 'ಗಿರಿಜೆ! ಮನ್ಮಥನು ಮೊದಲಿನಂತೆ ಶರೀರವನ್ನು ಹೊಂದಿರದೆ ಅನಂಗನಾಗಿ ತನ್ನ ಸತಿಯನ್ನು ಯಾವಾಗಲೂ ಅಗಲದಿರಲಿ' ಎಂದನುಗ್ರಹಿಸಿ ಗಿರಿಜೆಯ ಪಾಣಿಗ್ರಹಣ ಮಾಡಿಕೊಂಡನು. ಹೀಗೆ ಮನಸ್ಸಿನ ಕಾಮವನ್ನೇ ಸುಟ್ಟುರುಹಿದ ಶಂಕರನು ಕಾಮಾರಿಯೆನಿಸಿದನು.

## ೮. ಕಾಲಹರಲೀಲೆ

ಮೃಕಂಡುವೆಂಬ ಮುನಿಯು ವೃದ್ಧನಾದಾಗ್ಯೂ ವಂಶೋದ್ಧಾರಕನಾದ ಪುತ್ರನಿಲ್ಲದಿರಲು, ಶಿವನನ್ನು ಕುರಿತು ತಪಸ್ಸುಮಾಡಿದನು. ಪ್ರತ್ಯಕ್ಷನಾದ ಶಂಕರನು, 'ಮುನೀಂದ್ರ! ಈ ಜನ್ಮದಲ್ಲಿ ನಿನಗೆ ಮಕ್ಕಳಾಗುವಂತಿಲ್ಲವಾದರೂ, ಈ ಜನ್ಮದ ಸತ್ಕಾರ್ಯಫಲದಿಂದಾಗಿ ಒಬ್ಬ ಪುತ್ರನನ್ನು ಪಡೆಯಲರ್ಹನಾಗಿರುವೆ. ಶತಾಯುವಾದ ಮೂರ್ಖ ಅಥವಾ ಹದಿನಾರು

ವರ್ಷದಾಯುಷ್ಯವುಳ್ಳ ಸುಜ್ಞಾನಿ ಈ ಇಬ್ಬರಲ್ಲಿ ಒಬ್ಬನನ್ನು ಕೇಳಿಕೋ' ಎನ್ನಲು, ಅದಕ್ಕೆ ಮುನಿಯು, 'ಪರಮೇಶ್ವರಾ! ಶತಾಯುವೇ ಆದರೂ ಮೂರ್ಖನಿಂದ ಪ್ರಯೋಜನವಿಲ್ಲ. ಹದಿನಾರು ವರ್ಷದಾಯುಷ್ಯವುಳ್ಳವನಾದರೂ ಸರ್ವಜ್ಞನಾದ ಸುಪುತ್ರನನ್ನೇ ಕರುಣಿಸು' ಎಂದು ಬೇಡಿದನು. ಅದರಂತೆ ವರವಿತ್ತನು. ಇತ್ತ ಮುನಿಯು ಆಶ್ರಮಕ್ಕೆ ಹಿಂತಿರುಗಿ ತನ್ನ ಧರ್ಮಪತ್ನಿಯಾದ ಮರುದ್ವತಿಗೆ ವಿಷಯವನ್ನು ತಿಳಿಸಿ ಆಕೆಯೊಡನೆ ಶಿವಾರಾಧನೆಯಲ್ಲಿ ತೊಡಗಿದನು.

ಕಾಲಕಳೆದಂತೆ ಶಿವನ ವರಪ್ರಸಾದದಿಂದ ಮರುದ್ವತಿಯು ಗರ್ಭವತಿಯಾಗಿ ಶುಭಕಾಲದಲ್ಲಿ ಗಂಡುಶಿಶುವನ್ನು ಹಡೆದಳು. ಬಾಲಕನಿಗೆ ಮಾರ್ಕಂಡೇಯನೆಂದು ಹೆಸರಿಟ್ಟರು. ಮಾರ್ಕಂಡೇಯನು ಶುಕ್ಲಪಕ್ಷದ ಚಂದ್ರನಂತೆ ಬೆಳೆದು ಎಲ್ಲರನ್ನೂ ಸಂತೋಷಗೊಳಿಸುತ್ತಿದ್ದನು. ಅಲ್ಪಕಾಲದಲ್ಲೇ ಎಲ್ಲ ಶಾಸ್ತ್ರಗಳಲ್ಲೂ ಪಾರಂಗತನಾದನು. ಈತನ ಸರ್ವಜ್ಞತೆ ಶಿವಭಕ್ತಿ-ಮಾತಾಪಿತಾಭಕ್ತಿ ಮುಂತಾದವು ಎಲ್ಲರನ್ನೂ ಬೆರಗುಗೊಳಿಸುತ್ತಿದ್ದವು. ಎಲ್ಲರ ಕಣ್ಮಣಿಯಾಗಿ ಸಂತೋಷಕ್ಕೆ ಕಾರಣನಾಗಿದ್ದುದರಿಂದ ಎಲ್ಲರೂ ಈತನ ಮರಣವಿಚಾರವನ್ನೇ ಮರೆತಿದ್ದರು. ಹದಿನಾರು ವರ್ಷಗಳು ಬಹುಬೇಗ ಕಳೆದುಹೋದವು. ಮೃಕಂಡು ಮರುದ್ವತಿಯರು ತಮ್ಮ ಆಶ್ರಮದ ಮುಂಭಾಗದಲ್ಲಿದ್ದಾಗ, 'ಮುನೀಂದ್ರ! ನಾಳೆ ಮುಂಜಾನೆಗೆ ನಿನ್ನ ಪುತ್ರನ ಆಯುಷ್ಯವು ತೀರುತ್ತದೆ' ಎಂಬ ಅಶರೀರವಾಣಿಯು ಅವರನ್ನು ಮೂರ್ಛೆಗೊಳಿಸಿತು.

ಇತ್ತ ಗುರುಕುಲದಲ್ಲಿದ್ದ ಮಾರ್ಕಂಡೇಯನು ವಿದ್ಯಾಭ್ಯಾಸವನ್ನು ಪೂರ್ಣಮಾಡಿಕೊಂಡು ಗುರುದಕ್ಷಿಣೆಯನ್ನು ಸಲ್ಲಿಸಿ ಆಶ್ರಮಕ್ಕೆ ಬಂದು ತಂದೆ ತಾಯಿಗಳ ಪರಿಸ್ಥಿತಿಯನ್ನು ನೋಡಿ ಬಹು ವ್ಯಥೆಪಟ್ಟನು. ತನ್ನ ಮರಣವೇ ಇವರ ಈ ಸ್ಥಿತಿಗೆ ಕಾರಣವೆಂದು ತಿಳಿದು, ಉಪಚರಿಸಿ, ಎಚ್ಚರಗೊಳಿಸಿ, 'ಜನನ–ಮರಣಗಳು ಚಕ್ರದಂತೆ ಸುತ್ತುತ್ತವೆ. ಇದಕ್ಕಾಗಿ ಯಾರೂ ದುಃಖಿಸಬಾರದು' ಎಂದು ಸಮಾಧಾನ ಮಾಡಿದನು. ಇಷ್ಟರಲ್ಲಿ ನಾರದರು ಆಗಮಿಸಿ, ತನಗೆ ನಮಸ್ಕರಿಸಿದ ಈ ಬಾಲಕನಿಗೆ 'ದೀರ್ಘಾಯುವಾಗು' ಎಂದಾಶೀರ್ವದಿಸಿದರು. ಆಶ್ಚರ್ಯಗೊಂಡ ಮೃಕಂಡುವು,

'ಸ್ವಾಮಿ! ನಿಮ್ಮ ಆಶೀರ್ವಾದವು ವ್ಯರ್ಥವಾಗದು, ಆದರೆ . . . .' ಎನ್ನುವಷ್ಟರಲ್ಲೇ, ನಾರದರು, 'ಹೆದರಬೇಕಾಗಿಲ್ಲ, ಈ ಬಾಲಕನು ಶಿವ ಪೂಜೆಯಲ್ಲಿ ತೊಡಗಿರಲಿ, ಶಿವಪೂಜಾನಿಷ್ಠರನ್ನು ಅಂತಕನೇ ಅಲ್ಲ, ಯಾರೂ ಸಹ ಮುಟ್ಟಲಾರರು, ಮುಂದಿನದು ಶಿವನಿಚ್ಛೆ' ಎಂದು ಹೇಳಿ ಹೊರಟುಹೋದರು.

ಮುನಿಯ ಮಾತಿನಂತೆ ಮಾರ್ಕಂಡೇಯನು ಶುಚಿರ್ಭೂತನಾಗಿ ತಂದೆ-ತಾಯಿಗಳಿಗೆ ನಮಸ್ಕರಿಸಿ ಶಿವಲಿಂಗದ ಮುಂದೆ ತಪಸ್ಸಿಗೆ ಕುಳಿತನು. ಕೊನೆಯ ಕಾಲವು ಪ್ರಾಪ್ತವಾಗಲು ಬಾಲಕನ ತಪೋ ಜ್ವಾಲೆಯ ಬೇಗೆಯು ಸುತ್ತಲೂ ಹಬ್ಬಿದ್ದುದರಿಂದ ಇವನ ಪ್ರಾಣಗಳನ್ನು ಸೆಳೆದೊಯ್ಯಲು ಬಂದ ಯಮಭಟರು ಮುಂದಡಿಯಿಡಲಾರದೆ ಹೆದರಿ ಯಮರಾಜನಲ್ಲಿಗೆ ಬಂದು, 'ಜೀಯಾ! ಯಾವುದೋ ದುಷ್ಟಶಕ್ತಿಯು ನಮ್ಮನ್ನು ಮುಂದಡಿಯಿಡದಂತೆ ತಡೆಯಿತು. ಈ ಕಾರ್ಯವು ನಮ್ಮಿಂದಾ ಗದು, ಕ್ಷಮಿಸಿರಿ, ಇನ್ನು ತಮ್ಮ ಚಿತ್ತ' ಎಂದು ಹೇಳಿ ನಮಸ್ಕರಿಸಿ ಹೋದರು. ಕೋಪಗೊಂಡ ಯಮನು ಕೂಡಲೇ ಆ ಬಾಲಕನನ್ನು ಎಳೆತರುವೆನೆಂದು ಸಂಕಲ್ಪಿಸಿ ಅವನಿದ್ದೆಡೆಗೆ ಬಂದನು. ಆ ದಿವ್ಯತೇಜಸ್ಸು ಇವನನ್ನೂ ಮುಂದಕ್ಕೆ ಬಿಡದೆ ತಡೆಯಿತು. ಪೂಜಾಮಗ್ನನಾದ ಬಾಲಕ ನನ್ನು ನೋಡಿ, ಆತನ ಪೂಜಾನಿಷ್ಠೆ ಏಕಾಗ್ರತೆಗಳಿಗೆ ತಲೆದೂಗಿದನು. ಆದರೇನು? ಕರ್ತವ್ಯಪಾಲನೆ, ಮಾಡಲೇಬೇಕು. 'ಒಂದುವೇಳೆ ಶಂಕರನೇ ಇವನ ರಕ್ಷಣೆಗೆ ಬಂದರೂ ಬಿಡೆನು' ಎಂದು ಯೋಚಿಸಿ ಕೂಡಲೇ ತನ್ನ ಪಾಶವನ್ನು ಬಾಲಕನ ಕೊರಳಿಗೆ ಹಾಕಿದನು. ಎಚ್ಚೆತ್ತ ಮಾರ್ಕಂಡೇ ಯನು ಶಿವನನ್ನು ಅಪಾರವಾಗಿ ಸ್ತುತಿಸಿದನು. ಯಮನು ಪಾಶವನ್ನು ಸೆಳೆಯುತ್ತಲೇ ಇದ್ದನು. ಕೂಡಲೇ ಮಹಾಲಿಂಗವನ್ನಪ್ಪಿ ಕುಮಾರನು ಶಂಕರನನ್ನು ಭಜಿಸಿದನು. ಬಾಲಕನ ಭಕ್ತಿಗೆ ಮೆಚ್ಚಿದ ಶಂಕರನು ಲಿಂಗ ದಿಂದಾವಿರ್ಭವಿಸಿ ತನ್ನ ತ್ರಿಶೂಲದಿಂದ ಯಮನನ್ನು ತಿವಿದು ಸಂಹರಿ ಸಿದನು. ವಿಷಯವನ್ನರಿತ ಯಮನ ಪತ್ನಿ ಶ್ಯಾಮಲೆಯು ಅಲ್ಲಿಗೆ ಬಂದು ತನ್ನ ಮಾಂಗಲ್ಯವನ್ನುಳಿಸಿ ಕಾಪಾಡಬೇಕೆಂದು ಶಂಕರನನ್ನು ಬೇಡಲು, ಯಮನಿಗೆ ಪ್ರಾಣದಾನಮಾಡಿ, 'ಇನ್ನು ಮುಂದೆ ನನ್ನ ಭಕ್ತರ ವಿಷಯ

ದಲ್ಲಿ ಜಾಗರೂಕನಾಗಿ ವರ್ತಿಸಬೇಕು' ಎಂದಾಜ್ಞಾಪಿಸಿ, ಮಾರ್ಕಂಡೇಯನಿಗೆ ದೀರ್ಘಾಯುಷ್ಯವಿತ್ತು ಅದೃಶ್ಯನಾದನು. ಹೀಗೆ ಕಾಲ (ಯಮ) ಗರ್ವಭಂಗ ಮಾಡಿದ ಶಂಕರನು ಕಾಲಹರನೆನಿಸಿದನು.

## ೯. ತ್ರಿಪುರಹರಲೀಲೆ

ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಯೆಂಬುವರು ಮೂರು ಲೋಕಗಳನ್ನೂ ಗೆದ್ದು ಅಮರತ್ವವನ್ನು ಪಡೆಯಬಯಸಿ ಬ್ರಹ್ಮನನ್ನು ಕುರಿತು ಉಗ್ರತಪಸ್ಸು ಮಾಡಿದರು. ಬ್ರಹ್ಮನು ಪ್ರತ್ಯಕ್ಷನಾಗಲು, "ಸ್ವಾಮಿ ! ನಮಗೆ ಎಂದೂ ಮರಣವಾಗದಂತೆ ಅನುಗ್ರಹಿಸು" ಎಂದು ಬೇಡಿದರು. ಬ್ರಹ್ಮನು, "ಪುತ್ರರೇ ! ನನಗೂ ಮರಣವು ತಪ್ಪಿದ್ದಲ್ಲ. ಜನನ–ಮರಣರಹಿತನೆಂದರೆ ಪರಮೇಶ್ವರನೊಬ್ಬನೇ, ಆದ್ದರಿಂದ ಈ ವರವನ್ನು ನೀಡಲು ನನ್ನಿಂದಾಗದು. ಇದರ ಹೊರತು ಬೇರೆ ವರವನ್ನು ಬೇಡಿರಿ" ಎಂದನು. ಆಗ ಅವರು, "ಹಾಗಿದ್ದ ಮೇಲೆ, ಅಂತರಿಕ್ಷದಲ್ಲಿ ಯಾವಾಗಲೂ ಸುತ್ತತಕ್ಕ ಮೂರು ಪಟ್ಟಣಗಳನ್ನು ಕಟ್ಟಿಕೊಂಡು ಅಲ್ಲಿರುವೆವು. ಸಹಸ್ರದೇವಮಾನಸಂವತ್ಸರಗಳಿಗೊಂದುಸಾರಿ ಅವು ಕೇವಲ ಒಂದು ನಿಮಿಷ (ರೆಪ್ಪೆ ಬಡಿಯುವಷ್ಟು) ಕಾಲ ಒಂದೇ ರೇಖೆಯಲ್ಲಿ ನಿಂತು ಸಾಗಬೇಕು. ಹಾಗೆ ನಿಂತ ಸಮಯದಲ್ಲಿ ಒಂದೇ ಬಾಣದಿಂದ ಯಾರಾದರೂ ಹೊಡೆದರೆ ಮಾತ್ರ ನಮಗೆ ಪರಾಜಯವುಂಟಾಗಲಿ" ಎಂಬ ವರವನ್ನು ಪಡೆದರು. ಅದರ ಪ್ರಭಾವದಿಂದ ಅವರು ಒಂದೇ ಕೀಲಿನಿಂದ ಸುತ್ತುವ ಚಿನ್ನ–ಬೆಳ್ಳಿ, ಮತ್ತು ಕಬ್ಬಿಣಗಳ ಮೂರು ನಗರಗಳನ್ನು ದೇವಶಿಲ್ಪಿಯಾದ ಮಯನಿಂದ ನಿರ್ಮಾಣಮಾಡಿಸಿ ಅಲ್ಲಿಯೇ ರಾಜ್ಯಭಾರಮಾಡುತ್ತಾ ಲೋಕಕಂಟಕರಾಗಿದ್ದರು. ಹೀಗಿದ್ದರೂ ಅವರು ಅಪರಿಮಿತ ಶಿವಭಕ್ತರಾಗಿದ್ದರು. ಇವರ ಉಪಟಳವನ್ನು ತಾಳಲಾರದ ದೇವತೆಗಳು ವಿಷ್ಣುವಿನ ಮರೆಹೊಕ್ಕರು. ವಿಷ್ಣುವು, "ಆ ರಾಕ್ಷಸರಲ್ಲಿ ಶಿವಭಕ್ತಿ–ಸತ್ಯಸಂಧತೆಗಳೂ ಮತ್ತು ಅವರ ಸ್ತ್ರೀಯರಲ್ಲಿ ಪಾತಿವ್ರತ್ಯವೂ ಇರುವುದರಿಂದ, ಅಲ್ಲದೆ ಶಿವನ ಅನುಗ್ರಹವೂ ಅವರಿಗಿರುವುದರಿಂದ ಅವರನ್ನು ನಾಶಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಅವರ ಸ್ತ್ರೀಯರ ಪಾತಿವ್ರತ್ಯವನ್ನು ಭಂಗಗೊಳಿಸಿ,

ಅವರ ಶಿವಭಕ್ತಿಯನ್ನು ನಾಶಪಡಿಸಿದಲ್ಲಿ ಮಾತ್ರ ಅವರ ನಾಶ ಸಾಧ್ಯ ವಾದೀತು" ಎಂದನು. ಈ ಕಾರ್ಯವನ್ನು ಸಾಧಿಸುವುದು ಹೇಗೆಂದು ಯೋಚಿಸಿ, ಕೊನೆಗೆ ವಿಷ್ಣು ಮತ್ತು ನಾರದರು ಸಂನ್ಯಾಸಿಗಳ ವೇಷದಲ್ಲಿ ಆ ನಗರಗಳನ್ನು ಪ್ರವೇಶಿಸಿ ತಮ್ಮ ಬುದ್ಧಿ ಚಮತ್ಕಾರಗಳಿಂದ ಅವರನ್ನು ಸ್ವಾಧೀನಮಾಡಿಕೊಂಡು ಅವರಲ್ಲಿ ನಾಸ್ತಿಕತೆಯನ್ನು ಬಿತ್ತಿ ಶಿವಭಕ್ತಿಯನ್ನು ನಾಶಮಾಡಿದರು; ಮತ್ತು ಇವರ ರೂಪಾದಿಗಳಿಗೆ ಮಾರುಹೋದ ಸ್ತ್ರೀಯರು ತಮ್ಮ ಪಾತಿವ್ರತ್ಯವನ್ನು ಕಳೆದುಕೊಂಡರು. ವಿಷ್ಣುವಿನಿಂದಾಗಿ ರಾಕ್ಷಸರು ಶಿವನಿಂದಕರಾದುದು ಶಿವನಿಗೆ ಕೋಪವನ್ನುಂಟುಮಾಡಿತು. ಆಗ ಶಿವನು ವಿಷ್ಣು ಮೊದಲಾದ ದೇವತೆಗಳಿಗೆ, "ನೀವು ಮಾಡಿದ ಈ ಪಾಪ ಕಾರ್ಯಕ್ಕೆ ತಕ್ಕ ಪ್ರಾಯಶ್ಚಿತ್ತವಾಗಿ ನೀವು ಮಾನಸಸರೋವರದಲ್ಲಿ ಸ್ನಾನಮಾಡಿ ನನ್ನನ್ನು ಕುರಿತು ತಪಸ್ಸು ಮಾಡಬೇಕು" ಎಂದು ಆಜ್ಞೆ ಯಿತ್ತನು. ಅದರಂತೆ ಅವರು ಆಚರಿಸಿ ನೂರಾರು ವರ್ಷಗಳು ತಪಸ್ಸು ಮಾಡಿದರು. ಪ್ರಸನ್ನನಾದ ಶಂಕರನು ಅವರನ್ನನುಗ್ರಹಿಸಿ ಕಾಲವೂ ಸಮೀಪಿಸಿದ್ದರಿಂದ ತ್ರಿಪುರವಿಜಯಕ್ಕಾಗಿ ಸಿದ್ಧನಾದನು.

ಭೂಮಿಯೇ ರಥದ ಪೀಠ, ಆಕಾಶವೇ ರಥದ ಮಂಟಪ, ಕೈಲಾಸ ಗಿರಿಯೇ ಶ್ವೇತಛತ್ರಿ, ಸೂರ್ಯಚಂದ್ರರೇ ಗಾಲಿಗಳು, ಸಕಲಶಾಸ್ತ್ರಗಳೇ ಕೀಲುಗಳು, ವೇದಗಳೇ ಅಶ್ವಗಳು, ಬ್ರಹ್ಮನೇ ಸಾರಥಿ—ಇಂತಿರುವ ರಥವನ್ನು ಏರಿ ಶಿವನು ಹೊರಟನು. ಇವನಿಗೆ ಮೇರುಪರ್ವತವೇ ಧನುಸ್ಸು, ಆದಿಶೇಷನೇ ಸಿಂಜಿನಿ, ಸಮುದ್ರವೇ ಬತ್ತಳಿಕೆ, ವಿಷ್ಣುವೇ ಬಾಣ, ಪಾಶುಪತವೇ ಬಾಣದ ಅಗ್ರಭಾಗ—ಹೀಗೆ ಜೈತ್ರಯಾತ್ರೆಗೆ ಹೊರಟನು. ಇತ್ತ ತಾರಕಾಕ್ಷಾದಿ ಗಳಿಗೆ, ಅವರ ವೃದ್ಧಮಂತ್ರಿಗಳು "ದುಡುಕಿ ಕಾರ್ಯವನ್ನು ಮಾಡಬಾರದು, ಏಕೆಂದರೆ ನಿಮ್ಮಲ್ಲಿ ಶಿವಭಕ್ತಿ ನಾಶವಾಗಿದೆ, ಇದರಿಂದ ಶಿವನೇ ಯುದ್ಧಕ್ಕೆ ಬಂದಿದ್ದಾನೆ; ಅವನೊಡನೆ ಹೋರಾಡುವುದೆಂದರೆ ಅಸಾಧ್ಯದ ಮಾತು, ಅಲ್ಲದೆ ನಮ್ಮೀ ನಗರಗಳು ಬಂದು ಸೇರುವ ಕಾಲವೂ ಸನ್ನಿಹಿತವಾಗಿದೆ, ಆದ್ದರಿಂದ ಯುದ್ಧಮಾಡದೆ ದೇವದೇವನಾದ ಶಂಕರನನ್ನು ಶರಣುಹೋಗಿರಿ" ಎಂದು ಎಷ್ಟು ಬುದ್ಧಿವಾದ ಹೇಳಿದರೂ ಕೇಳದೆ ತ್ರಿಪುರರು ಯುದ್ಧ ವನ್ನೇ ಆರಂಭಿಸಿದರು. ಶಿವನೊಲುಮೆಯಿಂದ ದೇವತೆಗಳ ಕೈಮೇಲಾಯ್ತು.

ಇತ್ತ ಪಶುಪತಿಯು ತನ್ನ ಮೇರುಧನುಸ್ಸಿನಲ್ಲಿ ವಿಷ್ಣು ಬಾಣವನ್ನು ತೊಟ್ಟು ಆ ತ್ರಿಪುರಗಳು ನಿಲ್ಲುವುದನ್ನೇ ರೆಪ್ಪೆ ಬಡಿಯದೆ ನೋಡುತ್ತಿದ್ದನು. ಬ್ರಹ್ಮನ ವರದಂತೆ ಪ್ರಾಪ್ತಕಾಲದಲ್ಲಿ ಆ ನಗರಗಳು ನಿಂತುಬಿಡಲು ಕೂಡಲೇ ಶಂಕರನು ಆ ಬಾಣವನ್ನು ಪ್ರಯೋಗಿಸಿ ನಗರಗಳನ್ನು ಕೆಡಹಿದನು. ಭಯದಿಂದ ಆ ರಾಕ್ಷಸರು ಶಿವನಲ್ಲಿ ಕ್ಷಮೆಬೇಡಿ ತಮ್ಮನ್ನು ಕೈಲಾಸದ ದ್ವಾರಪಾಲಕರನ್ನಾಗಿ ನೇಮಿಸಿಕೊಳ್ಳಲು ಪ್ರಾರ್ಥಿಸಿದರು. ಅದರಂತೆ ಶಂಕರನು ಅವರನ್ನು ಅನುಗ್ರಹಿಸಿದನು. ಇಂತು ತ್ರಿಪುರಗಳನ್ನು ನಾಶಗೊಳಿಸಿ ಶಿವನು ತ್ರಿಪುರಹರನೆನಿಸಿದನು.

## ೧೦. ಜಲಂಧರಹರಣಲೀಲೆ

ಒಂದುಸಾರಿ ಶಂಕರನು ಕೈಲಾಸದಲ್ಲಿ ಒಡ್ಡೋಲಗದಲ್ಲಿರಲು, ಇಂದ್ರನು ತನಗೊಬ್ಬ ವೈರಿಯನ್ನು ಕರುಣಿಸಬೇಕೆಂದು ಬೇಡಿದನು. ಶಿವನು ಬೇಡವೆಂದು ಹೇಳಿದರೂ ಇಂದ್ರನು ಕೇಳಲಿಲ್ಲ. ಆಗ ಶಿವನು ಕೋಪಗೊಳ್ಳಲು ಫಾಲನೇತ್ರವು ಸ್ವಲ್ಪ ತೆರೆದುದರಿಂದ ಹೊರಹೊರಟ ಅಗ್ನಿಯ ಕಿಡಿಯು ಇಂದ್ರನನ್ನು ದಹಿಸಬರುವಷ್ಟರಲ್ಲಿ ದೇವತೆಗಳಾದಿಯಾಗಿ ಸರ್ವರೂ ಶಿವನನ್ನು ಬೇಡಿಕೊಂಡರು. ಪ್ರಸನ್ನನಾದ ಶಂಕರನು, ಆ ಕಿಡಿಯನ್ನು ಸಮುದ್ರಕ್ಕೆಸೆದು, ‘ ನಿನ್ನ ವೈರಿಯು ಸಮುದ್ರದಲ್ಲಿ ಬೆಳೆಯುತ್ತಿರುವನು ’ ಎಂದು ಇಂದ್ರನಿಗೆ ಹೇಳಿದನು. ಇದೇ ಸಂದರ್ಭದಲ್ಲೇ ಇಂದ್ರನನ್ನು ಜಯಿಸುವ ವೀರಪುತ್ರನೋರ್ವನನ್ನು ಬಯಸಿ ಸಮುದ್ರರಾಜನು ಶಂಕರನನ್ನು ಕುರಿತು ತಪಸ್ಸುಮಾಡುತ್ತಿದ್ದನು. ಶಿವನು ಚಿಮ್ಮಿದ ಫಾಲನೇತ್ರಾಗ್ನಿ ಕಿಡಿಯು ಸಮುದ್ರದಲ್ಲಿ ಶಿಶುರೂಪವನ್ನು ತಾಳಿ ಚೀರುತ್ತಿತ್ತು. ಇದರಿಂದೆಚ್ಚೆತ್ತ ಸಮುದ್ರರಾಜನು ಈ ಶಿಶುವನ್ನು ಶಿವನೇ ಕರುಣಿಸಿದನೆಂದು ಬಗೆದು ಸಾಕುತ್ತಿದ್ದನು. ಒಂದು ದಿನ ಬ್ರಹ್ಮನು ಅಲ್ಲಿಗೆ ಬರಲು, ತನ್ನ ಶಿಶುವನ್ನು ಆಶೀರ್ವದಿಸಲು ಆತನ ಕೈಗಿತ್ತನು. ಶಿಶುವು ಬ್ರಹ್ಮನ ಗಡ್ಡವನ್ನು ಹಿಡಿದೆಳೆಯಿತು. ಬಾಧೆಪಟ್ಟ ಬ್ರಹ್ಮನ ಕಣ್ಣಿಂದ ನೀರಹನಿಗಳು ಶಿಶುವಿನ ಮೇಲೆ ಬಿದ್ದವು. ಆದ್ದರಿಂದ ಶಿಶುವಿಗೆ ಜಲಂಧರನೆಂದು ನಾಮಕರಣ ಮಾಡಿ, ‘ ಸಮುದ್ರರಾಜ! ಇವನು ತ್ರಿಲೋಕಾಧಿಪತಿಯಾಗುತ್ತಾನೆ,

ಈತನಿಗೆ ಶಿವನಿಂದಲ್ಲದೆ ಬೇರಾರಿಂದಲೂ ಯಾವ ಆಯುಧದಿಂದಲೂ ಮರಣವಿಲ್ಲ' ಎಂದು ಹೇಳಿ ಅಂತರ್ಧಾನನಾದನು.

ಬೆಳೆದು ಯೌವನಸ್ಥನಾದ ಜಲಂಧರನು ಕಾಲನೇಮಿಯ ಮಗಳಾದ ವೃಂದೆಯನ್ನು ಮದುವೆಯಾಗಿ ರಾಜ್ಯವಾಳುತ್ತಾ ಪ್ರಬಲವಾದ ರಾಕ್ಷಸ ಸೇನೆಯನ್ನು ಸಜ್ಜುಗೊಳಿಸಿಕೊಂಡು ದೇವಲೋಕವನ್ನು ಮುತ್ತಿದನು. ದೇವೇಂದ್ರನು ಯುದ್ಧದಲ್ಲಿ ಪರಾಜಯವನ್ನು ಹೊಂದಿ ಬ್ರಹ್ಮನನ್ನು ಮರೆಹೊಕ್ಕನು. ಜಲಂಧರನ ಪರಾಕ್ರಮವನ್ನು ತಿಳಿದಿದ್ದ ಬ್ರಹ್ಮನು ಇಂದ್ರನನ್ನು ಕರೆದುಕೊಂಡು ವಿಷ್ಣುವಿನೆಡೆಗೆ ಬಂದನು. ಇತ್ತ—ವಿಷ್ಣುವಿನೊಡನೆ ದೇವೇಂದ್ರನು ಸಮಾಲೋಚಿಸುತ್ತಿರುವುದಾಗಿಯೂ ವಿಷ್ಣುವು ತನ್ನ ಮೇಲೆ ಯುದ್ಧಕ್ಕೆ ಬರುವುದಾಗಿಯೂ ಜಲಂಧರನಿಗೆ ವಿಷಯವು ತಿಳಿದುಬಂದಿತು. ಕೂಡಲೇ ರಾಕ್ಷಸಸೇನೆಯು ವೈಕುಂಠವನ್ನು ಮುತ್ತಿತು. ಯುದ್ಧದಲ್ಲಿ ವಿಷ್ಣುವು ಸೋತುಹೋದನು. ವಿಷ್ಣುವೊದಲಾದ ದೇವವೃಂದವನ್ನೆಲ್ಲಾ ಜಲಂಧರನು ತನ್ನ ಊಳಿಗದಲ್ಲಿರಿಸಿಕೊಂಡನು. ಹೀಗಿರಲು ದೇವತೆಗಳೆಲ್ಲ ಒಟ್ಟುಸೇರಿ ಪರಶಿವನನ್ನೇ ಶರಣುಹೋಗಬೇಕೆಂದು ನಿಶ್ಚಯಿಸಿ ಅಲ್ಲಿಂದ ಅವನಿಗೆ ತಿಳಿಯದಂತೆ ಕೈಲಾಸಕ್ಕೆ ಬಂದರು. ಶಂಕರನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸಿದರು. ಜಲಂಧರನನ್ನು ಸಂಹರಿಸಲು ಶಿವನು ಅಭಯವಿತ್ತನು. ಇತ್ತ ಜಲಂಧರನು, ದೇವತೆಗಳೆಲ್ಲರೂ ಕೈಲಾಸಕ್ಕೆ ಹೋಗಿ ಯುದ್ಧಕ್ಕೆ ಶಿವನನ್ನು ಪ್ರೇರೇಪಿಸುತ್ತಿರುವರೆಂಬಂಶವನ್ನು ನಾರದರಿಂದ ತಿಳಿದು ಕೈಲಾಸವನ್ನೇ ಮುತ್ತಲುಜ್ಜುಗಿಸಿ ರಾಕ್ಷಸಸೈನ್ಯವನ್ನು ಹೊರಡಿಸಿದನು.

ಪುನಃ ಕೈಲಾಸದಲ್ಲಿ ದೇವಾಸುರಯುದ್ಧವು ಮೊದಲಾಯ್ತು. ತನ್ನೆಲ್ಲ ಪರಾಕ್ರಮವೂ ಶಿವನೆದುರು ನಡೆಯದಾಯ್ತು. ಮಾಯಾಜಲಂಧರನಾಗಿ ವಿಷ್ಣುವು ವೃಂದೆಯ ಬಳಿ ಇದೇ ಕಾಲದಲ್ಲಿದ್ದನು. ಆದ್ದರಿಂದಲೇ ಜಲಂಧರನ ಗದೆ-ಖಡ್ಗ-ಪರಶು ಮುಂತಾದ ಎಲ್ಲ ಆಯುಧಗಳೂ ವ್ಯರ್ಥವಾದುವು. ಮುಷ್ಟಿಕಾಳಗಕ್ಕೆ ಕೂಡ ತೊಡಗಿದನು. ಆಗ ಶಂಕರನು ತನ್ನ ಪಾದಾಂಗುಷ್ಠದಿಂದ ಸಮುದ್ರದಮೇಲೆ ಚಕ್ರವನ್ನು ಬರೆದು ಅದನ್ನು ದಿವ್ಯದೃಷ್ಟಿಯಿಂದ ನೋಡಲು, ಆ ಚಕ್ರಾಯುಧವು ವೇಗದಿಂದ ಬಂದು

ಜಲಂಧರನ ಶಿರಸ್ಸನ್ನು ಕತ್ತರಿಸಿತು. ಕೂಡಲೇ ಆತನಿಗೆ ಜ್ಞಾನೋದಯ ವಾಗಿ ಪರಶಿವನನ್ನು ಬಹಳವಾಗಿ ಸ್ತೋತ್ರ ಮಾಡಿದನು. ಕರುಣಾಮೂರ್ತಿ ಯಾದ ಶಂಕರನು ಮೆಚ್ಚಿ, 'ವತ್ಸ! ನಿನ್ನ ವರವೇನು?' ಎನ್ನಲು, 'ಸ್ವಾಮಿ! ನೀನಾರೆಂಬುದನ್ನರಿಯದೆ ಅಹಂಕಾರದಿಂದ ಈ ಕೃತ್ಯವನ್ನೆಸಗಿ ನಿನ್ನ ಕೋಪಕ್ಕೆ ತುತ್ತಾದೆ. ನನ್ನನ್ನು ಕ್ಷಮಿಸಿ ಕಾಪಾಡುವೆಯಾದರೆ ನನ್ನೀ ಶಿರಸ್ಸನ್ನು ನಿನ್ನ ರುಂಡಮಾಲೆಯಲ್ಲಿ ಮಧ್ಯಮಣಿಯನ್ನಾಗಿ ಮಾಡಿಕೋ' ಎಂದು ಬೇಡಿದನು. ಶಂಕರನು ಅದರಂತೆ ಕರುಣಿಸಿದನು. ಜಲಂಧರನ ಆತ್ಮವು ಶಂಕರನಲ್ಲಿಯೂ, ವೃಂದೆಯ ಆತ್ಮವು ಪಾರ್ವತಿ ಯಲ್ಲಿಯೂ ಐಕ್ಯವಾಯಿತು. ಹೀಗೆ ಶಿವನು ಕ್ರೂರಿಯಾದ ಜಲಂಧರ ನನ್ನು ಸಂಹರಿಸಿ ಜಲಂಧರಹರನೆನಿಸಿ ಮೆರೆದನು.

## ೧೧. ಬ್ರಹ್ಮಸಂಹರಣಲೀಲೆ

(ಅ) ಒಂದುಸಾರಿ ಬ್ರಹ್ಮನ ಒಡ್ಡೋಲಗದಲ್ಲಿ ಋಷಿಮುಖ್ಯರೆಲ್ಲರೂ ಬ್ರಹ್ಮನನ್ನು ಕುರಿತು, 'ಸ್ವಾಮಿ! ನಿತ್ಯನೂ, ಜ್ಞಾನಸ್ವರೂಪನೂ, ಪೂಜ್ಯನೂ ಆದ ಪರಮಾತ್ಮನಾರು?' ಎಂದು ಪ್ರಾರ್ಥಿಸಿದರು. ಬ್ರಹ್ಮನು ಅಹಂಕಾರದಿಂದ, 'ಆ ಪರಮಾತ್ಮನು ನಾನೇ' ಎಂದು ಹೇಳಿದನು. ಈತನ ಅಹಂಕಾರವನ್ನು ತಿಳಿದ ವಿಷ್ಣುವು, 'ನಿನಗೀ ಅಹಂಕಾರ ಸರಿಯಲ್ಲ, ನಮಗೆಲ್ಲ ಪೂಜ್ಯನಾಗಿ ಕಾರಣಪುರುಷನೊಬ್ಬನಿರುವನು. ಆತನೇ ಪರಶಿವನು' ಎಂದೆಚ್ಚರಿಸಿದರೂ ಕೇಳದೆ ಬ್ರಹ್ಮನು ವಿಷ್ಣುವನ್ನೇ ಜರಿದನು. ಮತ್ತು ಬಹಳವಾಗಿ ನಿಂದಿಸಿದನು. ಆಗ ಶಂಕರನು ಮಹಾಭೈರವನ ರೂಪ ವನ್ನು ತಾಳಿ ಬ್ರಹ್ಮನ ಐದು ಶಿರಸ್ಸುಗಳಲ್ಲೊಂದನ್ನು ಚಿವುಟಿ ಬ್ರಹ್ಮಶಿಕ್ಷಕ ನೆನಿಸಿದನು.

(ಆ) ಕಲ್ಪದಾದಿಯಲ್ಲಿ ಶಿವನಪ್ಪಣೆಯಂತೆ ಸೃಷ್ಟಿಕಾರ್ಯದಲ್ಲಿ ತೊಡಗಿದ ಬ್ರಹ್ಮನು, ಪರಶಿವನ ಶಕ್ತಿಸ್ವರೂಪಿಣಿಯ ಆದೇಶದಂತೆ ತನ್ನ ವರಶಕ್ತಿಯನ್ನು ಸರಸ್ವತಿಯನ್ನಾಗಿ ಸೃಷ್ಟಿಸಿದನು. ಆಗ, ಆಕೆಯ ರೂಪು ಲಾವಣ್ಯಗಳಿಗೆ ಬೆರಗಾಗಿ ಮನಸೋತು, ಆಕೆಯಲ್ಲಿ ಸೇರಲು ಆಕೆಯನ್ನು ಬಲಾತ್ಕರಿಸಿದನು. ಆಗ ಸರಸ್ವತಿಯು, 'ಪಿತಾಮಹ! ಶಿವನ ಶಕ್ತಿ

ದೇವಿಯ ಆಜ್ಞೆಯಂತೆ ನನ್ನನ್ನು ಸೃಷ್ಟಿಸಿರುವುದರಿಂದ ನನಗೆ ನೀನು ತಂದೆ ಯಾಗಿರುವೆ. ನಿನ್ನೀ ಕೃತ್ಯದಿಂದ ಜಗತ್ತೇ ಅಧರ್ಮದಲ್ಲಿ ತೊಡಗುತ್ತದೆ. ಆದ್ದರಿಂದ ಹೀಗೆ ಮಾಡಬೇಡ' ಎಂದು ಎಷ್ಟು ಬೇಡಿದರೂ ಬಿಡದೆ ಕಾಮಾತುರನಾಗಿ ಬಲಾತ್ಕರಿಸುತ್ತಿರಲು, ದಿಕ್ಕುಗಾಣದೆ ಸರಸ್ವತಿಯು ಕೂಡಲೇ ಹೆಣ್ಣುಜಿಂಕೆಯ ರೂಪು ತಾಳಿ ಅರಣ್ಯಕ್ಕೆ ಧಾವಿಸಿದಳು. ಬ್ರಹ್ಮನೂ ಸಹ ಗಂಡು ಜಿಂಕೆಯ ರೂಪದಿಂದ ಅವಳನ್ನು ಬಿಡದೆ ಹಿಂಬಾಲಿಸಿದನು. ಗತಿಕಾಣದ ಅವಳು ಶಿವನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದಳು. ತತ್‌ಕ್ಷಣವೇ ಶಂಕರನು ಕಿರಾತವೇಷದಿಂದ ಅಲ್ಲಿಗೆ ಬಂದು ಧನುಸ್ಸಿನಲ್ಲಿ ಬಾಣವನ್ನು ಹೂಡಿ ಗಂಡು ಜಿಂಕೆಯ ರೂಪದಲ್ಲಿದ್ದ ಬ್ರಹ್ಮನನ್ನು ಹೊಡೆದನು. ಬಾಣವು ತನಗೆ ಸೋಂಕಲು ಬ್ರಹ್ಮನ ಅಜ್ಞಾನವು ತೊಲಗಿ ಸುಜ್ಞಾನವು ಮೂಡಿತು. ಆಗ ಶಂಕರನನ್ನು ನಾನಾವಿಧವಾಗಿ ಸ್ತೋತ್ರ ಮಾಡಿ ಕ್ಷಮೆ ಬೇಡಿದನು. ಪ್ರಸನ್ನನಾದ ಶಂಕರನು ಅನುಗ್ರಹಿಸಿ, ಮುಂದಿನ ಸೃಷ್ಟಿಕಾರ್ಯವು ಸುಗಮವಾಗಲೋಸುಗ, ಬ್ರಹ್ಮನ ಪ್ರಾರ್ಥನೆಯಂತೆಯೇ ಆತನಿಗೆ ಯಾವಲೋಕಾಪವಾದವೂ ಬಾರದಂತೆ ಆ ಈರ್ವರಿಗೂ ವಿವಾಹ ಮಾಡಿದನು. ಹೀಗೆ ಬ್ರಹ್ಮಸಂಹರಣಮಾಡಿ ಪುನಃ ಆತನನ್ನುದ್ಧರಿಸಿ ಬ್ರಹ್ಮಸಂಹರಣನೆನಿಸಿದನು.

## ೧೨. ವೀರಭದ್ರಲೀಲೆ

ಒಂದುಸಾರಿ ದಕ್ಷಬ್ರಹ್ಮನು ತನ್ನ ಎಲ್ಲ ಪುತ್ರಿಯರನ್ನು ನೋಡಿಬರಬೇಕೆಂದು ಇಂದ್ರ ಮುಂತಾದ ಅಳಿಯಂದಿರ ಮನೆಗೆ ಹೊರಟನು. ಎಲ್ಲರ ಮನೆಗಳಲ್ಲಿ ವೈಭವದ ಸನ್ಮಾನವನ್ನು ಹೊಂದಿ ಕಡೆಗೆ ಪ್ರೀತಿಯ ಅಳಿಯನೆನಿಸಿದ ಶಂಕರನನ್ನೂ ಮತ್ತು ಪ್ರೀತಿಯ ಮಗಳಾದ ದಾಕ್ಷಾಯಣಿಯನ್ನೂ ನೋಡಲು ಕೈಲಾಸಕ್ಕೆ ಬಂದನು. ಅಲ್ಲಿ ಸುರನರೋರಗಾದಿಗಳಿಂದಲೂ ಮನುಮುನಿಗಳಿಂದಲೂ ಬ್ರಹ್ಮೇಂದ್ರಾದಿಗಳಿಂದಲೂ ಸೇವಿಸಲ್ಪಡುತ್ತಾ ಅತಿವೈಭವದ ಸಭೆಯ ಮಧ್ಯದಲ್ಲಿ ಕಂಗೊಳಿಸುತ್ತಿದ್ದ ಮಹೇಶ್ವರನನ್ನು ನೋಡಿ ಬಹಳವಾಗಿ ಆನಂದಿಸಿದನಾದರೂ ಅಲ್ಲಿ ಆತನಿಗೆ ಮರ್ಯಾದೆ ಸಿಗದೆ ಮರಳಿದನು. ಮನಸ್ಸಿನಲ್ಲಿಯೇ ಕುದಿಯುತ್ತಿದ್ದ ದಕ್ಷನು,

'ಮಾವನಾದ ನನ್ನನ್ನು ಸತ್ಕರಿಸದೆ ಅಪಮಾನಪಡಿಸಿದ ಈ ಭಿಕ್ಷುಕನನ್ನು ಹೇಗಾದರೂ ಅಪಮಾನಪಡಿಸಲೇಬೇಕು' ಎಂದು ಸಂಕಲ್ಪಿಸಿ, ಬ್ರಹ್ಮ-ವಿಷ್ಣು-ಇಂದ್ರ ಮುಂತಾದ ಆಳಿಯಂದಿರೊಂದಿಗೆ ಸಮಾಲೋಚಿಸಿದನು. ಅವರು, 'ಸರ್ವಕರ್ತೃವಾದ ಆ ಶಂಕರನೊಂದಿಗೆ ವೈರಸಾಧನೆ ಬೇಡ' ವೆಂದು ಎಷ್ಟು ಹೇಳಿದರೂ ಕೇಳದೆ, ವೈಭವದ ಯಾಗವೊಂದನ್ನು ಆರಂಭಿಸುವುದಾಗಿಯೂ, ಅವರಲ್ಲಿ ಶಂಕರನಿಗೆ ಹವಿರ್ಭಾಗವನ್ನೀಯದೆ ಅಪಮಾನ ಪಡಿಸುವುದಾಗಿಯೂ ನಿಶ್ಚಯಿಸಿ ಅದರಂತೆ ಯಾಗವನ್ನಾರಂಭಿಸಿದನು. ಉಮಾಮಹೇಶ್ವರರನ್ನುಳಿದು ಮಿಕ್ಕೆಲ್ಲರಿಗೂ ಆಹ್ವಾನವನ್ನಿತ್ತನು.

ಯಾಗಕಾರ್ಯವಾರಂಭವಾಯ್ತು. ಸ್ಮರಣೆಮಾತ್ರದಿಂದಲೇ ಎಲ್ಲ ಪದಾರ್ಥಗಳೂ ಅಲ್ಲಿ ಸಿದ್ಧವಾಗುತ್ತಿದ್ದುವು. ಮೊದಲ ಭಾಗದ ಹವಿಸ್ಸನ್ನು ಶಂಕರನಿಗೆ ಅರ್ಪಿಸದೆ ಯಾಗಮಾಡಲಾರಂಭಿಸಿದ್ದನ್ನು ಮುನಿಯಾದ ದಧೀಚಿಯು ಖಂಡಿಸಿದನು. ಯಾರ ಉಪದೇಶವೂ ದಕ್ಷನ ಮನಸ್ಸನ್ನು ಕದಲಿಸಲು ಸಮರ್ಥವಾಗಲಿಲ್ಲ. ಯಾಗದಲ್ಲಿ ಬ್ರಹ್ಮ-ವಿಷ್ಣುಗಳು ರಕ್ಷಕರಾಗಿದ್ದು ಎಲ್ಲ ದೇವತೆಗಳೂ ತಮ್ಮ ತಮ್ಮ ಹವಿರ್ಭಾಗವನ್ನು ಸ್ವೀಕರಿಸುತ್ತಿರುವುದನ್ನು ಕಣ್ಣಾರೆ ಕಂಡ ನಾರದನು ನೋಡಿ ಸಹಿಸಲಾರದೆ ಕೂಡಲೇ ಕೈಲಾಸಕ್ಕೆ ಬಂದು ದಕ್ಷನ ಈ ಅಪಚಾರವನ್ನು ಶಿವನಿಗೆ ಬಿನ್ನವಿಸಿದನು. ಶಂಕರನು ಉದಾಸೀನನಾಗಿದ್ದರೂ ಗೌರಿಯು, 'ತಂದೆಗೆ ನಾನೇ ಬುದ್ಧಿವಾದ ಹೇಳಿ ಕಾರ್ಯವನ್ನು ಸರಿಮಾಡಿಸುತ್ತೇನೆ, ನನಗೆ ಹೋಗಲನುಮತಿಕೊಡು' ಎಂದು ಶಿವನನ್ನು ಬೇಡಿದಳು. ಶಿವನು, 'ಅಸೂಯಾಪರನಾದ ನಿಮ್ಮ ತಂದೆಯು ನಿನ್ನನ್ನು ಗೌರವಿಸನು, ನೀನು ಹೋಗಬೇಡ' ಎಂದು ಪರಿಪರಿಯಾಗಿ ಹೇಳಿದರೂ ಕೇಳದೆ ಗೌರಿಯು ಹೊರಟೇಬಿಟ್ಟಳು. ಯಾಗಶಾಲೆಗೆ ಬಂದಳು. ಅಲ್ಲಿ ಅವಳಿಗೆ ದೊರೆತುದು ಮರ್ಯಾದೆಯ ಬದಲು ಅಪಮಾನ. ಶಿವನ ಮಾತು ನೆನಪಿಗೆ ಬಂದು, ತಾನಿನ್ನು ತನ್ನ ಸ್ವಾಮಿಗೆ ಮುಖತೋರಿಸುವುದು ಸರಿಯಲ್ಲವೆಂದು ತಿಳಿದು ಯೋಗಾಗ್ನಿಯಲ್ಲಿ ತನ್ನ ಶರೀರವನ್ನರ್ಪಿಸಿದಳು

ಈ ವಿಷಯವನ್ನರಿತ ಶಂಕರನು ಕೆರಳಿ, ಉಗ್ರಮೂರ್ತಿಯಾದ ವೀರಭದ್ರನನ್ನು ತನ್ನಂಶದಿಂದ ನಿರ್ಮಿಸಿ ದಕ್ಷನ ಯಾಗವನ್ನು ಧ್ವಂಸಮಾಡಿ

ಬರಲು ಅಪ್ಪಣೆಮಾಡಿದನು. ವೀರಾವೇಶದಿಂದ ಹೊರಟುಬಂದ ವೀರೇಶನು ಎಲ್ಲರನ್ನೂ ಸದೆಬಡಿದು ದಕ್ಷನ ಶಿರಸ್ಸನ್ನು ಕತ್ತರಿಸಿದನು. ಮಾಂಗಲ್ಯವನ್ನು ತಟ್ಟೆಯಲ್ಲಿಟ್ಟುಕೊಂಡು ಬಂದು ತಮ್ಮ ಮಾಂಗಲ್ಯವನ್ನುಳಿಸಬೇಕೆಂದು ದಕ್ಷನ ಪತ್ನಿಯರು ವೀರೇಶನನ್ನು ಪ್ರಾರ್ಥಿಸಿದರು. ದಕ್ಷನ ಶಿರಸ್ಸು ಹೋಮಾಗ್ನಿಯಲ್ಲಿ ಭಸ್ಮವಾಗಿತ್ತಾದ್ದರಿಂದ ಆಡೊಂದರ ಶಿರಸ್ಸನ್ನು ದಕ್ಷನ ಶರೀರಕ್ಕೆ ಜೋಡಿಸಿ ಪ್ರಾಣದಾನಮಾಡಿ ಅನುಗ್ರಹಿಸಿದನು. ತನ್ನ ಅವಿವೇಕಕ್ಕೆ ಮರುಗಿದ ದಕ್ಷಬ್ರಹ್ಮನು ಶಿವನನ್ನು ಬಹಳವಾಗಿ ಪ್ರಾರ್ಥಿಸಿ ಕ್ಷಮೆಯಾಚಿಸಿದನು. ಶ್ರೀ ಶಂಕರನು ಹೀಗೆ ವೀರಭದ್ರನಾಗಿ ದಕ್ಷನ ಗರ್ವಭಂಗಮಾಡಿ ಮೆರೆದನು.

## ೧೩. ಶರಭಲೀಲೆ

ಹಿರಣ್ಯಾಕ್ಷನನ್ನು ವಿಷ್ಣುವು ವರಾಹಾವತಾರಿಯಾಗಿ ಸಂಹರಿಸಿದ ನಂತರ, ದುಃಖಿತನೂ ಕುಪಿತನೂ ಆದ ಅವನ ತಮ್ಮ ಹಿರಣ್ಯಕಶಿಪುವು ಬ್ರಹ್ಮನನ್ನು ಕುರಿತು ಉಗ್ರತಪಸ್ಸುಮಾಡಿದನು. ಬ್ರಹ್ಮನು ಪ್ರತ್ಯಕ್ಷನಾಗಲು, 'ದೇವಾ! ನನ್ನ ತಪಸ್ಸಿಗೆ ನೀನು ಮೆಚ್ಚಿರುವೆಯಾದರೆ, ದೇವಗಂಧರ್ವಾದಿಗಳಿಂದಾಗಲೀ, ಮೂರು ಲೋಕಗಳಲ್ಲಾಗಲೀ, ಹಗಲು ರಾತ್ರಿಗಳಲ್ಲಾಗಲೀ, ಮನೆಯ ಒಳ-ಹೊರಗಾಗಲೀ, ಯಾವ ಆಯುಧದಿಂದಲೇ ಆಗಲಿ ನನಗೆ ಮರಣವುಂಟಾಗದಂತೆ ವರವನ್ನು ಕರುಣಿಸು' ಎಂದು ಪ್ರಾರ್ಥಿಸಿ ಅದರಂತೆ ವರವನ್ನು ಪಡೆದು ಲೋಕಕಂಟಕನಾಗಿದ್ದನು. ಈತನ ಪುತ್ರ ಪ್ರಹ್ಲಾದನಾದರೋ ತನ್ನ ಸಂಸ್ಕಾರಬಲದಿಂದ ಅತೀವ ವಿಷ್ಣುಭಕ್ತನಾಗಿದ್ದನು. ಅಷ್ಟೇ ವಿಷ್ಣುದ್ವೇಷಿಯಾದ ತಂದೆಯು ವಿಷ್ಣುಸ್ಮರಣೆಮಾಡದಂತೆ ಪುತ್ರನಿಗೆ ಬುದ್ಧಿ ಹೇಳಿದರೂ ಆತನು ಇನ್ನೂ ಹೆಚ್ಚು ಮಾಡಿದನು. ಕೋಪಗೊಂಡ ದೈತ್ಯರಾಜನು ಪ್ರಹ್ಲಾದನನ್ನು ಪರ್ವತಗಳ ತುದಿಗಳಿಂದ ತಳ್ಳಿಸಿದನು. ಅಗ್ನಿ-ನೀರುಗಳಲ್ಲಿ ಹಾಕಿಸಿದನು. ಕ್ರೂರ ವಿಷಸರ್ಪಗಳಿಂದ ಕಚ್ಚಿಸಿದನು, ಆನೆಗಳಿಂದ ತುಳಿಸಿದನು. ಆದರೆ ವಿಷ್ಣುವಿನ ಅನುಗ್ರಹವು ಈ ಎಲ್ಲ ಕಂಟಕಗಳನ್ನೂ ಸುಲಭವಾಗಿ ಪರಿಹರಿಸಿ ಕಾಪಾಡಿತು. ಮಾರ್ಗವನ್ನೇ ಕಾಣದ ಹಿರಣ್ಯಕಶಿಪುವು ತನ್ನ ಪತ್ನಿಯ ಕೈಯಿಂದಲೇ

ಮಗನಿಗೆ ವಿಷವನ್ನು ಕೊಡಿಸಿದನು. ಪ್ರಹ್ಲಾದನು ವಿಷ್ಣುಧ್ಯಾನಮಾಡುತ್ತಾ ವಿಷಪಾನ ಮಾಡಿದನು. ಆಪರದು ಅಮೃತವೇ ಆಯ್ತು. ಕುಪಿತನಾಗಿ ಮಗನ ಕೈ ಹಿಡಿದೆಳೆದು, "ಮರುಳಾ! ಆ ನಿನ್ನ ಹರಿಯು ಎಲ್ಲಿರುವನು ತೋರಿಸು" ಎನ್ನಲು, ಮಗನು, "ಈ ಕಂಭದಲ್ಲಿರುವನು" ಎಂದು ಬೆರಳು ತೋರಿದಾಕ್ಷಣವೇ ತಂದೆಯು ತನ್ನ ಗದೆಯಿಂದ ಕಂಭವನ್ನಪ್ಪಳಿಸಿದನು. ಕೂಡಲೇ ಆ ಕಂಭದಿಂದ ವಿಷ್ಣುವು ನರಸಿಂಹನಾಗಿ ಅವತರಿಸಿ, ಸಂಧ್ಯಾ ಕಾಲದಲ್ಲಿ ಹೊಸ್ತಿಲಮೇಲೆ ಕುಳಿತು, ಹಿರಣ್ಯಕಶಿಪುವನ್ನು ತನ್ನ ತೊಡೆಯ ಮೇಲಿರಿಸಿಕೊಂಡು ತನ್ನ ಉಗುರುಗಳಿಂದಲೇ ಆತನ ವಕ್ಷಸ್ಥಳವನ್ನು ಬಗೆದು ಹಾಕಿದನು. ಇದಾದಬಳಿಕ ಈ ನೃಸಿಂಹನು ಲೋಕಗಳನ್ನೇ ಭಕ್ಷಿಸುತ್ತಿರಲು, ಭೀತರಾದ ದೇವತೆಗಳು ಶಂಕರನನ್ನು ಮೊರೆಯಿಟ್ಟರು. ಆಗ ಶಿವನು, "ಭೃಗುಮುನಿಯಿಂದ ವಿಷ್ಣುವಿಗೆ ದಶಾವತಾರವನ್ನು ಹೊಂದುವ ಶಾಪವೂ, ನನ್ನ ಅನುಗ್ರಹದಿಂದ ಶಾಪವಿಮೋಚನೆಯೂ ಉಂಟಾಗಿರುತ್ತದೆಯಾದ್ದರಿಂದ ಹೆದರಬೇಡಿ" ಎಂದು ಧೈರ್ಯಹೇಳಿ, ಕೂಡಲೇ ತಾನು ತನ್ನ ವೀರೇಶಾಂಶದಿಂದ ಶರಭಾಕೃತಿಯನ್ನು ಹೊಂದಿ ನೃಸಿಂಹನನ್ನು ಸಂಹರಿಸಿ ಲೋಕಗಳನ್ನುದ್ಧರಿಸಿದನು.

## ೧೪. ಅರ್ಧನಾರೀಶ್ವರಲೀಲೆ

(ಅ) ಒಂದುಸಾರಿ ವಿಷ್ಣುವು ಕ್ಷೀರಸಾಗರದಲ್ಲಿ ಶೇಷಶಾಯಿಯಾಗಿರಲು ಬ್ರಹ್ಮನು ಅಲ್ಲಿಗೆ ಬಂದನು. ಆಗ ವಿಷ್ಣುವು ಮಲಗಿಯೇ ಬ್ರಹ್ಮನನ್ನು ಕುಶಲಪ್ರಶ್ನೆಮಾಡಿದನು. ವಿಷ್ಣುವಿನ ಈ ಉದಾಸೀನತೆಗೆ ಕೋಪಗೊಂಡ ಬ್ರಹ್ಮನು, 'ಸಮಸ್ತ ಜಗತ್ತನ್ನೂ ಸೃಷ್ಟಿಸುವ ನನಗೆ ಗೌರವ ನೀಡದೆ ಅಹಂಕಾರದಿಂದ ಉದಾಸೀನನಾಗಿರುವೆ' ಎಂದನು. ಅದಕ್ಕೆ ವಿಷ್ಣುವು 'ನೀನು ಸೃಷ್ಟಿಕರ್ತನಾದರೆ ನಾನು ರಕ್ಷಕನಾಗಿರುವೆ. ನನ್ನ ರಕ್ಷಣೆಯಿಲ್ಲದೆ ನೀನು ಬದುಕಲಾರೆ. ನಿನ್ನನ್ನ ನೀನೇ ಹೊಗಳಿಕೊಳ್ಳಲು ನಾಚಿಕೆಯಾಗುವುದಿಲ್ಲವೇ?' ಎಂದು ಮೂದಲಿಸಿದನು. ಇನ್ನೂ ಕುಪಿತನಾದ ಬ್ರಹ್ಮನು, 'ಯುದ್ಧದಲ್ಲಿ ಮೇಲುಕೀಳುಗಳ ನಿರ್ಣಯವಾಗಲಿ, ಯುದ್ಧಕ್ಕೆ ಬಾ' ಎಂದು ಕರೆದು ತಾನೂ ಸಿದ್ಧನಾದನು. ಈರ್ವರಿಗೂ ಘೋರಯುದ್ಧವೇ

ನಡೆಯಿತು. ವಿಷ್ಣುವು ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದರೆ ಬ್ರಹ್ಮನು ಮೇಘಾಸ್ತ್ರದಿಂದ ತಡೆದನು. ವಿಷ್ಣುವಿನ ವರುಣಾಸ್ತ್ರವನ್ನು ಬ್ರಹ್ಮನು ವಾಯ್ವಸ್ತ್ರದಿಂದ ಕತ್ತರಿಸಿದನು. ಬ್ರಹ್ಮನ ಸರ್ಪಾಸ್ತ್ರಕ್ಕೆ ವಿಷ್ಣುವಿನ ಗರುಡಾಸ್ತ್ರ, ಬ್ರಹ್ಮನ ಬ್ರಹ್ಮಾಸ್ತ್ರಕ್ಕೆ ವಿಷ್ಣುವಿನ ವೈಷ್ಣವಾಸ್ತ್ರ ಹೀಗೆ ಅಸ್ತ್ರ-ಪ್ರತ್ಯಸ್ತ್ರಗಳು ಹೋರಾಡಿದವು. ಯಾರಿಗೂ ಜಯವು ಲಭಿಸಲಿಲ್ಲ. ಕೊನೆಗೆ ಬ್ರಹ್ಮನು, ಶಿವನು ತನಗೆ ಕೊಟ್ಟಿದ್ದ ಪಾಶುಪತಾಸ್ತ್ರವನ್ನು ಬಿಟ್ಟನು. ವಿಷ್ಣುವೂ ಸಹ ತಾನೂ ಶಿವನಿಂದ ಪಡೆದಿದ್ದ ಪಾಶುಪತಾಸ್ತ್ರವನ್ನೇ ಬಿಟ್ಟನು. ಎರಡೂ ಅಸ್ತ್ರಗಳು ಪರಸ್ಪರ ಸೇರಿ ಅಪಾರ ಅಗ್ನಿಜ್ವಾಲೆಯನ್ನು ಕಾರುತ್ತಿದ್ದವು. ಈ ಜ್ವಾಲೆಯು ಜಗತ್ತುಗಳನ್ನೇ ಸುಡುತ್ತಲಿತ್ತು. ಆಗ ಈರ್ವರಿಗೂ ಜ್ಞಾನೋದಯವಾಗಿ ಶಿವನನ್ನು ಪ್ರಾರ್ಥಿಸಿದರು. ಇವರ ಪ್ರಾರ್ಥನೆಯು ತೀವ್ರವಾದಂತೆ ಇತ್ತ ಜ್ವಾಲೆಯೂ ಕ್ರಮವಾಗಿ ಶಾಂತವಾಯ್ತು. ಅಸ್ತ್ರಗಳನ್ನು ತನ್ನಲ್ಲಿ ಲೀನಮಾಡಿಕೊಂಡ ಶಿವನು ಇವರಿಗೆ ಬುದ್ಧಿ ಕಲಿಸಬೇಕೆಂಬ ದೃಷ್ಟಿಯಿಂದ ಲಿಂಗರೂಪವನ್ನು ತಾಳಿ ಅಲ್ಲಿಯೇ ತನ್ನ ಶಕ್ತಿಸಹಿತ ಅರ್ಧನಾರೀಶ್ವರನಾಗಿ ಕಂಗೊಳಿಸಿದನು. ಎಡಭಾಗ ಸುವರ್ಣಕಾಂತಿಯ ಸ್ತ್ರೀದೇಹ, ಬಲಭಾಗ ಶ್ಯಾಮವರ್ಣದ ಪುರುಷದೇಹ; ಒಂದೆಡೆ ತುರುಬು, ಮತ್ತೊಂದೆಡೆ ಜಟಾಪಟಲ; ಹಾಗೆಯೇ ವಜ್ರದ ಕಿವಿಯೋಲೆ-ಕರ್ಣಕುಂಡಲ, ಕುಂಕುಮ-ತಿಲಕ-ಉರಿನೇತ್ರ, ಹರಿದ್ರಾಲೇಪನ-ಭಸ್ಮೋದ್ಧೂಳನ, ಕಂಠಾಹಾರ-ಸರ್ಪಮಾಲೆ, ಕನ್ನೈದಿಲೆ-ತ್ರಿಶೂಲ, ಪೀತಾಂಬರ-ಚರ್ಮಾಂಬರ; ಮುಂತಾದ ಅಲಂಕಾರಗಳಿಂದೊಪ್ಪುತ್ತಿದ್ದ ಆ ಅರ್ಧನಾರೀಶ್ವರಮೂರ್ತಿಯನ್ನು ಇಬ್ಬರೂ ನೋಡಿ ಭಯಭಕ್ತಿಗಳಿಂದ ನಮಸ್ಕರಿಸಿ ಸ್ತೋತ್ರಮಾಡಿದರು.

(ಆ) ಒಂದುಸಾರಿ ಬ್ರಹ್ಮನು ಶಿವನನ್ನು ಕುರಿತು, 'ಸ್ವಾಮಿ! ನಿನ್ನಪ್ಪಣೆಯಂತೆ ಜಗತ್ತನ್ನು ಸೃಷ್ಟಿಮಾಡುತ್ತಲಿದ್ದೇನೆ. ಆದರೂ ನೀನು ನನ್ನ ಶರೀರದಲ್ಲಿ ಜನಿಸಬೇಕೆಂಬುದೊಂದು ನನ್ನ ಬಯಕೆ. ಕೃಪೆಮಾಡಿ ನಡೆಸಿಕೊಡು' ಎಂದು ಬೇಡಿದನು. ಆಗ ಶಿವನು, 'ನಾನು ನಿನ್ನಲ್ಲಿ ಜನಿಸುವುದೆಂದರೆ ನೀನು ಅಂತ್ಯವಾದಂತೆಯೇ. ಆದ್ದರಿಂದ ಈ ಕೋರಿಕೆ ಬೇಡ' ಎಂದು ಹೇಳಿದರೂ ಕೇಳದೆ ಪುನಃ ಪ್ರಾರ್ಥಿಸಿದನು. ಶಿವನು

ಒಪ್ಪಿ, ಯೋಗವನ್ನವಲಂಬಿಸೆಂದು ಆಪ್ಪಣೆ ಮಾಡಿದನು. ಅದರಂತೆ ಬ್ರಹ್ಮನು ವಾಯುಗಳನ್ನು ಬಂಧಿಸಿ ಆ ವಾಯುಗಳನ್ನು ಭ್ರೂಮಧ್ಯದಲ್ಲಿ ಯೋಜಿಸಿರುವಾಗ ಅಲ್ಲಿ ಶಿವನು ಶಕ್ತಿಸಹಿತನಾಗಿ ದಶಕೋಟಿ ಸೂರ್ಯರ ತೇಜಸ್ಸಿನಿಂದ ಹೊಳೆಯುತ್ತಿದ್ದನು. ಆಗ ಆ ಶಿವ-ಶಕ್ತಿಯರ ಅಂಶವು ರುದ್ರ ಮತ್ತು ಮಹಾ ಕಾಳಿಯರ ರೂಪಿನಿಂದ ಹೊರಹೊಮ್ಮಿತು. ಇದನ್ನು ನೋಡಿ ಭಯಗೊಂಡ ಬ್ರಹ್ಮನು ದೇವನನ್ನು ಸೌಮ್ಯವಾದ ಏಕರೂಪದಿಂದ ಕಾಣಿಸಿಕೊಳ್ಳಲು ಪ್ರಾರ್ಥಿಸಿದನು. ಅದರಂತೆ ಸೌಮ್ಯವಾದ ಅರ್ಧನಾರೀಶ್ವರರೂಪಿನಿಂದ ಗೋಚರಿಸಿದನು.

## ೧೫. ಕಿರಾತಲೀಲೆ

(ಅ) ಬ್ರಹ್ಮನು ತನ್ನ ಪರಶಕ್ತಿಯನ್ನು ಸರಸ್ವತಿಯನ್ನಾಗಿ ಸೃಷ್ಟಿಸಿ ಆಕೆಯಲ್ಲೇ ಮೋಹಿತನಾದನು. ಸರಸ್ವತಿಯು ಬುದ್ಧಿವಾದ ಹೇಳಿದರೂ ಬ್ರಹ್ಮನು ಕೇಳದೆ ಬಲಾತ್ಕರಿಸಲು ಅವಳು ಜಿಂಕೆಯ ರೂಪುತಾಳಿ ಧಾವಿಸಿದಳು. ಬ್ರಹ್ಮನೂ ಜಿಂಕೆಯ ರೂಪದಿಂದಲೇ ಅವಳನ್ನು ಬೆನ್ನಟ್ಟಿದನು. ಕೊನೆಗೆ ಸರಸ್ವತಿಯು ಶಿವನಲ್ಲಿ ಮೊರೆಯಿಟ್ಟಳು. ಕಿರಾತರೂಪಿನಿಂದ ಬಂದ ಶಂಕರನು ಜಿಂಕೆಯ ರೂಪಿನಲ್ಲಿದ್ದ ಬ್ರಹ್ಮನನ್ನು ಕೊಂದನು. ಕೊನೆಗೆ ಇಬ್ಬರನ್ನೂ ಅನುಗ್ರಹಿಸಿ ಅವರಿಗೆ ವಿವಾಹಮಾಡಿದನು.

(ಆ) ಪಂಚಪಾಂಡವರು ವನವಾಸಮಾಡುತ್ತಾ ಕಾಮ್ಯಕವನದಲ್ಲಿರಲು ಒಂದು ದಿನ ವೇದವ್ಯಾಸರು ಅಲ್ಲಿಗೆ ಬಂದರು. ದ್ರೌಪದಿಯೊಡಗೂಡಿ ಪಾಂಡವರು ಮುನಿಯನ್ನು ಸತ್ಕರಿಸಿದರು. ಪ್ರಸನ್ನನಾದ ಮುನಿಯು, "ಧರ್ಮರಾಜ! ಕೌರವರ ನಾಶಕ್ಕೆ ಅಪಾರಶಕ್ತಿಯನ್ನು ಗಳಿಸಬೇಕಾಗಿದೆ. ಈಗ ಅರ್ಜುನನು ಇಂದ್ರಕೀಲಪರ್ವತಕ್ಕೆ ಹೋಗಿ ಈಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ ಪಾಶುಪತಾಸ್ತ್ರವನ್ನು ಪಡೆದು ಬರಲಿ, ಕಳುಹಿಸು" ಎಂದು ಧರ್ಮರಾಜನನ್ನೊಪ್ಪಿಸಿ ಅರ್ಜುನನಿಗೆ ಶ್ರೀ ಶಿವಪಂಚಾಕ್ಷರೀಮಹಾಮಂತ್ರವನ್ನುಪದೇಶಿಸಿ ಕಳುಹಿಸಿಕೊಟ್ಟನು.

ಅರ್ಜುನನು ಅದರಂತೆ ಹಿರಿಯರಿಂದ ಆಶೀರ್ವಾದವನ್ನು ಪಡೆದು ನಕುಲ-ಸಹದೇವ ಮತ್ತು ದ್ರೌಪದಿಯರ ಅನುಮತಿಯೊಡನೆ ಇಂದ್ರಕೀಲ

ಪರ್ವತಕ್ಕೆ ಬಂದನು. ನದಿಯಲ್ಲಿ ಮಿಂದು ಭಸ್ಮ-ರುದ್ರಾಕ್ಷಗಳನ್ನು ಧರಿಸಿ, ಶಂಕರನ ದಿವ್ಯಮೂರ್ತಿಯನ್ನು ಮನಸ್ಸಿನಲ್ಲಿ ಭಾವಿಸಿ ಶಿವಪಂಚಾಕ್ಷರಿಯನ್ನು ಜಪಿಸುತ್ತಾ ಒಂದು ಕಾಲಲ್ಲಿ ನಿಂತು ತಪಸ್ಸಿನಲ್ಲಿ ನಿರತನಾದನು. ಕೆಲಕಾಲ ಗೆಡ್ಡೆಗೆಣಸುಗಳ ಆಹಾರ, ಅನಂತರ ತರಗೆಲೆಗಳ ಆಹಾರ, ಬಳಿಕ ಕೇವಲ ನೀರಿನ ಆಹಾರ, ಅಂತ್ಯದಲ್ಲಿ ಕೇವಲ ವಾಯುಸೇವನೆಯಿಂದಲೇ ತಪಸ್ಸು ಮಾಡುತ್ತಿದ್ದನು. ಆ ಬಳಿಕ ವಾಯುಸೇವನೆಯನ್ನೂ ತ್ಯಜಿಸಿ ಪ್ರಾಣವಾಯುವನ್ನು ಬಂಧಿಸಿ ಹೃತ್ಕಮಲದಲ್ಲಿ ಸದಾಶಿವನನ್ನೇ ಧ್ಯಾನಿಸುತ್ತಾ ಯೋಗಸಮಾಧಿಯಲ್ಲಿ ನಿಂತನು.

ಇವನ ಈ ಘೋರತಪಸ್ಸಿನ ಜ್ವಾಲೆಯು ಅಲ್ಲಿನ ಋಷಿಗಳನ್ನೂ ದಹಿಸುತ್ತಿರಲು, ತಾಳಲಾರದ ಅವರು ಕೈಲಾಸಕ್ಕೆ ಬಂದು ಶಂಕರನಲ್ಲಿ ದೂರಿತ್ತರು. ಶಂಕರನು, "ತಾಪಸರೇ! ಅವನ ವಿಷಯದಲ್ಲಿ ಕಳವಳಪಡಬೇಡಿರಿ. ವೀರಕ್ಷತ್ರಿಯನಾದ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲು ನನ್ನನ್ನು ಕುರಿತು ತಪಸ್ಸು ಮಾಡುತ್ತಿರುವನು. ಅವನನ್ನು ಪರೀಕ್ಷಿಸಿ ಅನುಗ್ರಹಿಸಬೇಕಾಗಿದೆ. ನೀವೆಲ್ಲ ನಿರ್ಭಯರಾಗಿರಿ" ಎಂದು ಹೇಳಿ ಕೂಡಲೇ ಕೈಲಾಸದ ಸಕಲ ಗಣಸಮುದಾಯಕ್ಕೆ ಕಿರಾತವೇಷದಿಂದ ಅಲ್ಲಿಗೆ ಹೊರಡಲು ಅಪ್ಪಣೆ ಮಾಡಿ, ತಾನೂ ಸಹ ಪಾರ್ವತಿಯೊಂದಿಗೆ ಕಿರಾತವೇಷಧಾರಿಯಾಗಿ ದೇವಗಣದ ಕಿರಾತಪಡೆಯೊಂದಿಗೆ ಅರ್ಜುನನ ತಪೋಭೂಮಿಗೆ ಬಂದನು. ಈ ಕಿರಾತಸೇನೆಯ ಭೀಕರವಾದ ಕೋಲಾಹಲದಿಂದ ಸಿಡಿದೆದ್ದ ಹಂದಿಯ ರೂಪದಲ್ಲಿದ್ದ ಮೂಕಾಸುರನು ಈ ಪಡೆಯ ಕಡೆಗೆ ಧಾವಿಸಿದನು. ಶಿವನು ಕೂಡಲೇ ದಿವ್ಯಾಸ್ತ್ರವೊಂದನ್ನು ಪ್ರಯೋಗಿಸಿದನು. ಪೆಟ್ಟನ್ನು ತಾಳಲಾರದ ಮೂಕಾಸುರನು ಘೋರವಾಗಿ ಧ್ವನಿಗೈಯುತ್ತಾ ಅರ್ಜುನನಿದ್ದೆಡೆಗೆ ಬಂದನು. ಈ ಶಬ್ದಕ್ಕೆ ಕಣ್ತೆರೆದ ಅರ್ಜುನನು ಕೂಡಲೇ ತನ್ನ ಗಾಂಡೀವದಲ್ಲಿ ದಿವ್ಯಾಸ್ತ್ರವೊಂದನ್ನು ಹೂಡಿ ಹೊಡೆದನು. ಘೀಳಿಡುತ್ತಾ ಮೂಕಾಸುರನು ಸ್ವಲ್ಪದೂರದಲ್ಲಿ ಮಡಿದುಬಿದ್ದನು.

ಇಷ್ಟರಲ್ಲಿ ಶಂಕರನೂ ಬೇಟೆಯನ್ನು ಹುಡುಕುತ್ತಾ ಅಲ್ಲಿಗೆ ಬಂದನು. ಈ ಸತ್ತ ಬೇಟೆಯ ಮೃಗವು ನನ್ನದು-ತನ್ನದು ಎಂಬ ವಾದವು ಕಿರಾತ ಮತ್ತು ಅರ್ಜುನರಲ್ಲುಂಟಾಗಿ ಕೊನೆಗೆ ಇಬ್ಬರೂ ಯುದ್ಧಕ್ಕೆ ನಿಂತರು.

ಅರ್ಜುನನು ಪ್ರಯೋಗಿಸಿದ ಯಾವ ಬಾಣವೂ ಶಿವನನ್ನು ಸೋಂಕಲೇ ಇಲ್ಲ, ದಿವ್ಯಾಸ್ತ್ರಗಳೂ ನಿಷ್ಫಲವಾದುವು. ಆದರೂ ಅರ್ಜುನನ ಪರಾಕ್ರಮಕ್ಕೆ ಶಂಕರನು ಒಳಗೊಳಗೇ ಸಂತೋಷಗೊಂಡನು. ಅರ್ಜುನನ ಅಕ್ಷಯ ಬತ್ತಳಿಕೆ ಬರಿದಾಯ್ತು. ಆಗ ಶಂಕರನು ಅರ್ಜುನನನ್ನು ಮೂದಲಿಸಲು, ಕೋಪಗೊಂಡು ತನ್ನ ಧನುಸ್ಸಿನಿಂದಲೇ ಶಿವನನ್ನು ಹೊಡೆದನು. ಆದರೆ ಅವನ ಧನುಸ್ಸೇ ಮುರಿದುಹೋಯ್ತು. ಕೊನೆಗೆ ಮುಷ್ಟಿಕಾಳಗವಾರಂಭ ವಾಯ್ತು. ಅರ್ಜುನನು ವೀರಾವೇಶದಿಂದ ಕಾದಿದನು. ಶಂಕರನ ಲಘು ಹೊಡೆತಗಳಿಂದ ಅರ್ಜುನನ ಮೂಗು ಬಾಯಿಗಳಲ್ಲಿ ರಕ್ತವು ಚಿಮ್ಮಿ ಮೂರ್ಛೆಹೋದನು. ಅರ್ಜುನನ ಧಿಟ್ಟತನದ ಈ ಹೋರಾಟವನ್ನು ಲೀಲಾ ಮಯನು ಗಿರಿಜೆಗೆ ವಿವರಿಸುತ್ತಾ ಸಂತೋಷಗೊಳ್ಳುತ್ತಿದ್ದನು. ಶಂಕರನ ಶೈತ್ಯೋಪಚಾರದಿಂದ ಎಚ್ಚೆತ್ತ ಅರ್ಜುನನು, ‘ ಎಲವೋ ಕಿರಾತಾಧಮ ! ಶಂಕರನನ್ನು ಪೂಜಿಸಿ ಪರಾಕ್ರಮವನ್ನು ಪಡೆದು ನಿನ್ನನ್ನು ಜಯಿಸುತ್ತೇನೆ’ ಎಂದು ಹೇಳಿ, ಶಿವಲಿಂಗವನ್ನು ನಾನಾವಿಧ ಪುಷ್ಪಗಳಿಂದ ಪೂಜಿಸಿದನು. ಲಿಂಗದ ಮೇಲಿಟ್ಟ ಪುಷ್ಪಗಳೆಲ್ಲ ಕಿರಾತನಮೇಲೆ ಗೋಚರಿಸಿದವು. ಇದನ್ನು ಕಂಡ ಅರ್ಜುನನಿಗೆ ಜ್ಞಾನೋದಯವಾಗಿ ಪರಮಾತ್ಮನನ್ನು ಬಹಳವಾಗಿ ಸ್ತುತಿಸಿದನು, ಮತ್ತು ಅರಿಯದೆ ಮಾಡಿದ ಅಪರಾಧಕ್ಕೆ ಕ್ಷಮೆ ಬೇಡಿದನು. ಶಂಕರನು ಕರುಣೆಯಿಂದ ಅರ್ಜುನನ ಮೈದಡವಿ, ನಿಜರೂಪದಿಂದ ಅವನಿಗೆ ಪಾಶುಪತಾಸ್ತ್ರವನ್ನು ಅನುಗ್ರಹಿಸಿದನಲ್ಲದೆ, ತನ್ನಮೇಲೆ ಪ್ರಯೋಗಿಸಿದ್ದ ಎಲ್ಲ ಬಾಣಗಳನ್ನೂ ಗಾಂಢೀವವನ್ನೂ ಕರುಣಿಸಿದನು. ಪಾರ್ವತಿಯು ಅಂಜನಾಸ್ತ್ರವನ್ನನುಗ್ರಹಿಸಿದಳು. ಹೀಗೆ ಕಿರಾತಲೀಲೆಯಿಂದ ಅರ್ಜುನ ನನ್ನನುಗ್ರಹಿಸಿ ಗಿರಿಜೆಯೊಂದಿಗೆ ಕೈಲಾಸಕ್ಕೆ ಮರಳಿದನು.

## ೧೬. ತ್ರಿವಿಕ್ರಮ ಸಂಹರಣ ಲೀಲೆ

ಪ್ರಹ್ಲಾದನಿಗೆ ವಿರೋಚನನೆಂಬ ಮಗನಿದ್ದನು. ಈತನ ಪುತ್ರನೇ ಬಲಿಯು. ದೈತ್ಯಪಟ್ಟವನ್ನು ವಹಿಸಿಕೊಂಡ ಬಲಿಚಕ್ರವರ್ತಿಯು ದುಷ್ಟ ನಾಗಿದ್ದು ಪ್ರಹ್ಲಾದನ ಬುದ್ಧಿವಾದವನ್ನು ಲೆಕ್ಕಿಸುತ್ತಿರಲಿಲ್ಲ. ಹೀಗಿರುವಲ್ಲಿ ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿದ ವಿಷ್ಣುವು, ತಾನು ಅವನನ್ನು

ಸಂಹರಿಸುವುದಾಗಿ ಅಭಯನಿತ್ತು ಅದರಂತೆ ಕಶ್ಯಪನ ಪತ್ನಿಯಾದ ಅದಿತಿಯ ಗರ್ಭದಲ್ಲಿ ವಾಮನಮೂರ್ತಿಯಾಗಿ ಅವತರಿಸಿದನು. ಯೋಗ ದೃಷ್ಟಿಯಿಂದ ಇದನ್ನು ತಿಳಿದ ಪ್ರಹ್ಲಾದನು ಬಲಿಚಕ್ರವರ್ತಿಯನ್ನು ಎಚ್ಚರಿಸಿ ಧರ್ಮಕಾರ್ಯಗಳಲ್ಲಿ ತೊಡಗಿಸಿದನು. ಇದರಿಂದ ಜಗತ್ತು ಪ್ರಶಾಂತವಾಗಿತ್ತು.

ಒಂದುಸಾರಿ ಬಲಿಯು 'ವಿಶ್ವಜಿತ್' ಎಂಬ ಯಾಗವೊಂದನ್ನು ಪ್ರಾರಂಭಿಸಿ ಬೇಡಿದವರ ಬೇಡಿಕೆಯನ್ನೆಲ್ಲ ಈಡೇರಿಸುತ್ತಿದ್ದನು. ಈ ಸಮಯವನ್ನೇ ನಿರೀಕ್ಷಿಸುತ್ತಿದ್ದ ವಾಮನನು ಬಲಿಯಲ್ಲಿಗೆ ಬಂದನು. ಈತನ ತೇಜಸ್ಸನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು. ನೀತಿಕುಶಲ ನಾದ ಶುಕ್ರಾಚಾರ್ಯನು ಬಲಿಯನ್ನು ಕುರಿತು, 'ನಿನ್ನ ನಾಶಕ್ಕಾಗಿ ವಿಷ್ಣುವೇ ಈ ರೀತಿ ವೇಷಧರಿಸಿ ಬಂದಿದ್ದಾನೆ. ಈತನ ಬೇಡಿಕೆಗಳಿಗೆ ಮರುಳಾಗಿ ಆತ್ಮನಾಶಮಾಡಿಕೊಳ್ಳಬೇಡ. ಎಚ್ಚರದಿಂದಿರು' ಎಂದು ಹೇಳಲು, ಬಲಿಯು, 'ದಾನಕಾಲದಲ್ಲಿ ಬಂದವರು ಯಾರೇ ಆಗಿರಲಿ ಅವರಲ್ಲಿ ತರ-ತಮ ಭಾವವನ್ನಿಡಲಾರೆ. ನನ್ನ ಕರ್ತವ್ಯಕ್ಕೆ ಚ್ಯುತಿತಾರೆನು' ಎಂದು ದೃಢಸಂಕಲ್ಪ ಮಾಡಿದನು. ಆ ವಾಮನ ವಟುವಿಗೆ ಭಕ್ತಿಪೂರ್ವಕ ವಾಗಿ ಆತಿಥ್ಯವನ್ನಿತ್ತು ಬೇಡಿಕೆಯೇನೆಂದು ಕೇಳಿದನು. ಈತನ ಭಕ್ತಿ ಸ್ಥೈರ್ಯಗಳಿಗೆ ಮನಸ್ಸಿನಲ್ಲೇ ಮೆಚ್ಚಿದ ವಾಮನನು, 'ಬಲೀಂದ್ರ! ನಾನು ಆಜನ್ಮ ಬ್ರಹ್ಮಚಾರಿಯು. ಧನಕನಕಾದಿಗಳಿಂದ ನನಗಾವ ಪ್ರಯೋಜನವೂ ಇಲ್ಲ. ನನ್ನ ನಿತ್ಯಕರ್ಮಕ್ಕಾಗಿ ನನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆ ಪ್ರಮಾಣದ ಭೂಮಿಯನ್ನು ನೀಡಿದರೆ ಸಾಕು' ಎಂದನು. ಶುಕ್ರಾಚಾರ್ಯನು ಒಪ್ಪಬೇಡವೆಂದು ಎಚ್ಚರಿಸಿದನು. ಆದರೂ, 'ದಾನ ಗಳಲ್ಲಿ ಭೂದಾನವು ಪವಿತ್ರವಾದ್ದರಿಂದ ಈತನು ಕೇಳುವ ಭೂಮಿಯನ್ನು ದಾನಮಾಡಿ ಜನ್ಮ ಸಾರ್ಥಕ ಮಾಡಿಕೊಳ್ಳುತ್ತೇನೆ' ಎಂದು ನಿಶ್ಚಯಿಸಿ, ಸಪತ್ನೀಕನಾಗಿ ವಾಮನನ ಪಾದಗಳನ್ನು ತೊಳೆದು ಧಾರಾಪೂರ್ವಕವಾಗಿ ಮೂರು ಹೆಜ್ಜೆ ಭೂಮಿಯನ್ನು ದಾನಮಾಡಿದನು. ಕೂಡಲೇ ವಾಮನನು ವಿಶ್ವರೂಪವನ್ನು ಧರಿಸಿದನು. ಒಂದು ಪಾದವು ಭೂಮಿಯನ್ನಾವರಿಸಿತು, ಮತ್ತೊಂದು ಬಲಿ ಮುಂತಾದವರನ್ನೆಲ್ಲ ಪಾತಾಳಕ್ಕೆ ತಳ್ಳಿ ಪಾತಾಳವನ್ನಾ

ಕ್ರಮಿಸಿತು, ಮೂರನೇ ಹೆಜ್ಜೆಯು ಊರ್ಧ್ವ ಲೋಕಗಳನ್ನೆಲ್ಲ ಆವರಿಸಿ ಎಲ್ಲವನ್ನೂ ಧ್ವಂಸಮಾಡುತ್ತಾ ಸತ್ಯಲೋಕಕ್ಕೆ ಸಾಗಿತು. ಇದರ ಆಘಾತಕ್ಕೆ ಎಚ್ಚರಗೊಂಡ ಬ್ರಹ್ಮನು ತನ್ನ ಕಮಂಡಲುವಿನ ಉದಕವನ್ನಭಿ ಮಂತ್ರಿಸಿದನು. ಶಿವನ ವರವಿದ್ದುದರಿಂದ ಆ ಉದಕವು ದಿವ್ಯಾಸ್ತ್ರವಾಗಿ ಆ ವಿಕ್ರಮನ ಕಾಲನ್ನು ಕತ್ತರಿಸಿತು. ಆ ಕಾಲು ಅಧೋ ಲೋಕಕ್ಕೆ ಬರುತ್ತಾ ದಾರಿಯಲ್ಲಿನ ಎಲ್ಲ ಲೋಕದ ಜೀವಿಗಳನ್ನೂ ಹಿಂಸಿಸುತ್ತಾ ಭೂಮಿಗೆ ಬಿದ್ದಿತು. ಜೀವಿಗಳೆಲ್ಲ ತ್ರಿವಿಕ್ರಮನಿಂದಾದ ಬಾಧೆಯನ್ನು ಪರಶಿವನಿಗೆ ವಿವರಿಸಿ ಕಾಪಾಡಬೇಕೆಂದು ಪ್ರಾರ್ಥಿಸಿದರು. ಶಂಕರನು ಕೂಡಲೇ ವಿರಾಡ್ರೂಪವನ್ನು ಧರಿಸಿ ತ್ರಿವಿಕ್ರಮನ ಎಲುಬುಗಳನ್ನು ಮುರಿದು ಅವನ ಶರೀರವನ್ನು ಎರಡು ಭಾಗವಾಗಿ ಸೀಳಿದನು. ತ್ರಿವಿಕ್ರಮ ನಿಗೆ ಜ್ಞಾನೋದಯವಾಗಿ ಶಿವನನ್ನು ಸ್ತುತಿಸಿದನು. ಪ್ರಸನ್ನನಾದ ಶಂಕರನು ಅವನನ್ನು ಕ್ಷಮಿಸಿ, ಅವನ ಬೇಡಿಕೆಯಂತೆ ಅವನ ಬೆನ್ನೆಲುಬನ್ನು ತನ್ನ ಕೈಯಲ್ಲಿ ಧರಿಸಿ ಮೆರೆದನು.

## ೧೭. ಚಂಡೇಶಾನುಗ್ರಹಲೀಲೆ

ಸುಕ್ಷೇತ್ರವಾದ ಶ್ರೀಶೈಲಕ್ಕೆ ಹತ್ತಿರದಲ್ಲಿ ನಲ್ಲೂರು ಎಂಬುದೊಂದು ಗ್ರಾಮ. ಅಲ್ಲಿ ಅಚ್ಯುತನೆಂಬ ಶೈವ ಬ್ರಾಹ್ಮಣನಿದ್ದನು. ಬಹಳಕಾಲ ಅವನಿಗೆ ಮಕ್ಕಳೇ ಇರಲಿಲ್ಲ. ವಯೋವೃದ್ಧರ ಪ್ರೇರಣೆಯಂತೆ ಅದೇ ಗ್ರಾಮದ ಗಣಪತಿಯನ್ನು ವಿಧಿವತ್ತಾಗಿ ಪೂಜಿಸಿದನು. ಗಣಪತಿಯು ಪ್ರಸನ್ನನಾಗಿ ಪ್ರಸಾದವನ್ನಿತ್ತನು. ಕಾಲಕ್ರಮೇಣ ಅಚ್ಯುತನಿಗೆ ಓರ್ವ ಮಗನು ಜನಿಸಿದನು. ಆತನಿಗೆ ಚಂಡೇಶನೆಂದು ಹೆಸರಿಟ್ಟನು. ಮಗನು ಬೆಳೆದು ವಯಸ್ಕನಾದನು. ಅಷ್ಟರಲ್ಲಿ ದೈವಪ್ರೇರಣೆಯೆಂಬಂತೆ ಅಚ್ಯುತ ನಿಗೆ ದಾರಿದ್ರ್ಯವೊದಗಿತು. ತಂದೆ ತಾಯಿಗಳು ಮಗನ ಕ್ಷೇಮಕ್ಕೋಸ್ಕರ ಬಹಳವಾಗಿ ಶ್ರಮಿಸುತ್ತಿದ್ದರು. ಇದನ್ನು ಕಂಡ ಚಂಡೇಶನು ಊರಿನವರ ದನಗಳ ಪೋಷಣೆಯನ್ನು ಮಾಡಿ ತಂದೆ ತಾಯಿಗಳನ್ನು ಭಕ್ತಿಯಿಂದಲೇ ಕಾಪಾಡುತ್ತಿದನು. ಈತನ ಈ ವೃತ್ತಿಯು ಮಾತ್ರ ತಂದೆ ತಾಯಿಗಳಿಗೆ ಸರಿಕಾಣಲಿಲ್ಲ. ಆದರೂ ಚಂಡೇಶನು ಅವರನ್ನು ಸಮಾಧಾನಪಡಿಸಿ ತನ್ನ ಕಾಯಕದಲ್ಲಿ ನಿರತನಾದನು.

ದನಗಳನ್ನು ಬಯಲಲ್ಲಿ ಮೇಯಿಸುತ್ತಿರಲು, ಪೂರ್ವಜನ್ಮ ಸಂಸ್ಕಾರದ ಬಲದಿಂದಾಗಿ, ಎಲ್ಲರಂತೆ ತಾನೂ ಸಹ ಲಿಂಗಪೂಜೆ ಮಾಡಬೇಕೆಂದು ಸಂಕಲ್ಪಿಸಿ ಒಂದುದಿನ ಮರಳಿನಿಂದ ಲಿಂಗವನ್ನು ಮಾಡಿ ಪೂಜಿಸಿದನು. ಹೀಗೆಯೇ ಈ ಪೂಜೆ ಪ್ರತಿದಿನವೂ ಮುಂದುವರಿಯಿತು. ಪೂಜಾ ಕಾಲದಲ್ಲಿ ಹಸುಗಳ ಹಾಲನ್ನು ಲಿಂಗದ ಅಭಿಷೇಕಕ್ಕೆ ಉಪಯೋಗಿಸುತ್ತಿದ್ದದರಿಂದ ಆ ಹಸುಗಳು ಮನೆಯಲ್ಲಿ ಹಾಲನ್ನು ಕರೆಯುತ್ತಿರಲಿಲ್ಲ. ಇದರಿಂದ ಎಲ್ಲರೂ ಅಚ್ಯುತನಲ್ಲಿ ದೂರಿತ್ತರು. ತಂದೆಯು ವಿಷಯವನ್ನು ಕೇಳಲು ತನಗೇನೂ ತಿಳಿಯದೆಂದನು. ಇವನು ಹಾಲನ್ನೆಲ್ಲ ಕರೆದುಕೊಳ್ಳುತ್ತಾನೆಂದು ಕೆಲವರು ಇವನನ್ನು ಬಿಟ್ಟುಬಿಟ್ಟರು. ಹೀಗಾಗಿ ಹಸುಗಳ ಸಂಖ್ಯೆ ಕಡಿಮೆಯಾಯ್ತು. ಇವನ ಪ್ರವೃತ್ತಿಯನ್ನು ಪರೀಕ್ಷೆಮಾಡಬೇಕೆಂದು ಇವನನ್ನನುಸರಿಸಿ ಬಂದ ತಂದೆಯು ಒಂದು ಮರವನ್ನೇರಿ ಕುಳಿತನು. ಚಂಡೇಶನು ಎಂದಿನಂತೆ ಮಳಲ ಲಿಂಗವನ್ನು ಮಾಡಿ ಭಕ್ತಿಯಿಂದ ಪೂಜಿಸಿ ಸ್ತೋತ್ರಮಾಡಿ ಹಸುಗಳ ಹೆಸರಿಡಿದು ಕರೆಯುತ್ತಿರಲು, ಅವುಗಳು ಒಂದೊಂದಾಗಿ ಬಂದು ಲಿಂಗದಮೇಲೆ ಹಾಲನ್ನು ತಾವಾಗಿ ಕರೆದು ಹೋಗುತ್ತಿದ್ದವು. ಇದನ್ನೆಲ್ಲ ನೋಡುತ್ತಿದ್ದ ಅಚ್ಯುತನು ಮಗನೆಡೆಗೆ ಬಂದು ಅವನ ಈ ವರ್ತನೆಯನ್ನು ಖಂಡಿಸಿ, ಶಿವನನ್ನು ನಿಂದಿಸುತ್ತಾ, ಆ ಲಿಂಗವನ್ನು ಕಾಲಿನಿಂದೊದೆದು ಮಗನನ್ನು ಮೂದಲಿಸಿದನು. ಶಿವನಿಂದೆಯನ್ನು ಕೇಳಲಾರದ ಚಂಡೇಶನು ಕೂಡಲೇ ಪಕ್ಕದಲ್ಲಿದ್ದ ಕೊಡಲಿಯಿಂದ ತನ್ನ ತಂದೆಯ ಶಿರಸ್ಸನ್ನು ಕತ್ತರಿಸಿದನು. ಈತನ ಈ ಅಚಲ ಭಕ್ತಿಗೆ ಮೆಚ್ಚಿ ಶಂಕರನು ಪ್ರತ್ಯಕ್ಷನಾದನು. 'ಚಂಡೇಶ! ನಿನ್ನ ದೃಢಭಕ್ತಿಗೆ ಸಂತುಷ್ಟನಾದೆ. ವರವನ್ನು ಬೇಡಿಕೋ' ಎನ್ನಲು, ಚಂಡೇಶನು, 'ಸ್ವಾಮಿ! ಈ ನನ್ನ ತಂದೆಯ ತಪ್ಪನ್ನು ಕ್ಷಮಿಸಿ ಆತನಿಗೆ ಪ್ರಾಣದಾನಮಾಡಿ ನನ್ನನ್ನು ಸದಾ ತಮ್ಮ ಪಾದಸೇವೆಯಲ್ಲಿರಿಸಿಕೊಳ್ಳಿ ಎಂದು ಬೇಡಿದನು. ಅದರಂತೆ ಶಿವನು ಅಚ್ಯುತನಿಗೆ ಪ್ರಾಣದಾನ ಮಾಡಿ ಚಂಡೇಶನನ್ನನುಗ್ರಹಿಸಿ ತನ್ನ ಲೋಕಕ್ಕೆ ಕರೆದೊಯ್ದನು.

## ೧೮. ವಿಷಪಾನ ಲೀಲೆ

ಒಮ್ಮೆ ದೇವೇಂದ್ರನು ತನ್ನ ಐರಾವತವನ್ನೇರಿ ಸಕಲ ವೈಭವದೊಡನೆ ಅಮರಾವತಿಯ ರಾಜಬೀದಿಗಳಲ್ಲಿ ಗಾನ-ನೃತ್ಯ-ವಾದ್ಯವೈಭವಗಳಿಂದ

ಕೂಡಿದ ಉತ್ಸವದೊಡನೆ ಬರುತ್ತಿದ್ದನು. ಇಷ್ಟರಲ್ಲಿ ದ್ವಿತೀಯ ರುದ್ರನಂತೆ ಕಂಗೊಳಿಸುತ್ತಿದ್ದ ದುರ್ವಾಸಮುನಿಯು ಇಂದ್ರನ ಈ ವೈಭವದುತ್ಸವವನ್ನು ನೋಡಿ ಸಂತೋಷಗೊಂಡು, ಅವನಿಗಾಶೀರ್ವದಿಸಿ ಜಗದೀಶ್ವರಿಯ ಪ್ರಸಾದ ವನ್ನಿತ್ತನು. ಮದೋನ್ಮತ್ತನಾಗಿದ್ದ ಇಂದ್ರನು ಮುನಿಯು ಕೊಟ್ಟ ಶಂಕರಿಯ ಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸದೆ ತನ್ನ ಐರಾವತದ ತಲೆಯಮೇಲೆಸೆದನು. ಆನೆಯು ಆ ಪ್ರಸಾದವನ್ನು ಕೆಳಕ್ಕೆ ಕೆಡಹಿ ಕಾಲಿ ನಿಂದ ಉಜ್ಜಿಹಾಕಿತು. ಇಂದ್ರನ ಈ ಗರ್ವವನ್ನು ನೋಡಿ ಕಡು ಕೋಪಗೊಂಡ ಮಹರ್ಷಿಯು ಇಂದ್ರನಿಗೆ, 'ಮದಾಂಧನೆ! ಯಾವ ಐಶ್ವರ್ಯಮದದಿಂದ ಶಂಕರಿಯ ಪ್ರಸಾದವನ್ನು ತಿರಸ್ಕರಿಸಿದೆಯೋ ಆ ನಿನ್ನೈಶ್ವರ್ಯವೆಲ್ಲವೂ ಹಾಳಾಗಲಿ' ಎಂದು ಶಾಪವಿತ್ತನು. ಕೂಡಲೇ ಇಂದ್ರನು ತನ್ನ ತಪ್ಪನ್ನರಿತು ಆನೆಯಿಂದಿಳಿದು ಬಂದು ಮಹರ್ಷಿಯ ಪಾದ ಗಳನ್ನು ಹಿಡಿದು ಕ್ಷಮೆ ಬೇಡಿದನು. ಕನಿಕರಗೊಂಡ ಮುನಿಯು, 'ಕೆಲವು ಕಾಲದಬಳಿಕ ಪುನಃ ದೈವಕೃಪೆಯಿಂದ ಎಲ್ಲವನ್ನೂ ಪಡೆಯುವೆ' ಎಂದು ವಿಶಾಪವಿತ್ತು ಹೊರಟುಹೋದನು.

ಮುನಿಯ ಶಾಪಪ್ರಭಾವದಿಂದ ಇಂದ್ರನ ಸಕಲೈಶ್ವರ್ಯವೂ ಸಮುದ್ರದ ಪಾಲಾಯ್ತು. ಈ ಸಮಯವನ್ನೇ ಕಾಯುತ್ತಿದ್ದ ರಾಕ್ಷಸನಾಯ ಕರು ಸ್ವರ್ಗವನ್ನು ಮುತ್ತಿದರು. ಯುದ್ಧಮಾಡಲಾರದ ದೇವೇಂದ್ರನು ಪಲಾಯನಮಾಡಿದನು. ರಾಕ್ಷಸರು ಸ್ವರ್ಗವನ್ನು ಸ್ವಾಧೀನ ಮಾಡಿಕೊಂಡು ದೇವತೆಗಳನ್ನೂ ಮುನಿಗಳನ್ನೂ ಹಿಂಸಿಸುತ್ತಿದ್ದರು. ಇವರ ಹಿಂಸೆಯನ್ನು ತಾಳಲಾರದೆ ದೇವತೆಗಳು ಪರಶಿವನನ್ನು ಕುರಿತು ತಪಸ್ಸು ಮಾಡಿದರು. ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಪರಮೇಶ್ವರನು, ನಿಮ್ಮ ಅಭೀಷ್ಟವೇನು' ಎಂದು ಕೇಳಿದನು. ಆಗ ಅವರು, 'ದೇವ! ದುರ್ವಾಸರ ಶಾಪದಿಂದ ನಮಗೀ ಗತಿ ಬಂದಿದೆ. ಕಳೆದುಹೋದ ಸಂಪತ್ತನ್ನೆಲ್ಲಾ ಕರುಣಿಸಿ ರಾಕ್ಷಸರ ಬಾಧೆಯನ್ನು ಹೋಗಲಾಡಿಸಿ ನಮ್ಮ ಲೋಕವು ನಮಗೆ ದೊರೆಯುವಂತೆ ಕೃಪೆಮಾಡಬೇಕು' ಎಂದು ಬೇಡಿದರು. ಅದಕ್ಕೆ ಶಿವನು, 'ನೀವೂ ರಾಕ್ಷಸರೂ ಒಂದು ಸೇರಿ ಕ್ಷೀರಸಾಗರವನ್ನು ಮಂದರಪರ್ವತದಿಂದ ಕಡೆದರೆ ನಿಮ್ಮೆಲ್ಲ ಐಶ್ವರ್ಯಗಳೂ ದೊರೆತು ನಿಮಗೆ ಅಮರತ್ವವನ್ನು ಕೊಡುವ

ಅಮೃತವೂ ದೊರೆಯುತ್ತದೆ. ಅದರ ಬಲದಿಂದ ರಾಕ್ಷಸರನ್ನು ನಿಗ್ರಹಿಸಿ ಸ್ವರ್ಗವನ್ನು ಪಡೆದು ಸುಖವಾಗಿರಬಹುದು. ಅದರಂತೆ ಕಾರ್ಯವನ್ನು ಸಾಧಿಸಿರಿ ' ಎಂದು ಹೇಳಿ ಮಾಯವಾದನು.

ಅನಂತರ ದೇವತೆಗಳು ತಮ್ಮ ಕುಲಗುರುವಾದ ಬೃಹಸ್ಪತಿಯನ್ನು ರಾಕ್ಷಸರಲ್ಲಿಗೆ ಸಂಧಿಗಾಗಿ ಕಳುಹಿಸಿಕೊಟ್ಟರು. ಗುರುವು ರಾಕ್ಷಸರನ್ನೂ ಮತ್ತು ಶುಕ್ರಾಚಾರ್ಯರನ್ನೂ ಸಂಧಿಸಿ ದೇವ-ದಾನವರಲ್ಲಿ ಮೈತ್ರಿ ಯುಂಟಾಗುವಂತೆ ಮಾಡಿ, ಎಲ್ಲರೂ ಸೇರಿ ಸಮುದ್ರಮಥನಮಾಡಲು ಒಪ್ಪಿಸಿದನು. ಅದರಂತೆ ಎರಡು ಪಕ್ಷಗಳಿಗೂ ಸಂಧಿಯೇರ್ಪಟ್ಟು, ಎಲ್ಲರೂ ಸೇರಿ ಮಂದರಪರ್ವತವನ್ನು ಕ್ಷೀರಸಾಗರದಲ್ಲಿ ಹಾಕಿದರು. ಅದು ಸಾಗರದ ತಳವನ್ನು ಸೇರಿತು. ದೇವತೆಗಳ ಪ್ರಾರ್ಥನೆಯಂತೆ ಕೂರ್ಮಾವತಾರದಿಂದ ವಿಷ್ಣುವು ಅದನ್ನು ಮೇಲೆತ್ತಿದನು. ಸಂತೋಷಗೊಂಡ ದೇವದಾನವರು ವಾಸುಕಿಯನ್ನು ಪಾತಾಳಲೋಕದಿಂದ ಕರೆತಂದರು. ವಾಸುಕಿಯು ಪರ್ವತಕ್ಕೆ ಹಗ್ಗವಾಗಿ ಸುತ್ತಿಕೊಳ್ಳಲು, ಹೆಡೆಯ ಕಡೆ ರಾಕ್ಷಸರೂ, ಬಾಲದ ಕಡೆ ದೇವತೆಗಳೂ ಹಿಡಿದು ಸಮುದ್ರಮಥನವನ್ನಾರಂಭಿಸಿದರು. ಈ ಮಥನ ದಿಂದಾಗಿ ವಾಸುಕಿಯ ಬಾಯಿಂದ ಘೋರವಿಷವು ಹೊರಬಂದಿತು. ಇದರಿಂದ ಸಮಸ್ತ ಜಗತ್ತೂ ದಹಿಸಲಾರಂಭಿಸಿತು. ಭೀತಿಗೊಂಡ ದೇವಾಸುರರು ಶಂಕರನನ್ನು ಮೊರೆಯಿಟ್ಟರು. ಶಂಕರನು ಕೂಡಲೇ ಗಿರಿಜೆಯೊಡನೆ ವೃಷಭವನ್ನೇರಿ ಅಲ್ಲಿಗೆ ಬಂದು, ವಿಷದ ಜ್ವಾಲೆಯಿಂದ ಮಡಿದಿದ್ದವರನ್ನೆಲ್ಲಾ ಅನುಗ್ರಹಿಸಿ ಆ ಕಾಲಕೂಟ ವಿಷವನ್ನು ತನ್ನ ಅಂಗೈಯಲ್ಲಿಟ್ಟುಕೊಂಡು ನೀಲಮಣಿಯಂತೆ ವಿರಾಜಿಸುತ್ತಿದ್ದ ಅದನ್ನು ಪಾನಮಾಡಿದನು. ಇದನ್ನು ನೋಡುತ್ತಿದ್ದ ಪಾರ್ವತಿಯು, ಗರ್ಭದಲ್ಲಿರುವ ಅಖಂಡಬ್ರಹ್ಮಾಂಡವೂ ಆಪತ್ತಿಗೊಳಗಾಗುವುದೆಂದು ತಿಳಿದು ಅದನ್ನು ಶಿವನ ಕಂಠದಿಂದೊಳಕ್ಕೆ ಹೋಗದಂತೆ ತಡೆದಳು. ಅದು ಶಿವನ ಕಂಠದಲ್ಲಿ ಇಂದ್ರನೀಲಮಣಿಯಂತೆ ಹೊಳೆಯಿತು. ಅನಂತರ ದೇವಾಸುರರು ಸಮುದ್ರವನ್ನು ಮಥಿಸಿ ಕಾಮ ಧೇನು ಕಲ್ಪವೃಕ್ಷಾದಿ ಸಕಲ ಸಂಪತ್ತನ್ನೂ ಕೊನೆಗೆ ಅಮೃತವನ್ನೂ ಪಡೆದರು. ಹೀಗೆ ಶಂಕರನು ಲೋಕಭಯಂಕರವಾಗಿದ್ದ ವಿಷವನ್ನು ಪಾನ ಮಾಡಿ " ವಿಷಕಂಠ " ಅಥವಾ " ನೀಲಕಂಠ "ನೆನಿಸಿದನು.

## ೧೯. ಚಕ್ರಪ್ರದಾನಲೀಲೆ

ಒಮ್ಮೆಂದೊಮ್ಮೆ ತೊಂದರೆ ಕೊಡುತ್ತಿದ್ದ ರಾಕ್ಷಸಾದಿಗಳನ್ನು ಸಂಹರಿಸಲು, ವಿಷ್ಣುವು, ಶಿವನಲ್ಲಿದ್ದ ಜಲಂಧರನ ಸಂಹಾರವನ್ನು ಮಾಡಿದ ಚಕ್ರವನ್ನು ಪಡೆಯಬಯಸಿ ಶಿವನನ್ನು ಕುರಿತು ತಪಸ್ಸುಮಾಡಿದನು. ತಪಸ್ಸಿಗೆ ಮೆಚ್ಚಿದ ಶಂಕರನು ವಿಷ್ಣುವಿನ ಪ್ರಾರ್ಥನೆಯಂತೆ ಚಕ್ರವನ್ನನು ಗ್ರಹಿಸಿ 'ಲೋಕಕಂಟಕರಾಗಿರುವ ದೈತ್ಯರನ್ನು ಇದರಿಂದ ಸಂಹರಿಸಿ ಜಗತ್ತನ್ನು ಕಾಪಾಡು' ಎಂದು ಹೇಳಿ ಅಂತರ್ಧಾನನಾದನು. ಸಂತುಷ್ಟನಾದ ವಿಷ್ಣುವು ದುಷ್ಟ ರಾಕ್ಷಸರನ್ನು ಈ ಚಕ್ರದ ಸಹಾಯದಿಂದ ಸಂಹರಿಸುತ್ತಾ ಸ್ಥಿತಿಕಾರ್ಯದಲ್ಲಿ ತೊಡಗಿದ್ದನು.

ಒಂದಾನೊಂದುದಿನ, ಪಗಡೆಯಾಟದಲ್ಲಿ ಅತಿ ನಿಪುಣನೆನಿಸಿದ ಕ್ಷುಪನೆಂಬ ವೈಷ್ಣವ ರಾಜನು ಶಿವಭಕ್ತನಾದ ದಧೀಚಿಯನ್ನು ಆಕಸ್ಮಿಕವಾಗಿ ಸಂಧಿಸಿ, ಮುನಿಯನ್ನು ಪಗಡೆಯಾಟಕ್ಕೆ ಆಹ್ವಾನಿಸಿದನು. ಈತನ ಬಲಾತ್ಕಾರಕ್ಕೆ ಮುನಿಯು ಒಪ್ಪಲೇಬೇಕಾಯ್ತು. ಆಗ, 'ನೀನು ಸೋತರೆ ನೀನು ಶಿವಭಕ್ತನಾಗಬೇಕು, ನಾನು ಸೋತರೆ ನಾನು ವಿಷ್ಣುಭಕ್ತನಾಗುತ್ತೇನೆ. ಈ ಪಂಥಕ್ಕೆ ಒಪ್ಪುವುದಾದರೆ ಆಟವಾಡೋಣ' ಎಂದು ದಧೀಚಿಯು ಪಂಥವನ್ನೊಡ್ಡಲು, ಆತ್ಮವಿಶ್ವಾಸವುಳ್ಳ ಕ್ಷುಪನು ಒಪ್ಪಿ ಆಟಕ್ಕೆ ಕುಳಿತನು. ಇರ್ವರ ಪಗಡೆಯಾಟವು ಭರದಿಂದಲೇ ಸಾಗಿತು. ಮೂರು ಆಟಗಳಲ್ಲೂ ದಧೀಚಿಯೇ ಗೆದ್ದನು. ಇದರಿಂದ ಕ್ಷುಪನು ಶೈವ ದೀಕ್ಷೆ ಪಡೆಯಲೇಬೇಕಾಯ್ತು. ಆದರೆ ಹಾಗೆ ಕಾರ್ಯತಃ ದೀಕ್ಷೆ ಪಡೆಯಲೊಪ್ಪದೆ ಮುನಿಯನ್ನು ಬಹಳವಾಗಿ ನಿಂದಿಸಿ ಮುನಿಯನ್ನು ಸೇವಕರ ಮುಖಾಂತರ ಹೊರಕ್ಕೆ ತಳ್ಳಿಸಿದನು. ಕೋಪಗೊಂಡ ಮುನಿಯು ಶಾಪ ಕೊಡಲು ಮನಸ್ಸುಮಾಡಿ, ಕೂಡಲೇ ಕೋಪವನ್ನಡಗಿಸಿಕೊಂಡು, 'ತನ್ನ ಸ್ವಾಮಿಯಾದ ಶಿವನಿಗರುಹಿ ಅವನ ಕೃಪೆಯಿಂದಲೇ ಇವನ ನಾಶವನ್ನು ಮಾಡಬೇಕು' ಎಂದು ಬಯಸಿ ಘೋರ ತಪಸ್ಸು ಮಾಡಿದನು. ಪ್ರತ್ಯಕ್ಷನಾದ ಶಂಕರನು ಅಭೀಷ್ಟವೇನೆಂದು ಕೇಳಿದನು. ಮುನಿಯು ಶಿವನಿಗೆ ವಿಷಯವನ್ನೆಲ್ಲಾ ನಿವೇದಿಸಿ, 'ಸ್ವಾಮಿ! ಯುದ್ಧಮಾಡಿಯೇ ಈತನನ್ನು ನಿಗ್ರಹಿಸುತ್ತೇನೆ. ಅಲ್ಲದೆ ಈತನ ಸಹಾಯಕ್ಕೆ ಬಂದವರನ್ನೂ ಸೋಲಿಸಿ

ನನ್ನ ಶಪಥವನ್ನು ಈಡೇರಿಸಿಕೊಳ್ಳುತ್ತೇನೆ. ಅದಕ್ಕಾಗಿ ನನಗೆ ತಕ್ಕ ಪರಾಕ್ರಮವನ್ನೂ ವಜ್ರಕಾಯವನ್ನೂ ಅನುಗ್ರಹಿಸು ' ಎಂದು ಬೇಡಿದನು. ಶಿವನು ಹಾಗೆಯೇ ಆಗಲೆಂದನುಗ್ರಹಿಸಿದನು.

ಇತ್ತ ಮುನಿಯು ರಾಜನನ್ನು ಯುದ್ಧಕ್ಕೆ ಆಹ್ವಾನಿಸಿದನು. ತೃಣಪ್ರಾಯನಾದ ಈ ಮುನಿಯನ್ನು ನಿಗ್ರಹಿಸುವುದು ಸುಲಭವೆಂದು ಬಗೆದು ಹಾಸ್ಯಮಾಡುತ್ತಾ ಯುದ್ಧಕ್ಕೆ ಸೈನ್ಯವನ್ನಟ್ಟಿದನು. ಕೇವಲ ದರ್ಭೆಯನ್ನು ಅಭಿಮಂತ್ರಿಸಿ ಅದರ ಬಲದಿಂದ ರಾಜನ ಎಲ್ಲ ಸೈನ್ಯವನ್ನು ಮುನಿಯು ಧ್ವಂಸಮಾಡಿದನು. ರಾಜನು ಧನುರ್ಧಾರಿಯಾಗಿ ಮುನಿಯೆಡೆಗೆ ತಾನೇ ಬಂದನು. ಭಸ್ಮರುದ್ರಾಕ್ಷಧಾರಿಯಾಗಿ ಅಚಲನಾಗಿ ಕುಳಿತಿದ್ದ ಮುನಿಯನ್ನು ನೋಡಿ ಭಯ-ಭಕ್ತಿ-ಆಶ್ಚರ್ಯಗಳು ಮೂಡಿದರೂ, ಅಹಂಕಾರಕ್ಕೆ ಮಣಿದು, ಇವನನ್ನು ಸಂಹರಿಸಲೇಬೇಕೆಂದು ಸಂಕಲ್ಪಿಸಿ ಮುನಿಯ ಮೇಲೆ ತೀಕ್ಷ್ಣಬಾಣಗಳನ್ನು ಬಿಟ್ಟನು. ಮುನಿಯು ಅಭಿಮಂತ್ರಿಸಿ ಬಿಟ್ಟ ದರ್ಭೆಗಳು ಆ ಬಾಣಗಳನ್ನು ಮಾರ್ಗದಲ್ಲೇ ತಡೆದು ರಾಜನ ಶರೀರವನ್ನು ಚುಚ್ಚಿದವು. ರಾಜನ ಎಲ್ಲ ದಿವ್ಯಾಸ್ತ್ರಗಳೂ ಭಗ್ನವಾದುವು. ಮುನಿಯ ದರ್ಭಾಸ್ತ್ರಗಳೆಲ್ಲ ರಾಜನ ಶರೀರವನ್ನು ಚುಚ್ಚಿ ಚುಚ್ಚಿ ಅವನನ್ನು ಮೂರ್ಛೆಗೊಳಿಸಿದವು. ಆಗ ರಾಜನು ತನ್ನ ದೈವವಾದ ವಿಷ್ಣುವನ್ನು ರಕ್ಷಣೆಗೆ ಪ್ರಾರ್ಥಿಸಿದನು. ವಿಷ್ಣುವು ತನ್ನ ಭಕ್ತನ ಮೊರೆಯನ್ನು ಲಾಲಿಸಿ, ಶಿವನು ಅನುಗ್ರಹಿಸಿದ್ದ ಚಕ್ರಾಯುಧವನ್ನೇ ಧರಿಸಿ ದಧೀಚಿಯ ಮೇಲೆ ಯುದ್ಧಕ್ಕೆ ತೊಡಗಿದನು. ವಿಷ್ಣುವು ಶಿವಭಕ್ತನಾದ ಮುನಿಯ ಮೇಲೆ ಪ್ರಯೋಗಿಸಿದ ಆ ಚಕ್ರವನ್ನು ಮುನಿಯು ನಿರ್ಭಯದಿಂದ ಕೈಯಲ್ಲಿ ಹಿಡಿದು ನುಚ್ಚುನೂರು ಮಾಡಿದನು. ಇದರಿಂದ ಭಯಚಕಿತನಾದ ವಿಷ್ಣುವು ಇವನಲ್ಲಿ ತನ್ನ ಪರಾಕ್ರಮ ಸಾಗದೆಂದು ಬಗೆದು ಹಿಂತಿರುಗಿದನು.

ಇದನ್ನೆಲ್ಲಾ ಕಣ್ಣಾರ ಕಂಡ ಕ್ಷುಪರಾಜನು ಮುನಿಯೆಡೆಗೆ ಬಂದು, ತನ್ನನ್ನು ಕ್ಷಮಿಸಿ ಶಿವದೀಕ್ಷೆ ನೀಡಲು ಬೇಡಿದನು. ಅವನ ಬೇಡಿಕೆಯಂತೆ ಮುನಿಯು ಶಿವದೀಕ್ಷೆ ನೀಡಿದನು.

ಇದರಿಂದಾಗಿ ಚಕ್ರವನ್ನು ಕಳೆದುಕೊಂಡ ವಿಷ್ಣುವು, ತಾನು ಪರಮೇಶ್ವರನ ದಿವ್ಯಾನುಗ್ರಹಕ್ಕೆ ಪಾತ್ರನಾಗಿ, ಆ ಚಕ್ರವನ್ನು ಪುನಃ

ಪಡೆಯಬೇಕು ಎಂದಾಶಿಸಿ ಪ್ರತಿದಿನ ಸಹಸ್ರ ಕಮಲಗಳಿಂದ ಪರಶಿವನನ್ನು ಪೂಜಿಸತೊಡಗಿದನು. ಇವನ ಭಕ್ತಿಯನ್ನು ಪರೀಕ್ಷಿಸಲು ಶಿವನು ಒಂದು ದಿನ, ವಿಷ್ಣುವು ಪೂಜೆಗಾಗಿ ತಂದಿರಿಸಿದ್ದ ಸಹಸ್ರ ಕಮಲಗಳಲ್ಲಿ ಒಂದನ್ನು ಮಾಯವಾಗಿಸಿದನು. ಪೂಜೆಯ ಕಡೆಯಲ್ಲಿ ಒಂದು ಕಮಲವು ಕಡಿಮೆಯಾಗಿರಲು, ಗಾಬರಿಗೊಂಡ ವಿಷ್ಣುವು, ತಾನು ಕಮಲನೇತ್ರನಾಗಿದ್ದುದರಿಂದ, ಆ ಕಡಿಮೆಯಾಗಿದ್ದ ಕಮಲಕ್ಕೆ ಬದಲಾಗಿ ತನ್ನ ನೇತ್ರ ಕಮಲವನ್ನೇ ಅರ್ಪಿಸಿದನು. ಈತನ ಈ ಅಪಾರ ಭಕ್ತಿಗೆ ಮೆಚ್ಚಿದ ಶಂಕರನು ವಿಷ್ಣುವಿಗೆ ಪ್ರತ್ಯಕ್ಷನಾಗಿ ಆತನ ಪ್ರಾರ್ಥನೆಯಂತೆ ಚಕ್ರವನ್ನಿತ್ತು, 'ನೀನು ಈ ಚಕ್ರವನ್ನು ಶಿವಭಕ್ತರ ಮೇಲೆ ಮಾತ್ರ ಪ್ರಯೋಗಿಸಬೇಡ' ಎಂದು ಹೇಳಿ ಅಂತರ್ಧಾನನಾದನು. ಹೀಗೆ ಚಕ್ರವನ್ನನುಗ್ರಹಿಸಿ 'ಚಕ್ರ ಪ್ರದಾನಮೂರ್ತಿ'ಯೆನಿಸಿದನು.

## ೨೦. ವಿಘ್ನೇಶ್ವರಪ್ರಸಾದ ಲೀಲೆ

ಒಂದುಸಾರಿ, ಕಾವೇರೀನದಿಯ ತೀರದಲ್ಲಿ ಅಗಸ್ತ್ಯಮುನಿಯು ತಪಸ್ಸುಮಾಡುತ್ತಿರಲು, ಆತನ ಮೇಲೆ ಆಕಾಶದಿಂದ ಒಂದು ಹೂಮಾಲೆಯು ಬಿದ್ದಿತು. ಮುನಿಯು ಕಣ್ತೆರೆದು ಮೇಲೆ ನೋಡಲು ಗಂಧರ್ವ ದಂಪತಿಗಳು ಕಣ್ಣಿಗೆ ಬಿದ್ದರು. ಪತಿಯು ತನ್ನ ಪತ್ನಿಯು ಮುಡಿದಿದ್ದ ಹೂಮಾಲೆಯನ್ನು ಆ ಮುನಿಯ ಮೇಲೆ ಹಾಸ್ಯಕ್ಕೆ ಎಸೆದಿದ್ದನು. ಕೋಪಗೊಂಡ ಮುನಿಯು, 'ಮದಾಂಧ! ಗಜಾಸುರನಾಗಿ ಹುಟ್ಟಿ ಲೋಕಕಂಟಕನಾಗಿರು' ಎಂದು ಶಪಿಸಿದನು. ಇದನ್ನು ಕೇಳಿದ ಗಂಧರ್ವನು ಭಯಗೊಂಡು ವಿಮಾನದಿಂದಿಳಿದು ಮುನಿಯೆಡೆಗೆ ಬಂದು ಕ್ಷಮೆಬೇಡಿದನು. ಮುನಿಯು, 'ಶಂಕರನು ಗಜರೂಪಿಯಾದ ನಿನ್ನನ್ನು ಕೊಂದರೆ ನಿನ್ನ ಶಾಪವಿಮೋಚನೆಯಾಗುತ್ತದೆ' ಎಂದು ವಿಶಾಪವಿತ್ತನು.

ಮುನಿಯ ಶಾಪದಂತೆ ಗಂಧರ್ವನು ಮಹಾಗಜನಾಗಿ ಅರಣ್ಯದಲ್ಲಿ ಜನ್ಮತಾಳಿ ಸಿಕ್ಕಿದ ಕಾಡುಮರಗಳನ್ನು ಧ್ವಂಸಮಾಡಿ, ಪ್ರಾಣಿಗಳನ್ನೂ ಜನಗಳನ್ನೂ ಪೀಡಿಸುತ್ತಿದ್ದನು. ವಿಷ್ಣು-ಬ್ರಹ್ಮೇಂದ್ರಾದಿಗಳೂ ಈತನನ್ನು ನಿಗ್ರಹಿಸಲಸಾಧ್ಯರಾದರಾಗಿ ಎಲ್ಲರೂ ಶಂಕರನನ್ನು ಮೊರೆಯಿಟ್ಟರು.

ಶಂಕರನು ಅವರಿಗೆ ಅಭಯವಿತ್ತು ಪಿನಾಕ ಧನುಸ್ಸನ್ನು ಹಿಡಿದು ಗಜಾಸುರನಿಗೆ ಎದುರಾದನು. ಗಜಾಸುರನು ಕೋಪದಿಂದ ಶಿವನೆಡೆಗೆ ಧಾವಿಸಿದನು. ಅಷ್ಟರಲ್ಲಿ ಶಿವನು ಧನುಸ್ಸಿನಲ್ಲಿ ಬಾಣವನ್ನು ಹೂಡಿ ಗಜಾಸುರನ ಕಂಠಕ್ಕೆ ಗುರಿಯಿಟ್ಟು ಹೊಡೆದನು. ಶಿರಸ್ಸು ದೇಹದಿಂದ ಬೇರ್ಪಡಲು, ಆ ದೇಹದಿಂದ ಓರ್ವ ದಿವ್ಯಪುರುಷನು ಹೊರಬಂದು ಶಂಕರನ ಪಾದಗಳಿಗೆ ನಮಸ್ಕರಿಸಿ, ' ಪ್ರಭು ! ಅಜ್ಞಾನದಿಂದ ಮಾಡಿದ ತಪ್ಪನ್ನು ಮನ್ನಿಸಿ, ನನ್ನ ಚಿಹ್ನೆಯಾಗಿ ನೀನು ಏನನ್ನಾದರೂ ಧರಿಸುವ ಕೃಪೆಮಾಡಬೇಕು ' ಎಂದು ಬೇಡಿಕೊಂಡನು. ಅದರಂತೆ ಶಿವನು, ಗಜಾಸುರನ ಶರೀರದ ಚರ್ಮವನ್ನು ಧರಿಸುವುದರ ಮೂಲಕ ಅವನನ್ನನುಗ್ರಹಿಸಿ, ಆ ಗಜದ ಶಿರಸ್ಸನ್ನು ಹಿಡಿದು ಕೈಲಾಸಕ್ಕೆ ಬಂದನು.

ಇಷ್ಟರಲ್ಲಿ ಪಾರ್ವತಿಯು ತನ್ನ ಮೈಬೆವರಿನಿಂದ ಒಂದು ಪುರುಷ ರೂಪವನ್ನು ಸೃಷ್ಟಿಸಿ ಅದಕ್ಕೆ ಜೀವಕಳೆಯಿತ್ತು, ' ನನ್ನ ಅಪ್ಪಣೆಯಿಲ್ಲದೆ ಯಾರನ್ನೂ ಒಳಕ್ಕೆ ಬಿಡಬೇಡ ' ಎಂದು ಹೇಳಿ ಸ್ನಾನಕ್ಕೆ ಹೋದಳು. ಗಜಾಸುರ ಸಂಹಾರದಿಂದ ಹಿಂತಿರುಗಿದ ಶಂಕರನನ್ನು ಯಾರೆಂದು ತಿಳಿಯದೆ ಆ ರೂಪವು ಈಶ್ವರನನ್ನು ತಡೆಯಿತು. ಕೋಪಗೊಂಡ ಈಶ್ವರನು ಅದರ ಶಿರಸ್ಸನ್ನು ಛೇದಿಸಿ ಒಳಕ್ಕೆ ಬಂದನು. ಸ್ನಾನವನ್ನು ಮುಗಿಸಿ ತನ್ನ ತಲೆಯನ್ನಾರಿಸಿಕೊಳ್ಳುತ್ತಿದ್ದ ಪಾರ್ವತಿಯು ಅಲ್ಲಿಗಾಗಮಿಸಿದ ಶಿವನಿಗೆ ಭವ್ಯ ಸ್ವಾಗತವಿತ್ತು, ' ಸ್ವಾಮಿ ! ಬಾಗಿಲಲ್ಲಿ ನಿಮ್ಮನ್ನು ಯಾರೂ ತಡೆಯಲಿಲ್ಲವೇ ? ' ಎಂದಳು. ನಡೆದ ಸಂಗತಿಯನ್ನು ಶಂಕರನು ತಿಳಿಸಲು, ಗಿರಿಜೆಯು ಬಹುವಾಗಿ ದುಃಖಿಸಿದಳು. ಶಿವನು ಕೂಡಲೇ ತನ್ನ ಕೈಯಲ್ಲಿದ್ದ ಆನೆಯ ಶಿರಸ್ಸನ್ನೇ ಆ ಆಕೃತಿಗೆ ಯೋಜಿಸಿ ಪ್ರಾಣದಾನ ಮಾಡಿ ಪಾರ್ವತಿಯನ್ನು ಸಂತೋಷಗೊಳಿಸಿದನು. ಹೀಗಿರಲು, ಸಕಲ ಬ್ರಹ್ಮಾಂಡವೂ ಶಿವನ ಗರ್ಭದಲ್ಲಡಗಿದೆಯೆಂದರಿತ ಈ ಗಜಮುಖನು ನಾರದರಿಂದ ಏರ್ಪಡಿಸಲ್ಪಟ್ಟ ಹಣ್ಣಿನ ಪರೀಕ್ಷೆಯಲ್ಲಿ ಗೆದ್ದು ತನ್ನ ತೀಕ್ಷ್ಣ ಬುದ್ಧಿಯನ್ನು ವ್ಯಕ್ತಪಡಿಸಿದನು. ಇದರಿಂದ ಸಂತೋಷಗೊಂಡ ಶಿವನು ಆತನಿಗೆ ಸಕಲ ವೇದಾರ್ಥ ರಹಸ್ಯಗಳನ್ನೂ ಉಪದೇಶಿಸಿ ವಿದ್ಯಾಧಿಪತ್ಯವನ್ನೂ ಗಣಾಧಿಪತ್ಯವನ್ನೂ ಕರುಣಿಸಿದನು. ಗೌರಿಯೂ ಸಹ ಅತ್ಯಮೋಘ

ಗಳಾದ ತನ್ನ ಪಾಶ-ಅಂಕುಶ-ಪರಶು ಮುಂತಾದ ಶಕ್ತ್ಯಾಯುಧಗಳನ್ನಿತ್ತು ಆಶೀರ್ವದಿಸಿದಳು. ಸಕಲ ವಿಘ್ನಗಳನ್ನೂ ನಾಶಮಾಡತಕ್ಕ ನಿನ್ನನ್ನು, ವಿಘ್ನೇಶ್ವರನೆಂಬುದಾಗಿ ಸಕಲ ಜಗತ್ತು ತಮ್ಮೆಲ್ಲ ಕಾರ್ಯಗಳಾರಂಭದಲ್ಲಿ ಪೂಜಿಸಲಿ ಎಂದು ವರವಿತ್ತ ಶಂಕರನು ವಿಘ್ನೇಶ್ವರಾನುಗ್ರಹಿಯೆನಿಸಿದನು.

## ೨೧. ಕುಮಾರೋತ್ಪತ್ತಿ ಲೀಲೆ

ಒಮ್ಮೆ ತಾರಕಾಸುರನು ತ್ರೈಲೋಕ್ಯಾಧಿಪತ್ಯವನ್ನು ಹೊಂದ ಬೇಕೆಂದು ಬಯಸಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನು. ಇವನ ಉಗ್ರತಪಸ್ಸಿಗೆ ಬ್ರಹ್ಮನು ಪ್ರತ್ಯಕ್ಷನಾದನು. ಆಗ ತಾರಕಾಸುರನು, 'ಸ್ವಾಮಿ! ನಾಶರಹಿತನಾದ ಮಹೇಶ್ವರನ ವೀರ್ಯಸಂಜಾತನಾದ ಏಳು ದಿನದ ಬಾಲನಿಂದ ನನಗೆ ಮರಣವಾಗುವಂತೆಯೂ ಮತ್ತು ತ್ರೈಲೋಕ್ಯಾಧಿಪತ್ಯವೂ ದೊರೆಯುವಂತೆಯೂ ವರವನ್ನನುಗ್ರಹಿಸು' ಎಂದು ಬೇಡಿದನು' ಬ್ರಹ್ಮನು ಅದರಂತೆ ವರವಿತ್ತನು. ಈ ವರದ ಬಲದಿಂದ ತಾರಕಾಸುರನು ದೈತ್ಯಚಕ್ರವರ್ತಿಯಾಗಿ ಅಭಿಷಿಕ್ತನಾಗಿ ಸಕಲ ಭುವನಗಳನ್ನೂ ಸ್ವಾಧೀನ ಮಾಡಿಕೊಂಡು ಇಂದ್ರಾದಿಗಳಿಗೆ ಹೆಚ್ಚು ಹಿಂಸೆಯನ್ನು ಕೊಡುತ್ತಿದ್ದನು. ಹಿಂಸೆಯನ್ನು ತಡೆಯಲಾರದೆ ದೇವತೆಗಳು ಬ್ರಹ್ಮನನ್ನು ಮುಂದುಮಾಡಿಕೊಂಡು ನಾರಾಯಣನಲ್ಲಿಗೆ ಬಂದರು. ಅಷ್ಟರಲ್ಲಿ ನಾರದರೂ ಅಲ್ಲಿಗೆ ಬಂದರು. ನಾರದರು ಎಲ್ಲರನ್ನೂ ಕುರಿತು, 'ಸುಮ್ಮನೆ ಚಿಂತಿಸಿ ಪ್ರಯೋಜನವಿಲ್ಲ. ಈಗ ಶಂಕರನು ಪಾರ್ವತಿಯೊಡನೆ ಸುರತಸುಖದಲ್ಲಿರುವನು. ನಿಮ್ಮಲ್ಲಿ ಯಾರಾದರೂ ಅಲ್ಲಿಗೆ ಹೋಗಿ ಶಂಕರನ ಸಂಭೋಗಕ್ಕೆ ವಿಘ್ನವನ್ನೊಡ್ಡಿ ಆ ವೀರ್ಯವನ್ನು ಪಡೆಯಿರಿ. ಇದರಿಂದ ಮುಂದೆ ನಿಮಗೆ ಸುಖವುಂಟು' ಎಂದು ಹೇಳಿ ಹೊರಟುಹೋದರು. ಆಗ ಎಲ್ಲರೂ ಆಲೋಚಿಸಿ ಅಗ್ನಿಯನ್ನು ಈ ಕಾರ್ಯಕ್ಕೆ ನಿಯಮಿಸಿದರು.

ಅಗ್ನಿಯು ಕೈಲಾಸಕ್ಕೆ ಬಂದು, ಅಲ್ಲಿ ಸುಳಿದಾಡುತ್ತಿದ್ದ ಹಂಸಗಳ ಮಧ್ಯೆ ಹಂಸನಾಗಿ ಸಂಚರಿಸುತ್ತಾ ಪರಶಿವನ ಕೇಳೀಗೃಹಕ್ಕೆ ಬಂದು ಮಹಾ ದ್ವಾರದಲ್ಲಿದ್ದ ಸಿಂಹವನ್ನು ನೋಡಿ ಹೆದರಿ ದೇವತೆಗಳಲ್ಲಿಗೆ ಹಿಂತಿರುಗಿದನು. ಆಗ ದೇವತೆಗಳೆಲ್ಲರೂ ದಾರಿಕಾಣದೆ ಈಶ್ವರನನ್ನೇ ಧ್ಯಾನಿಸಿದರು. ಪ್ರತ್ಯಕ್ಷ

ನಾದ ಶಂಕರನು 'ದೇವತೆಗಳೇ ! ನಿಮ್ಮ ಅಭೀಷ್ಟವೇನು ?' ಎಂದು ಪ್ರಶ್ನಿಸಿದನು. ಆಗ ಇಂದ್ರಾದಿಗಳು ತಾರಕನುಪಟಳವನ್ನೂ, ಬ್ರಹ್ಮನ ವರದ ವಿಷಯವನ್ನೂ ಬಿನ್ನವಿಸಿ, 'ತಾರಕನ ಸಂಹಾರ ಹಾಗೂ ಜಗತ್ಕಲ್ಯಾಣ ಗಳಿಗಾಗಿ ನೀನು ಕೃಪೆಮಾಡಿ ಕ್ರೀಡಾ ಸಮಯದಲ್ಲಿ ನಿನ್ನ ವೀರ್ಯವನ್ನು ಈ ಅಗ್ನಿದೇವನಿಗೆ ಕರುಣಿಸುವುದು' ಎಂದು ಬೇಡಿದರು. ಅನುಗ್ರಹಿಸಿದ ಶಂಕರನು ಸ್ವಗೃಹಕ್ಕೆ ಹಿಂತಿರುಗಿದನು.

ಇದ್ದಕ್ಕಿದ್ದಂತೆ ತನ್ನ ಪತಿಯು ಅಗೋಚರನಾಗಿರುವುದನ್ನು ಕಂಡ ಪಾರ್ವತಿಯು ಹುಡುಕುತ್ತಿರಲು ಶಂಕರನು ಅಲ್ಲಿಗೆ ಬಂದನು. ಗಿರಿಜೆಯು ವಿಷಯವೇನೆಂದು ತಿಳಿಸಲು ಬಲಾತ್ಕಾರಮಾಡಿದಳು. ವಿಧಿಯಿಲ್ಲದೆ ಶಂಕರನು ನಡೆದ ವೃತ್ತಾಂತವನ್ನು ತಿಳಿಸಿ, 'ನಿನ್ನಲ್ಲಿ ಸಂತಾನವಾಗದಂತೆ ನನ್ನ ರೇತಸ್ಸನ್ನು ಅಗ್ನಿಗೆ ಕೊಡುವುದಾಗಿ ವರವಿತ್ತು ಬಂದಿರುವೆನು' ಎಂದನು. ಕೂಡಲೇ ಕೋಪಗೊಂಡ ಪಾರ್ವತಿಯು, 'ನನಗೆ ಹೇಗೋ ದೇವತೆಗಳಿಗೂ ಹಾಗೆಯೇ ಸಂಭೋಗದಿಂದ ಮಕ್ಕಳಾಗದಿರಲಿ, ಮತ್ತು ವೀರ್ಯಪಾತಕ್ಕವಕಾಶವಿತ್ತ ಭೂದೇವಿಯು ಬಹುಜನರ ಪತ್ನಿಯಾಗಲಿ' ಎಂದು ಶಪಿಸಿ ಶಂಕರನಲ್ಲಿ ಸೇರಿದಳು.

ಇತ್ತ ಅಗ್ನಿಯು ದೇವತೆಗಳ ಧೈರ್ಯೋಕ್ತಿಯಿಂದ ಪಾರಿವಾಳದ ರೂಪವನ್ನು ಹೊಂದಿ ಶಿವಪಾರ್ವತಿಯರ ಕೇಳೀಗೃಹಕ್ಕೆ ಗವಾಕ್ಷದ ಮುಖಾಂತರ ಬಂದು ಶಿವನಿಂದ ವೀರ್ಯವನ್ನು ಪಡೆದು ದೇವತೆಗಳಲ್ಲಿಗೆ ಹಿಂತಿರುಗಿದನು. ಕೂಡಲೇ ಅಗ್ನಿಯು ಗರ್ಭತಾಳಿದನು. 'ನಿನ್ನ ಸುಖ ದುಃಖಗಳೇ ನಮ್ಮೆಲ್ಲರ ಸುಖದುಃಖಗಳು' ಎಂದು ದೇವತೆಗಳು ಅಗ್ನಿಗೆ ಮಾತುಕೊಟ್ಟಿದ್ದರಾಗಿ ಅದರಂತೆ ಎಲ್ಲರೂ ಗರ್ಭಧರಿಸಿದರು. ಇದರಿಂದ ಭಯಚಕಿತರಾಗಿ ಮತ್ತೆ ಶಂಕರನನ್ನು ಬೇಡಿದರು. ಪ್ರತ್ಯಕ್ಷನಾದ ಶಿವನು ಅಗ್ನಿಗೆ, 'ಈ ರೇತಸ್ಸನ್ನು ಮೇರುಪರ್ವತದ ತಪ್ಪಲಲ್ಲಿರುವ ಶರವಣದಲ್ಲಿ ಬಿಡು' ಎಂದಾಜ್ಞಾಪಿಸಿದನು. ಅಗ್ನಿಯು ಅದರಂತೆಯೇ ಮಾಡಿದನು. ದೇವತೆಗಳ ಗರ್ಭಬಾಧೆಯೂ ನಿವಾರಣೆಯಾಯ್ತು.

ಇತ್ತ ಈ ವೀರ್ಯವು ಗಂಗಾನದಿಯ ದಡದಲ್ಲಿ ಅಗ್ನಿಯಾಗಿ ಪ್ರಜ್ವಲಿಸುತ್ತಿರಲು, ಪ್ರಾತಃಕಾಲದಲ್ಲಿ ನೀರಿಗಾಗಿ ಬಂದಿದ್ದ ಸಪ್ತರ್ಷಿಗಳ ಪತ್ನಿಯರಲ್ಲಿ

ಅರುಂಧತಿಯನ್ನು ಬಿಟ್ಟು ಉಳಿದ ಆರುಮಂದಿಯೂ ಅಗ್ನಿಯೆಂದೇ ಭಾವಿಸಿ ಸುತ್ತಲೂ ಕುಳಿತುಕೊಳ್ಳಲು, ಕೂಡಲೇ ವೀರ್ಯವು ಅವರ ಗರ್ಭವನ್ನು ಸೇರಿತು. ಭಯದಿಂದ ಅವರು ತಮ್ಮ ಗರ್ಭಗಳನ್ನು ಸೀಳಿ ಪಿಂಡಗಳನ್ನು ತೆಗೆದು ದಡದಲ್ಲಿಟ್ಟು ಹೊರಟುಹೋದರು. ಈ ಪಿಂಡಗಳು ಬೆಳೆದು ಶಿಶುಗಳಾಗಿ ಚೀತ್ಕರಿಸುತ್ತಿರಲು, ಇದನ್ನರಿತ ಶಂಕರನು ಪಾರ್ವತಿಯನ್ನು ಅಲ್ಲಿಗೆ ಕರೆತಂದು, 'ಇವೇ ನಿನ್ನ ಶಿಶುಗಳು' ಎಂದು ತೋರಿಸಿದನು. ಗಿರಿಜೆಯು ಒಂದೇ ಕಾಲದಲ್ಲಿ ಆ ಆರೂ ಶಿಶುಗಳನ್ನು ಸಂತೋಷದಿಂದ ತಬ್ಬಿಕೊಳ್ಳಲು ಆರು ಮುಖಗಳುಳ್ಳ ಒಂದು ಶಿಶುವಾಯಿತು. ಆತನಿಗೆ 'ಸ್ಕಂದ'ನೆಂದು ನಾಮಕರಣಮಾಡಿ ಆತನನ್ನು ಶಿವಪಾರ್ವತಿಯರು ಕೈಲಾಸದಲ್ಲಿ ಪಾಲಿಸುತ್ತಿದ್ದರು.

ದೇವತೆಗಳು ಶಿಶುವು ಜನಿಸಿದ ವಿಷಯವನ್ನು ತಿಳಿದು ಶಿವನಲ್ಲಿಗೆ ಬಂದು, 'ಸ್ವಾಮಿ! ಈತನು ನಮ್ಮ ನಾಯಕನಾಗಿ ತಾರಕನ ಸಂಹಾರಕ್ಕೆ ಹೊರಡುವಂತೆ ಕರುಣಿಸು' ಎಂದು ಬೇಡಿದರು. ಶಿವನ ಅಪ್ಪಣೆಯಂತೆ ಅಲ್ಲಿಯೇ ಶಿಶುವಿಗೆ ಸೇನಾನಿಯ ಪಟ್ಟವಾಯ್ತು. ಏಳನೇ ದಿನದ ಈ ಬಾಲನು ದೇವಸೇನೆಗೆ ಸೇನಾಪತಿಯಾಗಿ ಹೊರಟು ತಾರಕನೊಡನೆ ಘೋರ ಯುದ್ಧಮಾಡಿ ಅವನನ್ನು ಸಂಹರಿಸಿ ಲೋಕಗಳ ಸಂರಕ್ಷಣೆ ಮಾಡಿದನು. ಪಾರ್ವತೀಪರಮೇಶ್ವರರು ಹರ್ಷಚಿತ್ತರಾಗಿ ಜಯಗಳಿಸಿ ಬಂದ ಕುಮಾರನನ್ನು ಆಲಂಗಿಸಿ ಸುಖಹೊಂದಿದರು. ಹೀಗೆ ಶಂಕರನ ಕೃಪೆಯಿಂದ ಕುಮಾರೋತ್ಪತ್ತಿಯಾಗಿ ಅಸುರರ ಉಪಟಳವು ನಾಶವಾಯ್ತು.

## ೨೨. ಗಂಗಾಧರಲೀಲೆ

ಗೌರೀಶಂಕರನು ಮಂದರಪರ್ವತದಲ್ಲಿ ಸುಖದಿಂದಿರುವಾಗ, ಪ್ರತಿನಿತ್ಯವೂ ಪುಷ್ಪದತ್ತನೆಂಬ ಹೂವಾಡಿಗನು ಲೋಕಲೋಕದ ವನಗಳಿಂದ ಉತ್ತಮ ಹೂಗಳನ್ನೆಲ್ಲ ಆರಿಸಿ ಮಾಲೆಮಾಡಿ ಗಿರಿಜೆಗೆ ಸಮರ್ಪಿಸುತ್ತಿದ್ದನು. ಒಂದು ದಿನ ಆ ಮಾಲೆಯಲ್ಲಿ ಪಾರಿಜಾತವು ಕಾಣದಿರಲು, ಗಿರಿಜೆಯು ಅವನ ಮುಖವನ್ನು ನೋಡಿದಳು. ಆತನು ಭಯದಿಂದ ಕೈಮುಗಿದು, 'ದೇವಿ! ಅದು ಸುರವನದ ಹೂವಾದ್ದರಿಂದ ಇಂದ್ರನ ಪತ್ನಿಯು ಮೊದಲೇ ತರಿಸಿ

ಮುಡಿದಿದ್ದಳು ' ಎಂದು ಶಿವನಿಗೆ ಕೇಳುವಂತೆಯೇ ಹೇಳಿದನು. ಇನ್ನು ಅಸೂಯೆಯಿಂದ ಅನರ್ಥವಾಗಬಹುದೆಂದು ಬಗೆದ ಶಂಕರನು ಗಿರಿಜೆಯ ಕೈಹಿಡಿದು, ' ಪ್ರಿಯೇ ! ಬಾ, ಈ ಪರ್ವತದ ತಪ್ಪಲ ವನವು ಎಲ್ಲಕ್ಕೂ ಶ್ರೇಷ್ಠವಾದುದು. ಇದರ ಹೆಸರು ಚೈತ್ರರಥವೆಂದು. ಇನ್ನು ಮುಂದೆ ಈ ವನದ ಹೂಗಳೇ ನಿನಗೆ ಅಲಂಕಾರ ' ಎಂದು ಹೇಳಿ ವನವನ್ನು ತೋರಿ ಸುತ್ತಾ, ಪುಷ್ಪದತ್ತನನ್ನು ಕುರಿತು, ' ಇನ್ನು ಮುಂದೆ ಈ ವನವನ್ನು ಕಾಯುತ್ತಿದ್ದು ಈ ಹೂಗಳನ್ನು ಪಾರ್ವತಿಗೆ ಅರ್ಪಿಸಬೇಕು ' ಎಂದಪ್ಪಣೆ ಮಾಡಿ ಅಲ್ಲಿನ ಶೀತಲಜಲದ ತಿಳಿಗೊಳದಲ್ಲಿ ಗಿರಿಜೆಯೊಂದಿಗೆ ಆನಂದದಿಂದ ಜಲಕ್ರೀಡೆಯಾಡಿ ತನ್ನರಮನೆಗೆ ಬಂದು ಸುಖನಿದ್ರೆಗೈದನು.

ಮರುದಿವಸ ಶಿವನೊಬ್ಬನೇ ವನದ ಸೊಬಗನ್ನು ನೋಡುತ್ತಾ ಒಂದು ಮಾವಿನ ಮರದಡಿ ಚಂದ್ರಕಾಂತಶಿಲೆಯ ಜಗುಲಿಯಮೇಲೆ ಕುಳಿತನು. ಅದೇ ಮರದ ತುದಿಗೊಂಬೆಯಲ್ಲಿ ಹೆಣ್ಣು ಗಿಳಿಯೊಂದು, ಹಿಂದಿನ ದಿನ ಆಚೆಹೋದ ತನ್ನ ಪತಿಯು ಈ ವರೆವಿಗೂ ಬಾರದಿರಲು ಬಹಳ ವ್ಯಥೆಪಡುತ್ತಿತ್ತು. ಅಷ್ಟರಲ್ಲಿ ಸುಗಂಧಿತವಾದ ಶರೀರವುಳ್ಳ ಅದರ ಪತಿಯು ಬರಲು, ' ಈತನು ಅನ್ಯಸ್ತ್ರೀಸಂಗವನ್ನು ಮಾಡಿರುವನು ' ಎಂದು ಬಗೆದು ಕೋಪ ಮತ್ತು ದುಃಖಗಳಿಂದ ಕೂಡಿರಲು, ಗಂಡು ಗಿಳಿಯು ಪ್ರಿಯೆಯನ್ನು ಕುರಿತು, ' ಪ್ರಿಯೆ ! ನಿನ್ನೆ ಶಿವನು ಜಲಕ್ರೀಡೆ ಯಾಡಿದ ಕೊಳದ ಆ ಪವಿತ್ರ ತೀರ್ಥದಲ್ಲಿ ನಾನೂ ಸ್ನಾನಮಾಡಿ ಬರಲು ಹೀಗೆ ತಡವಾಯ್ತು ' ಎಂದು ನಿಜಸ್ಥಿತಿಯನ್ನು ವಿವರಿಸಿತು. ಹೀಗೆ ಇವುಗಳ ವಿನೋದವನ್ನು ಆಲಿಸುತ್ತಿದ್ದನು.

ಇಷ್ಟರಲ್ಲಿ, ಅರಮನೆಯಲ್ಲಿ ಶಂಕರನು ಕಾಣದ್ದರಿಂದ ಹುಡುಕುತ್ತಾ ಗಿರಿಜೆಯು ಅಲ್ಲಿಗೆ ಬಂದಳು. ಅಲ್ಲಿ ತದೇಕಚಿತ್ತನಾಗಿ ಕುಳಿತಿದ್ದ ಶಂಕರನನ್ನು ಹಾಸ್ಯಮಾಡಬಯಸಿ, ಸಪ್ಪಳವಿಲ್ಲದೆ ಹಿಂದಿನಿಂದ ಬಂದು ಶಿವನ ಎರಡೂ ನೇತ್ರಗಳನ್ನು ಕೈಗಳಿಂದ ಮುಚ್ಚಿದಳು. ಸೂರ್ಯ ಚಂದ್ರರೇ ನೇತ್ರಗಳಾದ್ದರಿಂದ ಜಗತ್ತೆಲ್ಲಾ ಅಂಧಕಾರದಿಂದಾವೃತವಾಯ್ತು. ಕೈಬಿಡಿಸಹೋದರೆ ಗಿರಿಜೆಯ ಮನಸ್ಸಿಗೆ ಬೇಸರವಾಗಬಹುದೆಂದು ತಿಳಿದ ಶಂಕರನು ತನ್ನ ಅಗ್ನಿನೇತ್ರವನ್ನು ಸ್ವಲ್ಪವಾಗಿ ತೆರೆದನು. ಅದರಿಂದ

ಹೊರಬಂದ ಅಗ್ನಿಜ್ವಾಲೆಯು ಜಗತ್ತನ್ನೇ ಸುಡಲಾರಂಭಿಸಿತು. ಇದರಿಂದ ನೊಂದ ದೇವತೆಗಳು ಬಹುವಾಗಿ ವ್ಯಥೆಪಟ್ಟರು. ಇವನ್ನರಿತ ಪಾರ್ವತಿಯು ತನ್ನಿಂದ ಬಹಳ ತಪ್ಪಾಯಿತೆಂದರಿತು ತನ್ನ ಕೈಗಳನ್ನು ತೆಗೆದು ನೋಡಲು ಶಿವನ ನೇತ್ರಗಳಿಂದ ಉದುರಿದ ಆನಂದಬಾಷ್ಪಗಳು ಗಿರಿಜೆಯ ಬೊಗಸೆಯಲ್ಲಿದ್ದವು. ಅವಳು ಕೈಗಳನ್ನು ಕೊಡವಲು ಆಕೆಯ ಹತ್ತು ಬೆರಳುಗಳಿಂದ ಹತ್ತು ಜಲಪ್ರವಾಹಗಳೇ ಹತ್ತು ದಿಕ್ಕುಗಳಲ್ಲೂ ಹರಿದು ಲೋಕಗಳನ್ನೆಲ್ಲ ಮುಳುಗಿಸುತ್ತಿದ್ದವು. ಆಗ ಶಂಕರನು ತನ್ನ ಜಡೆಯ ಕಿರುತುದಿಯನ್ನು ಆ ನೀರಿನಲ್ಲಿ ಅದ್ದಲು, ನೀರೆಲ್ಲವೂ ಕೂಡಲೇ ಮುತ್ತಿನ ಮಣಿಯಂತೆ ಶಿವನ ಜಡೆಯಲ್ಲಡಗಿತು. ಹೀಗೆ ಆ ಜಲರಾಶಿಯನ್ನು ತನ್ನ ಜಡೆಯಲ್ಲಿ ಧರಿಸಿ ಶಂಕರನು 'ಗಂಗಾಧರ'ನೆನಿಸಿದನು.

ಸಗರನ ಮಕ್ಕಳನ್ನು ಸ್ವರ್ಗಕ್ಕೈದಿಸಲು, ಆ ವಂಶಜನಾದ ಭಗೀರಥನು ದೇವಗಂಗೆಯನ್ನು ಭೂಲೋಕಕ್ಕೆ ಕರೆತರಲೋಸುಗ ಶಂಕರನನ್ನು ಪ್ರಾರ್ಥಿಸಿದನು. ಗಗನದಿಂದ ಲೋಕಗಳನ್ನೇ ಕೊಚ್ಚಿಹೊಯ್ಯುವ ರೂಪದಲ್ಲಿ ಧುಮ್ಮಿಕ್ಕುತ್ತಿದ್ದ ಗಂಗೆಯನ್ನು ಶಂಕರನು ತನ್ನ ಜಡೆಯಲ್ಲಿ ಅಡಗಿಸಿಕೊಂಡು ಭಗೀರಥನ ಪ್ರಾರ್ಥನೆಯಂತೆ ಹನಿಯ ರೂಪಳಾದ ಗಂಗೆಯನ್ನು ಸಗರಪುತ್ರರ ಭಸ್ಮರಾಶಿಯಮೇಲೆ ಹರಿಯಿಸಿ ತಾನು 'ಗಂಗಾಧರ'ನಾದನೆಂಬ ಕಥೆಯೂ ಪುರಾಣಪ್ರಸಿದ್ಧವಿದೆ.

## ೨೩. ಸುಖಾವಹಮೂರ್ತಿ ಲೀಲೆ

ತ್ರಿಕಾಲಜ್ಞನಾದ ಗೌತಮಮಹರ್ಷಿಯು, ಮುಂದೆ ಹನ್ನೆರಡು ವರ್ಷ ಭೀಕರ ಕ್ಷಾಮವು ಬರುವುದೆಂದು ಯೋಗದೃಷ್ಟಿಯಿಂದ ತಿಳಿದು, ಅದರಿಂದ ಪಾರಾಗಲು ಈಶ್ವರನನ್ನು ಕುರಿತು ತಪಸ್ಸು ಮಾಡಿದನು. ಶಿವನು ಇವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ವರವೇನೆಂದು ಪ್ರಶ್ನಿಸಲು, 'ದೇವ ! ಮಳೆಬಾರದಿದ್ದರೂ ನಾನು ಬಿತ್ತಿದ ಬೀಜಗಳು ಫಲ ಕೊಡುವಂತೆ ಅನುಗ್ರಹಿಸು' ಎಂದು ಮುನಿಯು ಬೇಡಿದನು. ಅದರಂತೆಯೇ ವರವಿತ್ತನು.

ಮುನಿಯ ಅಭಿಪ್ರಾಯದಂತೆಯೇ ಭೀಕರ ಕ್ಷಾಮವು ತಲೆದೋರಿತು.

ಮಳೆ-ಬೆಳೆಗಳೇ ಇಲ್ಲದೆ ದಂಡಕಾರಣ್ಯದ ಮುನಿಗಳು ಗೆಡ್ಡೆಗೆಣಸುಗಳನ್ನೇ ಕಾಣದಾದರು. 'ಗೌತಮನು ವರಪ್ರಭಾವದಿಂದ ತನ್ನ ಭೂಮಿಯಲ್ಲಿ ಬಿತ್ತಿದ ಬೀಜಗಳು ಮಳೆಯಿಲ್ಲದಿದ್ದರೂ ಬೆಳೆಕೊಡುತ್ತಿದ್ದು, ಅದರಿಂದ ಎಲ್ಲರನ್ನೂ ಪೋಷಿಸುತ್ತಿದ್ದಾನೆ' ಎಂದು ತಿಳಿದು ಎಲ್ಲರೂ ಗೌತಮನ ಆಶ್ರಮಕ್ಕೆ ಬಂದರು. ಮುನಿಯು ಅತ್ಯಾದರದಿಂದ ಎಲ್ಲರನ್ನೂ ಗೌರವಿಸಿ ಕಾಪಾಡುತ್ತಿದ್ದನು.

ಹೀಗೆ ಕ್ಷಾಮಕಾಲವೂ ಕಳೆದು ದೈವಕೃಪೆಯಾದಮೇಲೆ ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಬಯಸಿದರು. ಆದರೆ ಗೌತಮನು ಮಾತ್ರ, 'ಇಷ್ಟು ವರ್ಷಗಳು ಜತೆಯಲ್ಲಿದ್ದು ಈಗಲೇ ಹೋಗಬೇಕೇ? ಇನ್ನೂ ಕೆಲವು ದಿನಗಳು ಇರಿ' ಎಂದು ಬಲಾತ್ಕಾರದಿಂದಿರಿಸಿಕೊಂಡನು. ಆಗ ಎಲ್ಲರೂ ಗುಟ್ಟಾಗಿ ಸೇರಿ, 'ಈಗ ಈತನು ನಮ್ಮನ್ನು ಬಿಡಲಾರನು. ಆದ್ದರಿಂದ ಯಾವುದಾದರೊಂದು ತಪ್ಪನ್ನು ಹೊರಿಸಿ ಹೊರಡೋಣ' ಎಂದು ತೀರ್ಮಾನಿಸಿ ತಪ್ಪನ್ನರಸಲು ಬಹಳ ಹೊಂಚುಹಾಕಿದರು. ಆದರೆ ಯಾವ ತಪ್ಪೂ ಸಿಕ್ಕಲಿಲ್ಲ. ಕೊನೆಗೆ 'ಯಾಗವೊಂದನ್ನಾರಂಭಿಸಿ, ಹೇಗಾದರೂ ಮಾಡಿ ಗೋವಧೆಯ ದೋಷವನ್ನಾರೋಪಿಸಬೇಕು' ಎಂದು ಬಯಸಿ ಯಾಗವನ್ನಾರಂಭಿಸಿದರು. ಅನೇಕ ದಿನಗಳವರೆವಿಗೂ ಯಾಗವು ನಡೆಯಿತು. ಒಂದುದಿನ ಅಗ್ನಿಯು ಹೋಮಕುಂಡದಿಂದಾವಿರ್ಭವಿಸಿದನು. ಮುನಿಗಳೆಲ್ಲರೂ ಸಂತುಷ್ಟರಾಗಿ ಅಗ್ನಿಯನ್ನು ಕುರಿತು, 'ಅಗ್ನಿದೇವ! ನಮ್ಮ ಸ್ಥಳಗಳನ್ನು ಬಿಟ್ಟು ಇಲ್ಲಿಗೆ ಬಂದು ಬಹಳ ವರ್ಷಗಳಾದುವು. ಆದರೆ ಈತನು ನಮ್ಮನ್ನು ಬಿಟ್ಟುಕೊಡನು. ಆದ್ದರಿಂದ ನಮ್ಮಮೇಲೆ ನೀನು ಕೃಪೆಮಾಡಿ, ಮಾಯಾ ಗೋರೂಪವನ್ನು ಧರಿಸಿ, ಮುನಿಯು ಮುಟ್ಟಿದ ಕೂಡಲೇ ಸಾಯುವಂತೆ ನಟಿಸಿದರೆ, ಆ ದೋಷವನ್ನಾರೋಪಿಸಿ ನಾವು ಇಲ್ಲಿಂದ ಹೋಗಲನುಕೂಲವಂತೆ ಕೃಪೆಮಾಡಬೇಕು' ಎಂದು ಬೇಡಿದರು. 'ಉಪಕಾರ ಮಾಡಿದವರಿಗೆ ಮಾಡುವ ಈ ಅಪಚಾರವು ನಿಮಗೆ ಶ್ರೇಯಸ್ಸಲ್ಲ'ವೆಂದು ಅಗ್ನಿಯು ಎಷ್ಟು ಹೇಳಿದರೂ ಋಷಿಗಳು ಕೇಳಲಿಲ್ಲ. ತಾನು ಪ್ರತ್ಯಕ್ಷನಾದ ತಪ್ಪಿಗೋಸ್ಕರವಾದರೂ ಆ ಮುನಿಗಳ ಮಾತನ್ನು ನೆರವೇರಿಸಲು ಒಪ್ಪಲೇಬೇಕಾಯ್ತು.

ಮುನಿಗಳು ತಮ್ಮ ತಪಃ ಶಕ್ತಿಯಿಂದ ಒಂದು ಗೋವನ್ನು ಮಾಡಿದರು. ಅಗ್ನಿಯು ಅದರಲ್ಲಿ ಪ್ರಾಣರೂಪವಾಗಿ ಪ್ರವೇಶಿಸಿದನು. ಈ ಗೋವನ್ನು ಅವರು ಗೌತಮನಾಶ್ರಮದ ಸಮೀಪದಲ್ಲಿ ಬಿಟ್ಟು ತಿಳಿಯದವರಂತಿದ್ದರು. ಇದಾವುದನ್ನೂ ಅರಿಯದ ಮುನಿಯು ತನ್ನಾಶ್ರಮದ ಹೊರಗೆ ಸಂಚರಿಸುತ್ತಾ ಈ ಹಸುವನ್ನು ಕಂಡು ಹತ್ತಿರಕ್ಕೆ ಬಂದು ಮೈಸವರಲು, ಅದು ಕೂಡಲೇ ಸತ್ತುಬಿದ್ದಿತು. ಇದರಿಂದ ಮುನಿಗೆ ಅಪಾರ ವ್ಯಥೆಯಾಯ್ತು. ಇದೇ ಸಮಯವನ್ನು ನಿರೀಕ್ಷಿಸುತ್ತಿದ್ದ ಮುನಿಗಳೆಲ್ಲರೂ, ‘ ಈತನು ಕಾಮುಕನು, ಈತನಲ್ಲಿ ನಾವು ಏನನ್ನೂ ಸ್ವೀಕರಿಸಬಾರದು ’ ಎಂದು ಹೇಳಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು.

ಮುನಿಯು ತ್ರ್ಯಂಬಕಪರ್ವತಕ್ಕೆ ಬಂದು ಶಿವನನ್ನು ಕುರಿತು ತಪಸ್ಸು ಮಾಡಿದನು. ಶಿವನು ಪ್ರತ್ಯಕ್ಷನಾಗಲು, ‘ ದೇವ ! ನಾನು ಗೋಹಂತಕನಾದ ಮಹಾಪಾಪಿಯು. ನಾನು ಕೊಂದಿರುವ ಗೋವಿನ ಮೇಲೆ ನೀನು ಗಂಗೆಯನ್ನು ಹರಿಯಿಸಿ ನನ್ನನ್ನು ದೋಷಮುಕ್ತನನ್ನಾಗಿಸು ’ ಎಂದು ಬೇಡಿಕೊಂಡನು. ಪ್ರಸನ್ನನಾದ ಶಂಕರನು, ‘ ಮುನೀಂದ್ರ ! ಈ ದೋಷವು ನಿನ್ನದಲ್ಲ, ನಿನ್ನಲ್ಲಿ ಆಶ್ರಯಪಡೆದ ದಾರುವನವಾಸಿಗಳದು. ಈ ಪಾಪವೂ ಅವರದೇ, ನೀನು ಚಿಂತಿಸಬೇಡ ’ ಎಂದು ಹೇಳಿ ಅವನಿಷ್ಟದಂತೆ ಜಡೆಯಿಂದ ಒಂದು ಹನಿಯನ್ನು ತೆಗೆದು ಗೌತಮನನ್ನನುಸರಿಸಿ ಹೋಗಲು ಹೇಳಿದನು. ಆ ಮುನಿಗಳ ಕೃತ್ಯಕ್ಕೆ ಕೋಪಗೊಂಡ ಮುನಿಯೂಸಹ ಅವರಿಗೆ ‘ ಪಾಷಂಡಿಗಳಾಗಿ ಶಿವದ್ವೇಷಿಗಳಾಗಿರಿ ’ ಎಂದು ಶಪಿಸಿದನು. ಗಂಗೆಯನ್ನು ಹಸುವಿನ ಮೇಲೆ ಹರಿಯಿಸಿದನು. ಆ ಸ್ಥಳಕ್ಕೆ ‘ ಗೌತಮ ’ ವೆಂದು, ಆ ಪ್ರವಾಹವು ಗೋವಿಗೆ ಸೋಂಕಿದ್ದರಿಂದ ‘ ಗೋದಾವರಿ ’ ಎಂದೂ ಹೆಸರಾಯ್ತು.

ಮುನಿಯ ಶಾಪವು ಸತ್ಯವಾಗುವಂತೆ ಮಾಡಲು, ಈಶ್ವರನು ವಿಷ್ಣುವನ್ನು ಕರೆದು, ‘ ನೀನು ದಾರುವನದಲ್ಲಿ ಜೈನ-ಬೌದ್ಧಾದಿ ಪಾಷಂಡಮತಗಳನ್ನು ಬೆಳೆಯಿಸು ’ ಎಂದು ಹೇಳಲು, ಅದರಂತೆ ವಿಷ್ಣುವು ಅಲ್ಲಿ ಪಾಷಂಡ ಮತಗಳನ್ನು ಹೆಚ್ಚುಗೊಳಿಸಿದನು. ಇದನ್ನರಿತ ಅತ್ರಿ-ಕಶ್ಯಪಾದಿಗಳು ಶಿವನನ್ನು ಕುರಿತು ತಪಸ್ಸು ಮಾಡಿದರು. ಪ್ರತ್ಯಕ್ಷನಾದ ಶಿವನು, ಶಿವತತ್ತ್ವ

ವನ್ನುದ್ಧರಿಸಬೇಕೆಂಬ ಅವರ ಪ್ರಾರ್ಥನೆಯನ್ನು ಮನ್ನಿಸಿ, ' ನಂದಿಯು ನಮ್ಮ ಎರಡನೇ ರೂಪನಾಗಿ ನಿಮಗೆ ಶಿವರಹಸ್ಯಗಳನ್ನುಪದೇಶಿಸುವನು ' ಎಂದು ಹೇಳಿ-ತಾನು-ಒಂದು ಶಿರ, ಎರಡು ಬಾಹು, ಮೂರು ನೇತ್ರ ಮತ್ತು ಶುಭ್ರವರ್ಣಾದಿಗಳನ್ನುಳ್ಳ ಸುಖಾವಹ ಮೂರ್ತಿಯ ರೂಪವನ್ನು ತಾಳಿ, ನಂದಿಗೆ ಎಲ್ಲ ವೇದ-ವೇದಾಂತ-ಶಿವಶಾಸ್ತ್ರ-ಪುರಾಣ ಆಗಮಾದಿಗಳನ್ನು ಪದೇಶಿಸಿ, ' ಇವುಗಳನ್ನು ಲೋಕದಲ್ಲಿ ಬಿತ್ತರಿಸು ' ಎಂದಾಜ್ಞಾಪಿಸಿದನು. ಅವರಂತೆ ನಂದಿಯು ಸುಖಾವಹಮೂರ್ತಿಯ ರೂಪದಿಂದಲೇ ಈ ಮುನಿಜ ನಾದಿಗಳಿಗೆಲ್ಲ ಶಿವರಹಸ್ಯಾದಿಗಳನ್ನುಪದೇಶಿಸಿ ಕೈಲಾಸಕ್ಕೆ ಹಿಂತಿರುಗಿದನು. ಹೀಗೆ ಶಿವರಹಸ್ಯಗಳ ಪ್ರಕಾಶಕ್ಕೆ ಕಾರಣನಾಗಿ ಶಂಕರನು ಸುಖಾವಹ ಮೂರ್ತಿಯೆನಿಸಿದನು.

## ೨೪. ದಕ್ಷಿಣಾಮೂರ್ತಿಲೀಲೆ

ಹಿಮವತ್ಪರ್ವತದ ತಪ್ಪಲಿನ ದೇವದಾರುವನವೆಂಬ ಪವಿತ್ರಕ್ಷೇತ್ರದಲ್ಲಿ ಅನೇಕ ಪುಣ್ಯಸ್ಥಳಗಳೂ ಪವಿತ್ರ ತೀರ್ಥಗಳೂ ಇರುತ್ತವೆ. ಎಲ್ಲ ಕಾಲಗಳಲ್ಲಿ ಫಲಪುಷ್ಪ ಸಮೃದ್ಧಿಯಾಗುಳ್ಳ ಅಲ್ಲಿ, ಭೃಗು-ಗೌತಮ-ಮೊದಲಾದ ಮಹರ್ಷಿಗಳು ನಿತ್ಯಹೋಮಾಸಕ್ತರೂ ಜಿತೇಂದ್ರಿಯರೂ ವೇದಪಾರಾಯಣಾಸಕ್ತರೂ ಆಗಿದ್ದರು. ಇವರ ಪತ್ನಿಯರು ಮಹಾಪತಿವ್ರತೆಯರಾಗಿದ್ದರು.

ಇವರ ಯೋಗ ವೈಭವವನ್ನು ಪರೀಕ್ಷಿಸಬೇಕೆಂದು ಶಂಕರನು ಮನ್ಮಥನ ಸೌಂದರ್ಯವನ್ನು ತಿರಸ್ಕರಿಸತಕ್ಕ ಮನೋಹರವೂ ದಿವ್ಯವೂ ಆದ ಸೌಂದರ್ಯದಿಂದ ಆ ವನವನ್ನು ಪ್ರವೇಶಿಸಿದನು. ವಿಷ್ಣುವೂ ಸಹ ನವಮೋಹಿನೀರೂಪವನ್ನು ತಾಳಿ ಆ ಶಂಕರನನ್ನು ಹಿಂಬಾಲಿಸಿದನು. ಇವರ ಈ ರೂಪರಾಶಿಗಳನ್ನು ಕಂಡ ಎಲ್ಲ ಮುನಿಜನರೂ ತಮ್ಮ ತಪಸ್ಸನ್ನು ಬಿಟ್ಟು ಕಾಮಪರವಶರಾಗಿ ಮೋಹಿನಿಯಲ್ಲಿಯೇ ಆಸಕ್ತರಾಗಿ ಅವಳ ಗಮನವನ್ನೇ ನಿರೀಕ್ಷಿಸುತ್ತಿದ್ದರು. ಇತ್ತ ಶಂಕರನು ಪ್ರತಿಮುನಿಗಳ ಆಶ್ರಮದ ಬಾಗಿಲಿಗೆ ಬಂದು ಭಿಕ್ಷೆ ಬೇಡುತ್ತಿದ್ದನು. ಮುನಿಪತ್ನಿಯರು ಭಿಕ್ಷೆಗಳನ್ನು ನೀಡುತ್ತಾ ತಮ್ಮೆಲ್ಲ ಸೇವಾದಿಕಾರ್ಯಗಳನ್ನು ಮರೆತು ಈತನ ದಿವ್ಯ ರೂಪಕ್ಕೆ ಮನಸೋತು ಸೂಜಿಗಲ್ಲಿನಿಂದಾಕರ್ಷಿಸಲ್ಪಟ್ಟ ಕಬ್ಬಿಣದಂತೆ ಅವನನ್ನೇ

ಹಿಂಬಾಲಿಸಿದರು. ಮುನಿಗಳನ್ನು ಸಿಟ್ಟಿಗೆಬ್ಬಿಸಲು ಶಿವನು ಆ ಸತಿಯರ ಕರಸ್ಪರ್ಶಮಾಡಲು ಅವರೆಲ್ಲರೂ ಶಿವರೂಪಿನ ಶಿಶುಗಳನ್ನು ಪಡೆದರು.

ಹೀಗಿರಲು, ಇದೆಲ್ಲವನ್ನೂ ನೋಡುತ್ತಿದ್ದ ಅಲ್ಲಿನ ವಟುಗಳು, ಮುನಿಗಳಿಗೆ, 'ಯಾರೋ ಮಾಯಾವಿ ನಿಮ್ಮ ಸತಿಯರನ್ನು ಕರೆದೊಯ್ಯುತ್ತಿರುವನು' ಎಂದು ಕೂಗಿ ಹೇಳಿದರು. ಕೂಡಲೇ ಮುನಿಗಳು ಸಿಂಹೋಗ್ರನೆಂಬ ವಟುವನ್ನು ಕುರಿತು, 'ಆ ವಂಚಕನನ್ನು ಎಳೆದು ತಾ' ಎಂದಟ್ಟಿದರು. ವಟುವು ಶಿವನನ್ನು ಬಾಯೆಂದು ಕರೆಯಲು, 'ಭಿಕ್ಷೆಗಾಗಿ ಬಂದವನು ನಾನು, ಮತ್ತಾವ ಕೆಲಸವೂ ನನಗಿಲ್ಲಿಲ್ಲ' ಎಂದನು. ಕೋಪಗೊಂಡ ಸಿಂಹೋಗ್ರನು 'ಭಸ್ಮವಾಗು' ಎಂದು ಶಪಿಸಿದನು. ಶಾಪವು ಶಿವನನ್ನು ತಾಕಲಿಲ್ಲ. ಗಾಬರಿಯಿಂದ ಹಿಂತಿರುಗಿ ಬಂದು ಮುನಿಗಳಿಗೆ ನಡೆದ ಸಂಗತಿಯನ್ನು ತಿಳಿಸಿದನು. ಹೆಚ್ಚು ಕೋಪಿಷ್ಠರಾದ ಮುನಿಗಳು ತಾವೇ ಶಿವನೆಡೆಗೆ ಬಂದು ಶಪಿಸಿದರು. ಶಾಪವು ಫಲಿಸದಾಯ್ತು. ದಿವ್ಯ ಮಂತ್ರಗಳಿಂದಭಿಮಂತ್ರಿಸಿ ದರ್ಭೆಗಳನ್ನೆಸೆದರು. ಅದೂ ವ್ಯರ್ಥವಾಯ್ತು. ಹಸನ್ಮುಖಿಯಾಗಿ ಶಂಕರನು ಮುಂದೆ ಸಾಗುತ್ತಲೇ ಇದ್ದನು. ಇವನನ್ನು ಸಂಹರಿಸಲೇಬೇಕೆಂದು ನಿಶ್ಚಯಿಸಿ ಮಾರಣಹೋಮವನ್ನೇ ಪ್ರಾರಂಭಿಸಿದರು. ಯೋಜನದಗಲದ ಆ ಹೋಮಕುಂಡದಲ್ಲಿ ಜಗಜಗಿಸಿ ಉರಿಯುತ್ತಿದ್ದ ಜ್ವಾಲೆಗಳಿಂದ ಕ್ರೂರಗಳಾದ ಘೋರಸರ್ಪ–ಹುಲಿ–ಆಯುಧ–ಶಕ್ತಿ-ಭೂತಗಣ ಮುಂತಾದವು ಹೊರಬಂದು 'ಬಲಿಯೆಲ್ಲಿ?' ಎಂದರಚಿದವು. ಮುನಿಗಳು ಕಣ್ಸನ್ನೆಯಿಂದ ಶಿವನನ್ನು ತೋರಲು, ಎಲ್ಲವೂ ಶಿವನೆಡೆಗೆ ಧಾವಿಸಿದವು. ಕಣ್ಮುಚ್ಚಿ ತೆರೆಯುವುದರೊಳಗೆ ಅವೆಲ್ಲವುಗಳೂ ಶಾಂತವಾಗಿ ಶಿವನ ಪರಿವಾರವಾಗಿ ಆದವು. ಅಗ್ನಿಯನ್ನೇ ಕಳುಹಿಸಿದರೆ ಅವನನ್ನು ಶಿವನು ತನ್ನ ಕೈಯಲ್ಲಿಯೇ ಧರಿಸಿದನು.

ಆಗ ಮುನಿಗಳಿಗೆ ಜ್ಞಾನೋದಯವಾಗಿ ಈತನು ಶಿವನಲ್ಲದೆ ಬೇರೆಯಲ್ಲವೆಂದರಿತು ಅವನ ಬಳಿಗೆ ಬಂದು ನಮಸ್ಕರಿಸಿ ಕ್ಷಮೆಬೇಡಿದರು. ಶಾಂತನಾಗಿ ದಿವ್ಯರೂಪದಿಂದ ಪ್ರತ್ಯಕ್ಷನಾದನು. ವಿಷ್ಣುವಿನ ಸ್ಥಾನದಲ್ಲಿ ಪಾರ್ವತಿಯು ಗೋಚರಿಸಿದಳು. ಈರ್ವರನ್ನೂ ಮನಸಾರ ಕೊಂಡಾಡಿದ ಮುನಿಗಳು, 'ನಮ್ಮೀ ಅಪರಾಧಕ್ಕೆ ಶಿಕ್ಷೆಯಾಗಲೇಬೇಕು, ಆದ್ದರಿಂದ

LIBRARY.
Jangamwadi Math, VARANASI,
Acc. No. 3510

ದಿವ್ಯಜ್ಞಾನೋಪದೇಶದಿಂದ ನಮ್ಮ ಅಜ್ಞಾನವನ್ನು ಹೋಗಲಾಡಿಸು. ಈ ಉಪದೇಶಶ್ರವಣವೇ ನಮಗೆ ಶಿಕ್ಷೆಯಾಗಲಿ' ಎಂದು ಬೇಡಿಕೊಂಡರು. ಅದರಂತೆ ಶಂಕರನು ಮನೋಜ್ಞರೂಪವನ್ನು ತಾಳಿ ಸರ್ಪಕುಂಡಲಾದಿಗಳನ್ನು ಧರಿಸಿ, ವಟವೃಕ್ಷವನ್ನಾಶ್ರಯಿಸಿ ವ್ಯಾಘ್ರಾಸನಾಸೀನನಾಗಿ ದಕ್ಷಿಣಾಮೂರ್ತಿಯೆನಿಸಿ ಆ ಮುನಿವೃಂದಕ್ಕೆ ಪಿಂಡಸ್ಥಲ ಮೊದಲಾಗಿ ಜ್ಞಾನತತ್ತ್ವವೇ ಕಡೆಯಾಗುಳ್ಳ ಶಿವತತ್ತ್ವೋಪದೇಶವನ್ನರುಹಿದನು.

## ೨೫. ಲಿಂಗೋದ್ಭವ ಲೀಲೆ

ಬ್ರಹ್ಮಲೋಕದಲ್ಲಿ ಬ್ರಹ್ಮನು ರತ್ನಸಿಂಹಾಸನವನ್ನಲಂಕರಿಸಲು ಆತನ ಪುತ್ರ-ಪೌತ್ರ-ಮನು-ಮುನಿಸಮೂಹವು 'ನೀನೇ ಸಕಲ ಜಗದೊಡೆಯ' ಎಂದು ಹೊಗಳಿದರು. ಇದರಿಂದ ಬ್ರಹ್ಮನ ಅಹಂಕಾರವು ಹೆಚ್ಚಿತು. ಇದರ ಪರಿಣಾಮವಾಗಿ ಜಗತ್ತಿನಲ್ಲಿ ಧರ್ಮವೇ ಅಳಿಯಿತು. ಇವನ್ನರಿತ ವಿಷ್ಣುವು ಬ್ರಹ್ಮನಲ್ಲಿಗೆ ಬಂದು ನಿಂತಿರಲು, ಉನ್ಮತ್ತನಾದ ಬ್ರಹ್ಮನು, 'ನೀನಾರು ?' ಎಂದು ಪ್ರಶ್ನಿಸಿದನು. ವಿಷ್ಣುವು 'ಬ್ರಹ್ಮನೇ ! ಇವರ ಹೊಗಳಿಕೆಯಿಂದ ನಿನಗಿಷ್ಟು ಗರ್ವಬಂದಿತೇ ? ನಾನು ನಿನ್ನ ಒಡೆಯನೆಂಬುದನ್ನು ಮರೆತೆಯಾ ?' ಎಂದನು. ಹೀಗೆ ಇರ್ವರಿಗೂ ಮಾತಿಗೆ ಮಾತು ಬೆಳೆದು ಕದನವೇ ಪ್ರಾರಂಭವಾಯ್ತು. ಇರ್ವರೂ ಅಪರಿಮಿತವಾದ ಸೈನ್ಯವನ್ನು ಸೃಷ್ಟಿಸಿದರು. ಈ ಉಭಯಪಕ್ಷ ಸೇನೆಗೂ ಘನಘೋರವಾದ ಯುದ್ಧವೇ ಆಯ್ತು. ಎರಡು ಸೇನೆಗಳೂ ಸಂಪೂರ್ಣವಾಗಿ ನಾಶವಾದುವು. ಬ್ರಹ್ಮನು ಹಂಸವಾಹನನಾಗಿ ದೇವ-ದಾನವ-ಮನು-ಮುನಿ-ಮುಂತಾದ ಚತುರಂಗ ಸೇನೆಯನ್ನೊಡಗೊಂಡು ನಿಂತನು. ಇದನ್ನು ಕಂಡ ವಿಷ್ಣುವು ತನ್ನ ವಿಶ್ವರೂಪದಿಂದ ಅಸಂಖ್ಯಾತರಾದ ಮನು-ಮುನಿ-ದೇವ-ದಾನವರನ್ನೂ ಅಸಂಖ್ಯ ಬ್ರಹ್ಮ-ವಿಷ್ಣುಗಳನ್ನೂ ಸಮಸ್ತ ಚತುರಂಗಬಲವನ್ನೂ ಸೃಷ್ಟಿಸಿ ಎದುರಾಗಿ ನಿಂತನು. ಎರಡೂ ಪಡೆಗಳಿಗೆ ಮತ್ತೆ ಯುದ್ಧವಾರಂಭವಾಯ್ತು. ಸೋಲು ಗೆಲುವುಗಳು ನಿಶ್ಚಿತವಾಗಲಿಲ್ಲ. ಅಷ್ಟರಲ್ಲಿ ವಾಹನಗಳಾದ ಹಂಸ-ಗರುಡಗಳು ಸತ್ತುಬಿದ್ದವು. ಇರ್ವರೂ ಆರ್ಭಟಿಸುತ್ತಾ ಮಲ್ಲಕಾಳಗಕ್ಕೆ ತೊಡಗಿದರು. ವಿಷ್ಣುವು ಬ್ರಹ್ಮನ

ಶಿರವನ್ನು ತನ್ನ ಮುಷ್ಟಿಯಿಂದ ಕುಟ್ಟಿದನು. ಬ್ರಹ್ಮನ ಶಿರಸ್ಸು ನಾಲ್ಕು ಹೋಳಾಯ್ತು. ಅವುಗಳನ್ನೇ ನಾಲ್ಕು ಶಿರಸ್ಸುಗಳನ್ನಾಗಿ ಮಾಡಿಕೊಂಡು ಪುನಃ ಮುಷ್ಟಿಯುದ್ಧಕ್ಕೆ ಮುಂದಾದನು.

ಇಷ್ಟರಲ್ಲಿ, 'ವಿಷ್ಣು-ಬ್ರಹ್ಮರೇ? ನೀವೇಕೆ ಮೂರ್ಖರಾದಿರಿ? ನಿಮ್ಮಿಬ್ಬರಿಗೂ ಅನ್ಯವಾದ ಮತ್ತೊಂದು ವಸ್ತುವುಂಟೆಂಬುದನ್ನು ಮರೆತಿರಾ? ಆ ವಸ್ತುವು ಈಗ ಇಲ್ಲಿ ಆವಿರ್ಭವಿಸುತ್ತದೆ. ಅದರ ಪಾದ ಮತ್ತು ಮಸ್ತಕಗಳನ್ನು ಕಂಡುಬರತಕ್ಕವರೇ ಶಕ್ತರು' ಎಂಬ ಅಶರೀರವಾಣಿಯಾಯ್ತು. ಇದನ್ನು ಕೇಳಿ ಇಬ್ಬರೂ ನಿಬ್ಬೆರಗಾಗಿ ನೋಡುತ್ತಿರಲು ಅವರೆದುರಲ್ಲಿ ಒಂದು ಮಹಾಲಿಂಗವು ಉದ್ಭವಿಸಿತು. ಧರಣಿಯೇ ಅದರ ಪೀಠ, ಶೈಲಗಳೇ ಭುಜಗಳು, ಸಪ್ತಸಮುದ್ರಗಳೇ ಕುಕ್ಷಿ, ಚಂದ್ರಸೂರ್ಯರೇ ಕಣ್ಣುಗಳು, ಪಾತಾಳವೇ ಪಾದ, ಅನಂತದಾಕಾಶವೇ ಶಿರಸ್ಸು, ನಕ್ಷತ್ರಗಳೇ ಹೂಗಳು, ಪ್ರಮಥಗಣವೇ ಪರಿವಾರ. ಇಂತಹ ಈ ಮಹಾಲಿಂಗವನ್ನು ನೋಡಿ ಎಲ್ಲರೂ ಭಯಭಕ್ತಿ ಕುತೂಹಲವುಳ್ಳವರಾದರು. ಕೂಡಲೇ ವಿಷ್ಣುವು ಪಾದವನ್ನು ಕಾಣುವ ಇಚ್ಛೆಯಿಂದ ವರಾಹರೂಪದಿಂದ ಭೂಮಿಯನ್ನು ಬಗೆಯುತ್ತಾ ಹೊರಟನು; ಬ್ರಹ್ಮನು ಮಸ್ತಕವನ್ನು ಕಾಣಬಯಸಿ ಹಂಸನಾಗಿ ಆಕಾಶದೆಡೆಗೆ ಹಾರಿ ಹೊರಟನು. ಈರ್ವರೂ ಎಷ್ಟೋ ಸಹಸ್ರ ವರ್ಷಗಳು ಹೋದರೂ ಯಾವ ಸುಳಿವೂ ಸಿಕ್ಕಲಿಲ್ಲ.

ಬ್ರಹ್ಮನು ಬಹಳ ನಿಶ್ಶಕ್ತನಾಗಿ ಸಾಗುತ್ತಿರಲು, ದಾರಿಯಲ್ಲಿ ಒಂದು ಕೇತಕಿಯು ಎದುರಾಯ್ತು. 'ಎಲ್ಲಿಂದ ಬಂದೆ?' ಎಂದು ಬ್ರಹ್ಮನು ಪ್ರಶ್ನಿಸಲು, 'ಶಿವನ ಮಸ್ತಕದಿಂದ' ಎಂದು ಕೇತಕಿಯು ಉತ್ತರಿಸಿತು. 'ಮಸ್ತಕವು ಇನ್ನೆಷ್ಟು ದೂರವಿದೆ?' ಎಂದು ಪುನಃ ಪ್ರಶ್ನಿಸಲು, 'ಹಲವು ಯುಗಗಳು ಸಂಚರಿಸಿದರೂ ಮಸ್ತಕದ ದರ್ಶನವು ಅಸಂಭವವು' ಎಂದು ಹೇಳಿತು. ಆಗ ಬ್ರಹ್ಮನು, 'ಶಿವನ ಮಸ್ತಕವನ್ನು ನೋಡಿ ಬರುವೆನೆಂದು ಪಣತೊಟ್ಟು ಬಂದಿದ್ದೇನೆ. ಆದ್ದರಿಂದ ನೀನು ನನಗೆ ಸಾಕ್ಷಿಯಾಗಬೇಕು' ಎಂದೊಪ್ಪಿಸಿ ಅದರೊಂದಿಗೆ ರಣಭೂಮಿಗೆ ಬಂದನು. ಪಾತಾಳಕ್ಕೆ ಹೊರಟ ವಿಷ್ಣುವು ಪಾದದರ್ಶನವಾಗದಿರಲು, ಮುಂದೆ ಹೋಗಲು ಅಶಕ್ಯನಾಗಿ ಗುರುತಿಗೋಸ್ಕರ ಮಂಡಿಗೆ ಜಂಗನ್ನು ಕಟ್ಟಿ ಹಿಂತಿರುಗಿದನು.

ಇದೇ ವೀರಶೈವಜಂಗಮರು ಭಿಕ್ಷೆಯ ಕಾಲದಲ್ಲಿ ಮೊಳಕಾಲಲ್ಲಿ ಜಂಗನ್ನು ಧರಿಸುವ ಚಿಹ್ನೆಯಾಗಿದೆ. ಇದು ಆ ಪ್ರದೇಶದಲ್ಲಿದ್ದ ಜಂಘಾಸುರನನ್ನು ವಿಷ್ಣುವು ಸಂಹರಿಸಿ ಆತನ ಶಿರಸ್ಸನ್ನೇ ಜಂಗನ್ನಾಗಿ ಶಿವನ ಕಾಲಿಗೆ ಕಟ್ಟಿದ ನೆಂದೂ ಪ್ರತೀತಿಯುಲ್ಲಿದೆ. ತನಗೆ ಮುಂಚೆಯೇ ಅಲ್ಲಿದ್ದ ಬ್ರಹ್ಮನನ್ನು ನೋಡಿ, 'ಮಸ್ತಕವನ್ನು ನೋಡಿದೆಯಾ?' ಎಂದು ಕೇಳಲು, ಬ್ರಹ್ಮನು, 'ಓಹೋ! ನೋಡಿದೆನು. ಅದಕ್ಕೆ ಈ ಕೇತಕಿಯೇ ಸಾಕ್ಷಿ' ಎಂದು ಕೇತಕಿಯನ್ನು ತೋರಿದನು. ಸರ್ವಾಂತರ್ಯಾಮಿಯಾದ ಶಂಕರನು ಆ ಲಿಂಗದಲ್ಲುದ್ಭವಿಸಿ ಬ್ರಹ್ಮನು ಅಸತ್ಯ ನುಡಿದುದಕ್ಕೆ 'ಲೋಕದಲ್ಲಿ ನಿನಗೆ ಪೂಜೆ ದೊರೆಯದಿರಲಿ' ಎಂದೂ ಸುಳ್ಳು ಸಾಕ್ಷಿ ಹೇಳಿದ ಕೇತಕಿಗೆ 'ನೀನು ಶಿವಪೂಜೆಗೆ ಅನರ್ಹ' ಎಂದೂ ಶಪಿಸಿ, ಸತ್ಯ ನುಡಿದುದಕ್ಕಾಗಿ ವಿಷ್ಣುವನ್ನನು ಗ್ರಹಿಸಿದನು. ಬ್ರಹ್ಮನು ಕ್ಷಮೆಯಾಚಿಸಲು ಅವನನ್ನು ಅನುಗ್ರಹಿಸಿದನು. ಹೀಗೆ ಲಿಂಗೋದ್ಭವಮೂರ್ತಿಯಾಗಿ ವಿಷ್ಣುಬ್ರಹ್ಮರ ಗರ್ವಭಂಗಮಾಡಿದನು.

ಎಲೈ ನರನಾಥನೇ! ಶಿವನ ಈ ಇಪ್ಪತ್ತೈದು ಲೀಲೆಗಳನ್ನು ಭಕ್ತಿ ಪ್ರೀತಿಗಳಿಂದ ಕೇಳಿದವನಿಗೆ ಸಕಲ ಸಂಪತ್ಸೌಭಾಗ್ಯವೂ, ದೀರ್ಘಾಯುಃವೂ, ಸರ್ವವಿದ್ಯಾಭಾಗ್ಯವೂ ದೊರೆಯುವುದಲ್ಲದೆ ಕೈವಲ್ಯಪದವಿಯೂ ಸಿದ್ಧಿಸುತ್ತದೆ' ಎಂದು ಚೆನ್ನಬಸವಾಚಾರ್ಯರು ಶಿವನ ಲೀಲೆಗಳನ್ನು ವಿವರಿಸಿದರು. ಇದನ್ನು ಕೇಳುತ್ತಾ ಆನಂದ ತುಂದಿಲನಾದ ರಾಜನು, 'ಗುರುವರ್ಯಾ! ತಮ್ಮ ಈ ದಿವ್ಯವಾಣಿಯಿಂದ ಶಿವನ ಲೀಲೆಗಳನ್ನು ಕೇಳಿ ಪವಿತ್ರನೂ ಕೃತಾರ್ಥನೂ ಆದೆನು' ಎಂದು ಹೇಳಿ ಮಂತ್ರಿಯೊಡನೆ ನಮಸ್ಕರಿಸಿ ಕುಳಿತನು.

ಭಕ್ತಿ ರಸಸಾಗರದಲ್ಲಿ ತನ್ಮಯಳಾಗಿದ್ದ ದೇವಿಯೂಸಹ ಗುರುವಿನಡಿಗಳಿಗಭಿವಂದಿಸಿದಳು. ಇವಳ ಇಂಗಿತವನ್ನರಿತ ತ್ರಿಕಾಲಜ್ಞಾನಿಯಾದ ಗುರುವು, 'ಮಗಳೆ! ಬಾ' ಎಂದು ಕರೆದು, ಮನದಲ್ಲಿ ಶಿವನನ್ನು ಧ್ಯಾನಿಸಿ, ಆಕೆಗೆ ಶ್ರೀ ಶಿವಪಂಚಾಕ್ಷರೀ ಮಹಾಮಂತ್ರವನ್ನುಪದೇಶಿಸಿ, 'ನಿನ್ನ ಪುಣ್ಯ ಗರ್ಭಾಂಬುಧಿಯಲ್ಲಿ ವಂಶೋದ್ಧಾರಕನಾದ ಪುತ್ರಚಂದ್ರನೋರ್ವನುದಯಿಸುವನು, ಚಿಂತಿಸದಿರು' ಎಂದು ಹೇಳಿ ಸರ್ವರನ್ನೂ ಆಶೀರ್ವದಿಸಿ ಹೊರಟು ಹೋದರು.

ಅನಂತರ ದಂಪತಿಗಳು ಸದಾಕಾಲವೂ ಶಿವಲಿಂಗಾರ್ಚನೆ-ಶಿವಕಥಾ ಶ್ರವಣ-ಶಿವಯೋಗಿವೃಂದಚರಣಾಂಭೋಜಪೂಜೆ ಮುಂತಾದವುಗಳನ್ನು ಹೆಚ್ಚು-ಹೆಚ್ಚು ವೈಭವ ಮತ್ತು ಆನಂದಗಳಿಂದ ನಡೆಸುತ್ತಾ ಮನದಲ್ಲಿ ಗುರುವು ಬೋಧಿಸಿದ ಮಂತ್ರವನ್ನು ಧ್ಯಾನಿಸುತ್ತಲಿದ್ದರು.

## ೩. ರಾಜಶೇಖರನ ಉದಯು

ಒಂದು ಶುಭದಿನ ಅಮೃತಮತಿಮಹಾದೇವಿಯು ಎಲ್ಲೆಡೆ ಹಬ್ಬಿದ ಬೆಳ್ದಿಂಗಳ ರಾತ್ರಿಯಲ್ಲಿ ಬೆಳ್ದಿಂಗಳಧಿದೇವಿಯಂತೆ ಕಾಣುತ್ತಾ, ಚಂದ್ರಿಕೆ ಯಂತೆ ಚೆಲ್ವಾದ ವಸನವನ್ನು ಧರಿಸಿ ಮಂಗಳಾಲಂಕೃತೆಯಾಗಿ ಸಾಕ್ಷಾತ್ ಸರ್ವಮಂಗಳೆಯಂತೆ ಶಿವಪೂಜಾಗೃಹವನ್ನು ಪ್ರವೇಶಿಸಿ ಸಾಂಗವಾಗಿ ಶಿವಲಿಂಗಪೂಜೆಯನ್ನು ಮಾಡಿ ತನ್ನ ಹೃದಯೇಶ್ವರನೊಡನೆ ಶಿವಪ್ರಸಾದ ವನ್ನು ಅತ್ಯಾನಂದದಿಂದ ಸೇವಿಸಿದಳು ಪರಿಮಳ ದ್ರವ್ಯಗಳಿಂದ ಸುಗಂಧಿತ ವಾಗಿದ್ದ ಸರಸ ತಾಂಬೂಲವನ್ನು ತಟ್ಟೆಯಲ್ಲಿ ಇಟ್ಟುಕೊಂಡು ತನ್ನ ಮನೋ ರಮಣನು ಮಂಡಿಸಿದ್ದ ಮಣಿಭವನಕ್ಕೆ ಬಂದಳು. ಸುಮಮಂಜರಿಗಳಿಂದ ಲಂಕೃತವಾಗಿ ಅವುಗಳ ಭಾರಕ್ಕೆ ಬಾಗಿ ಬಳುಕುವ ಲತೆಯು ತನಗಾಶ್ರಯ ವಿತ್ತಿರುವ ಮಾಮರವನ್ನು ಬಳಸಿ ಅಪ್ಪುವಂತೆ ಈ ಲತಾಂಗಿಯು ಕಡು ಚೆಲ್ವಾದ ತನ್ನ ಕಾಂತನ ಮನೋಹರ ದೇಹವನ್ನು ತನ್ನ ಬಾಹುಲತೆಗಳಿಂದ ಬಳಸಿ ಬಂಧಿಸಿದಳು. ನೇತ್ರವಿಲಾಸವು ಈರ್ವರ ಭಾವೈಕ್ಯವೆನ್ನುವಂತೆ ಚಂಚಲತೆಯನ್ನು ದೂರಮಾಡಿ ನೆಲೆನೆಟ್ಟಿತು. ಆನಂದದಿಂದಾಲಿಂಗಿಸಿ ಮುದ್ದುಮಾಡಿ ತನ್ನ ವನಿತೆಯ ಮುಖಾರವಿಂದಮಕರಂದವನ್ನು ರಸಿಕಾ ಗ್ರಣಿಯಾದ ರಾಜನು ಮನಂಬುಗುವಂತೆ ಪಾನಮಾಡಿದನು. ತಾಂಬೂಲ ರಾಗವು ಈರ್ವರ ಮನೋನುರಾಗವನ್ನು ಪ್ರಕಟಿಸುವುದಾಗಿತ್ತು. ಸಮಾ ನಾನುರಾಗವುಳ್ಳ ಈ ಪ್ರೇಮಿಗಳ ಪ್ರೇಮಪೂರ್ಣ ಹೃದಯಗಳು ಒಂದಾ ಗಿದ್ದುದನ್ನು ನೋಡಿ ಸೈರಿಸದೆ, ಬೇರೆ-ಬೇರೆಯೆಂಬಂತಿದ್ದ ಮನೋಹರ ತನುಗಳು ಒಂದುಗೂಡಿ ಪರಮೈಕ್ಯವನ್ನು ಸಾಧಿಸಿ ಹೃದಯೈಕ್ಯವನ್ನು ಅಣಕಿಸಿದವು. ಆಸುಖರಾತ್ರಿಯಲ್ಲಿ ಪತಿಯು ತೋಳ್ತೆಕ್ಕೆಯಲ್ಲಿ ದೇವಿಯು ಸುಖ ನಿದ್ರೆ ಗೈಯುತ್ತಿರಲು ಪ್ರಾತಃಕಾಲದಲ್ಲಿ ತಾನೊಂದು ಕನಸನ್ನು ಕಂಡಳು.

ಆ ಕನಸಿನಲ್ಲಿ ಶ್ರೇಷ್ಠವಾದ ಆನೆ, ದೇವಗಂಗೆಯ ಅರಳಿದ ಕಮಲ, ಅಲಂಕೃತವಾದ ವೃಷಭ, ದೇದೀಪ್ಯಮಾನವಾದ ಸೂರ್ಯ, ಚಂದ್ರಕಾಂತ ಶಿಲೆಯ ದರ್ಪಣ, ಕ್ಷೀರಸಾಗರ, ಮೇರುಪರ್ವತ ಮತ್ತು ಪೂರ್ಣಚಂದ್ರ ಇವುಗಳನ್ನು ಕಂಡಳು. ಪ್ರಾತಃಕಾಲದಲ್ಲಿ ಎದ್ದು ತನ್ನ ಸ್ವಾಮಿಯ ಅಡಿದಾವರೆಗಳಿಗೆರಗಿ ಪಾದಧೂಳಿಯನ್ನು ತನ್ನ ಮಂಡೆಯಲ್ಲಿ ಧರಿಸಿ ಕೊಂಡಳು. ಇರ್ವರೂ ಸ್ನಾನ ಮಾಡಿ ಪೂಜಾದಿಗಳನ್ನು ನೆರವೇರಿಸಿ ಪ್ರಸಾದವನ್ನು ಸೇವಿಸಿದರು. ಕೇಳೀಗೃಹದ ಪರ್ಯಂಕದಲ್ಲಿ ಪತಿಯು ಕುಳಿತಿರಲು ರಾತ್ರಿಯ ಸ್ವಪ್ನವನ್ನು ದೇವಿಯು ಪತಿಗೆ ವಿವರಿಸಿದಳು. ಎಲ್ಲವನ್ನೂ ಆನಂದದಿಂದ ಕೇಳಿ, ಜ್ಞಾನಿಯಾದ ಆ ರಾಜನು, ದೇವಿಯನ್ನು ಕುರಿತು, ' ದೇವಿ ! (೧) ಭದ್ರಗಜದರ್ಶನದಿಂದ ಮಂಗಳಕರನೂ, (೨) ಕಮಲ ದರ್ಶನದಿಂದ ಸಕಲಗುಣ ಸಂಪನ್ನನೂ (೩) ವೃಷಭ ಸಂದರ್ಶನದಿಂದ ಅಪಾರ ಶಿವಭಕ್ತನೂ (೪) ಸೂರ್ಯದರ್ಶನದಿಂದ ಅಮಿತ ತೇಜಸ್ವಿಯೂ (೫) ದರ್ಪಣದರ್ಶನದಿಂದ ಸಕಲಜನಪ್ರೀತಿದಾಯಕನೂ (೬) ಸಮುದ್ರ ದರ್ಶನದಿಂದ ಹೆಚ್ಚು ಗಂಭೀರನೂ (ಇತರರಿಗೆ ತಿಳಿಯದ ರಾಜಕಾರ್ಯವುಳ್ಳವನೂ ಮತ್ತು ಶತ್ರುಗಳಿಗೆ ಸಿಲುಕದವನೂ) (೭) ಮೇರುಪರ್ವತ ದರ್ಶನದಿಂದ ರಾಜಶ್ರೇಷ್ಠನೂ ಮತ್ತು (೮) ಪೂರ್ಣಚಂದ್ರದರ್ಶನದಿಂದ ಸಕಲಕಲಾ ಕೋವಿದನೂ ಆದ ಸುಕುಮಾರನೋರ್ವನು ತಪ್ಪದೆ ನಿನಗೆ ಜನಿಸುವನು ' ಎಂದು ಕನಸಿನ ಫಲವನ್ನು ವಿವರಿಸಿದನು.

ಅಂತೆಯೇ ಹೃದಯದಲ್ಲಿ ನೆಲೆನಿಂತ ಶಿವಮಂತ್ರವೇ ಶಿವಪ್ರೇರಣೆಯಿಂದ ಆಕೆಯ ಗರ್ಭದಲ್ಲಿ ನೆಲೆಗೊಂಡಿತು. ಶುಕ್ಲಪಕ್ಷದ ಚಂದ್ರನಂತೆ ಆ ಗರ್ಭವು ದಿನದಿನಕ್ಕೆ ಬೆಳೆದು ದೇವಿಯಲ್ಲಿ ಗರ್ಭಲಕ್ಷಣಗಳು ಸ್ಪಷ್ಟಗೊಂಡವು. ಶಿವಭಕ್ತೆಯಾದ ಸತೀಮಣಿಯು ಯಾವಾಗಲೂ ಶಿವಧ್ಯಾನ-ಶಿವಪೂಜೆ-ಶಿವಸಂಕಥಾಶ್ರವಣಗಳಲ್ಲೇ ಆನಂದವನ್ನು ಹೊಂದುತ್ತಿದ್ದಳು. ಕಾಲೋಚಿತವಾದ ಸೀಮಂತಾದಿ ಕಾರ್ಯಗಳು ಅತಿವೈಭವದಿಂದಲೇ ನಡೆದುವು. ಸರಸಭೂಷಣಾಲಂಕೃತೆಯಾದ ಆ ದೇವಿಗೆ ನವಮಾಸಗಳುರುಳಿದವು. ಒಂದು ಶುಭದಿನ ಚಂದ್ರನು ಚಂದ್ರಿಕೆಯನ್ನು ಹೊರಚೆಲ್ಲುವಂತೆ ದೇವಿಯು ಪೂರ್ಣಚಂದ್ರಕುಮಾರನಿಗೆ ಜನ್ಮವಿತ್ತಳು. ಆ ಸಮಯದಲ್ಲಿ

ಶಿವಭಕ್ತರ ಬಲನೇತ್ರಗಳದುರಿದವು, ಕೈಲಾಸದಲ್ಲಿ ಶಂಕರನು ಗಿರಿಜೆಯೊಡನೆ ಸಂತೋಷಗೊಂಡನು, ಭೂದೇವಿಯು ನಲಿದಳು, ಇಂದ್ರಾದಿಗಳು ನರ್ತಿಸಿದರು,ಜನರು ಸಂತುಷ್ಟರಾದರು, ಬಂಧು-ಬಾಂಧವ-ಸಾಮಂತಾದಿಗಳ ಆನಂದ ವುಕ್ಕಿತು, ಸೂರ್ಯನು ಹೆಚ್ಚು ಬೆಳಗಿದನು. ಹೀಗೆ ಶುಭನಿಮಿತ್ತಗಳಾದವು. ಚೋಳದೇಶದ ಮೂಲೆಮೂಲೆಗಳಲ್ಲೂ ಸಂತೋಷದ ಸುದ್ದಿ ಹಬ್ಬಿ ಲೋಕಕ್ಕೇ ಹಬ್ಬವಾಯ್ತು. ಎಲ್ಲೆಲ್ಲೂ ಮಂಗಳವಾದ್ಯಗಳು ಭೋರ್ಗರೆದು ಮೊಳಗಿದವು. ಅಂತಃಪುರದಲ್ಲಿ ವಿಲಾಸಿನಿಯರು ಮಂಗಳಮಯವಾದ ಮಂಗಳಾರತಿಗಳನ್ನು ರಾಜ–ರಾಣಿ ಮತ್ತು ಶಿಶುಗಳಿಗೆ ಬೆಳಗಿದರು. ಮಾಹೇಶ್ವರರು ಆಶೀರ್ವದಿಸಿದರು. ಈ ಶಿವಪ್ರಸಾದಮಹಿಮೆಯನ್ನು ಎಲ್ಲರೂ ಮನಸಾರ ಹೊಗಳಿ ಹೊಗಳಿ ಹಾಡಿದರು.

ಇಂತಿರುವಲ್ಲಿ ಚಿದ್ಘನಶಿವಾಚಾರ್ಯರು ಅಲ್ಲಿಗಾಗಮಿಸಿ, ಶಿಶುವಿಗೆ ಶಿವಪಾದೋದಕವನ್ನು ಸಿಂಪಡಿಸಿ, ಕರುಣೆಯಿಂದಾಶೀರ್ವದಿಸಿ, ಹಣೆಗೆ ವಿಭೂತಿಧಾರಣೆಯನ್ನು ಮಾಡಿ, ಶಿವಮಂತ್ರೋಪದೇಶಪೂರ್ವಕವಾಗಿ ಶಿವಲಿಂಗಧಾರಣೆಯನ್ನು ಮಾಡಿದರು. ಅತಿವೈಭವದ ಜಂಗಮಸೇವೆ ಮತ್ತು ಮಹೋತ್ಸವದ ಜಾತಕರ್ಮಗಳು ನೆರವೇರಿದವು. ಶಿಶುವು ಶಿವಮಂತ್ರಪ್ರಭಾವದಿಂದ ಉದಯಿಸಿರುವನಾದ್ದರಿಂದ ಮತ್ತು ಆ ಮಂತ್ರವನ್ನೇ ಸಂರಕ್ಷಿಸತಕ್ಕವನಾದ್ದರಿಂದ ಈತನಿಗೆ 'ಮಂತ್ರಲಕ್ಷ್ಯ' (ಮಂತ್ರವೇ ಗುರಿಯಾಗಿ ಉಳ್ಳವನು) ಎಂದೂ, ಜಗತ್ತಿನಲ್ಲಿ ಅಪಾರವಾದ ಕೀರ್ತಿಯನ್ನು ಪಡೆಯುತಕ್ಕವನಾದ್ದರಿಂದ 'ರಾಜಶೇಖರ' (ರಾಜರಲ್ಲಿ ಶ್ರೇಷ್ಠನು) ಎಂದೂ ಅನ್ವರ್ಥಗಳಾದ ಹೆಸರನ್ನಿಟ್ಟರು. ಇದರಿಂದ ರಾಜರಾಣಿಯರ ಆನಂದಕ್ಕೆ ಪಾರವೇ ಇಲ್ಲವಾಯ್ತು.

ಹನ್ನೆರಡನೇ ದಿನ ರನ್ನದೊಟ್ಟಿಲಲ್ಲಿ ಶಿಶುವನ್ನಿಟ್ಟು ಸುಮಂಗಲೆಯರು ಜೋಗುಳಹಾಡಿದರು. ಶಿವನ ಜಡೆಯ ಶಶಿಕಳೆಯು ಧರೆಗಿಳಿದು ಬಂದು ಬೆಳೆಯುತ್ತಿದೆಯೆಂಬಂತೆ ಕುವರನು ದಿನೇ ದಿನೇ ಬೆಳಗುತ್ತಾ ಬೆಳೆದನು; ಎಲ್ಲರ ಕಣ್ಮಣಿಯಾಗಿ ಹೊಳೆದನು. ತಾಯ ಸೆರಗನ್ನು ಮುಚ್ಚಿ, ಕೊರಳ ಹಾರವನ್ನು ಕೈಯಿಂದ ಕಿತ್ತೊಗೆದು, ಅರೆತೆರೆದ ಮೊಲೆಗಳ ಹಾಲನ್ನು ಚಂಚಲನಾಗಿ ಹೀರುತ್ತಾ, ನಲಿನಲಿದು ಲಲನೆಯರನ್ನು ನಲಿಸುತ್ತ, ತಾಯ

ತೋಳ್ತೆಕ್ಕೆಯಲ್ಲಿ ಅರಗಿಳಿಯಂತೆ ನಲಿದಾಡಿ ಎಲ್ಲರ ಆನಂದವನ್ನಿಮ್ಮಡಿ ಗೊಳಿಸಿದನು. ಸುಕುಮಾರ ದೇಹಕ್ಕೆ ನಲ್ಮೆಯ ನಗೆಯೇ ಆಭರಣವಾಗಿದ್ದರೂ ನೀಲಮಣಿಹಾರ, ಮುಂಗೈಸರ, ಪುಷ್ಯರಾಗಮಣಿಗಳುಳ್ಳ ಕಾಲ್ಗೆಜ್ಜೆ ಮುಂತಾದವು ಕುಮಾರನ ದೇಹಕಾಂತಿಯನ್ನಲಂಕರಿಸಿದವು. ಇಂತು ಅತಿಶಯ ಸುಖದಿಂದ ಆ ರಾಜನಂತಃಪುರದಲ್ಲಿ ಕುಮಾರನು ಬೆಳೆದನು.

ಇವನ ಓರಗೆಯವನಾದ ಮಂತ್ರಿಸುತ ಮಿತವಚನನೊಡನೆ ಒಂದು ಶುಭಮುಹೂರ್ತದಲ್ಲಿ ಮಂಗಳವಿಲಾಸದಿಂದ ವಿದ್ಯಾಭ್ಯಾಸವೂ ಆರಂಭವಾಯ್ತು. ಈ ಈರ್ವರೂ ಅನುಪಮ ಬುದ್ಧಿ ಚಮತ್ಕಾರಗಳಿಂದಾಗಿ ಸಕಲ ಕಲೆಗಳನ್ನೂ, ಸಮಸ್ತ ಶಸ್ತ್ರ-ಶಾಸ್ತ್ರ ವಿದ್ಯೆಗಳನ್ನೂ, ಗಜಾರೋಹಣ-ಅಶ್ವಾರೋಹಣ-ರಥಾರೋಹಣ ಮೊದಲಾದವುಗಳನ್ನೂ ಅಲ್ಪಕಾಲದಲ್ಲೇ ಸ್ವಾಧೀನಮಾಡಿಕೊಂಡು ಅಖಿಳಶಾಸ್ತ್ರ-ವಿದ್ಯಾಪರಿಣತರೆನಿಸಿದರು. ಗುಣ-ರೂಪ-ವಿನಯ-ವಿದ್ಯೆ-ಪ್ರತಿಭೆ ಮುಂತಾದವುಗಳಲ್ಲಿ ಸರಿಸಮಾನರೆನಿಸಿದ ಈ ಈರ್ವರೂ ಪರಸ್ಪರ ಸಹೋದರರೆಂಬಂತೆ ಬೆಳೆದು ಯುವಕರಾದರು.

ಇಷ್ಟರಲ್ಲಿ ಗುರುಗಳು ರಾಜನರಮನೆಗೆ ದಯಮಾಡಿಸಿ ರಾಜ-ಮಂತ್ರಿ ಮೊದಲಾದವರೊಂದಿಗೆ ಹೆಚ್ಚು ಆನಂದದಿಂದ ರಾಜಿಸುತ್ತಿದ್ದ ಮಿತವಚನ ಮತ್ತು ರಾಜಶೇಖರರನ್ನು ಕಂಡು ಹರ್ಷಿಸಿ, ಅವರೀರ್ವರಿಗೂ ವಿಧಿಪೂರ್ವಕವಾಗಿ ಮಹಾಶಿವದೀಕ್ಷೆಯನ್ನಿತ್ತು ಲಿಂಗನಿಷ್ಠೆ ಒಲಗೊಳ್ಳುವಂತೆ ಶ್ರೀ ಶಿವ ಪಂಚಾಕ್ಷರೀ ಮಹಾಮಂತ್ರದುಪದೇಶವನ್ನು ಮಾಡಿ, 'ಈ ಮಹಾಮಂತ್ರವು ಪರಮುಕ್ತಿಕಾಂತೆಯ ಶಿರೋಮಣಿಯು. ಕೇವಲ ಈ ಮಂತ್ರವನ್ನು ಕೇಳುವುದರಿಂದಲೇ ಅನಂತ ಪಾಪರಾಶಿಯೂ ನಾಶವಾಗಿ ರುದ್ರತ್ವವೇ ಸಂಭವಿಸುವವಲ್ಲದೆ, ಈ ಮಹಾಮಂತ್ರವನ್ನು ಎಡೆಬಿಡದೆ ಧ್ಯಾನ ಮಾಡಿದಲ್ಲಿ, ಸಹಸ್ರಾರುವರ್ಷಗಳು ನಿರಂತರವಾಗಿ ಉಗ್ರತಪವನ್ನಾಚರಿಸಿ ಮುನಿವರರು ಪಡೆಯುವ ಚಿರಶಾಶ್ವತದ ಶೈವಸಿದ್ಧಿಯು ಅತ್ಯಲ್ಪಕಾಲದಲ್ಲೇ ಸಂಭವಿಸುತ್ತದೆ. ಇಂತಹ ಈ ದಿವ್ಯಮಂತ್ರದ ಮಹಿಮೆಯನ್ನು ವರ್ಣಿಸಲಸದಳವು. ಭಸ್ಮ-ರುದ್ರಾಕ್ಷಿಗಳನ್ನು ಧರಿಸಿ, ಶಿವಸ್ವರೂಪರಾದ ಗುರು-ಲಿಂಗ-ಜಂಗಮರ ಪಾದೋದಕಪ್ರಸಾದಗಳನ್ನು ಅತಿಭಕ್ತಿಯಿಂದ ಸ್ವೀಕರಿಸುತ್ತಾ ಇಷ್ಟಲಿಂಗನಿಷ್ಠೆಯಿಂದ ಈ ಮಹಾಮಂತ್ರವನ್ನುಚ್ಚರಿಸಿದರೆ ಈ ಮಹಾ

ಮಂತ್ರವು ಸಿದ್ಧಿಸುತ್ತದೆ. ಶಿವಾನುಗ್ರಹಿಗಳಾದ ನೀವೂ ಸಹ ಶ್ರದ್ಧಾಭಕ್ತಿಗಳಿಂದ ಅಂತೆಯೇ ಆಚರಿಸಿರಿ ' ಎಂದು ಬೋಧಿಸಿದರು.

ಗುರುಗಳ ಈ ದಿವ್ಯೋಪದೇಶವು ಕುಮಾರದ್ವಯರ ಹೃದಯಾರವಿಂದದಲ್ಲಿ ದಿವ್ಯ ಪರಿಮಳವಾಗಿ ನೆಲೆಗೊಂಡಿತು. ಈರ್ವರೂ ಗುರುವರರ ಪಾದಗಳಿಗೆರಗಿ ಅನೇಕ ರೀತಿಯಲ್ಲಿ ಅವರನ್ನು ಭಜಿಸಿ ಪೂಜಿಸಿದರು. ಆಗ ಗುರುಗಳು; ' ಅಮೋಘವೂ ಪಂಚಬ್ರಹ್ಮಾತ್ಮಕವೂ ಆದ ಈ ಶ್ರೀ ಶಿವ ಪಂಚಾಕ್ಷರೀ ಮಹಾಮಂತ್ರವು ನಿಮ್ಮನ್ನು ಸದಾ ಕಾಪಾಡಲಿ ' ಎಂದಾಶೀರ್ವದಿಸಿ ಹೊರಟುಹೋದರು.

## ೪. ರಾಜಶೇಖರನ ಅಭ್ಯುದಯ

ಕಾಲ ಕಳೆದಂತೆ, ಚೋಳೇಶ್ವರನು ಮಂತ್ರಿಕುಮಾರನಾದ ಮಿತವಚನನಿಗೆ, ಸತ್ಕುಲಪ್ರಸೂತಳೂ ಸದ್ಗುಣಸಂಪನ್ನಳೂ ನವಯೌವನಸಂಪದ್ಭರಿತಳೂ ಅನುರೂಪಳೂ ಆದ ಕಮಲಲೋಚನೆಯೆಂಬ ಕನ್ಯೆಯೋರ್ವಳನ್ನು ಅತಿ ವೈಭವದಿಂದ ವಿವಾಹಮಾಡಿಸಿದನು. ಮಿತವಚನನು ಆ ಕನ್ಯಾಮಣಿಯೊಂದಿಗೆ ಸಕಲ ವಿಧದಾನಂದಗಳನ್ನು ಸರ್ವಾತ್ಮನಾ ಹೊಂದಿ ಸುಮದಲ್ಲಿ ಕಂಪು ಬೆರೆತಂತೆ ಬೆರೆತು, ಶಿವಸಂಕಥಾಶ್ರವಣಾದಿಗಳ ಮುಖಾಂತರ ಆಕೆಯ ಆನಂದಕ್ಕೆ ಕಾರಣನಾಗಿದ್ದನು.

ಪ್ರಮದವನದಲ್ಲಿ ನವವಸಂತನು ಕಂಗೊಳಿಸುವಂತೆ ರಾಜಶೇಖರನಲ್ಲಿ ನವಯೌವನವು ವಿಜೃಂಭಿಸಿತು. ಹೀಗೆ ನವಯೌವನಸಂಪನ್ನನೂ ವಿದ್ಯಾವಿನಯಾದಿ ವಿಭೂಷಿತನೂ ಆದ ಕುಮಾರನು ದಾನದಲ್ಲಿ ಕೈಲಾಸವನ್ನೂ ಧೈರ್ಯದಲ್ಲಿ ಪರ್ವತವನ್ನೂ ಕೀರ್ತಿಯಲ್ಲಿ ಪೂರ್ಣಚಂದ್ರನನ್ನೂ ಧಿಕ್ಕರಿಸಿದ್ದನು. ಮತ್ತು ತೇಜಸ್ಸಿನಿಂದ ಶತ್ರುಗಳನ್ನೂ, ಬುದ್ಧಿಯಿಂದ ಲಕ್ಷ್ಮಿಯನ್ನೂ ಮತ್ತು ಶಿವಮಂತ್ರದಿಂದ ಪುನರ್ಜನ್ಮವನ್ನೂ ನಾಶಪಡಿಸಿ ಶೋಭಿಸುತ್ತಿದ್ದನು. ಇಂತಹ ಸುಕುಮಾರನನ್ನು ನೋಡಿ ರಾಜನು, ಮಂತ್ರಿಶ್ರೇಷ್ಠನಾದ ಪತಿಮೋಹಿಯೊಂದಿಗೆ, ‘ ನಮ್ಮೀ ಕುಮಾರನಿಗೆ ಯೌವನವು ಪ್ರಾಪ್ತವಾಗಿರುವುದು. ರಾಜ್ಯಭಾರವನ್ನು ಹೊರುವ ಸಾಮರ್ಥ್ಯವು ಈತನ ಭುಜಗಳಿಗಿರುತ್ತದೆ. ಸಮಸ್ತ ಮಂಡಲದ ರಾಜ್ಯಸೂತ್ರವನ್ನು ಇವನ

ಕ್ಕೆಗಿತ್ತು ನಾನು ಶಿವಧ್ಯಾನ್ಯೈಕನಿಷ್ಠನಾಗಿರುತ್ತೇನೆ' ಎಂದು ಹೇಳಿದನು. ಮಂತ್ರಿಯ ಅನುಮೋದನೆಯೂ ಇದಕ್ಕೆ ದೊರೆಯಿತು. ಒಂದು ಶುಭದಿನ ವನ್ನು ಗೊತ್ತುಮಾಡಿ ಅಂದು ರಾಜಶೇಖರನಿಗೆ ಯುವರಾಜಪಟ್ಟಾಭಿಷೇಕ ವನ್ನು ಅತಿ ವೈಭವದಿಂದ ನೆರವೇರಿಸಿದನು. ಪುತ್ರನು ರಾಜ್ಯಸೂತ್ರವನ್ನು ವಹಿಸಿಕೊಳ್ಳಲು, ಇತ್ತ ಸತ್ಯೇಂದ್ರಚೋಳನು ತಾನು ತನ್ನ ಸತಿಯೊಡನೆ ಯಾವಾಗಲೂ ಶಿವಲಿಂಗಾರ್ಚನೆ, ಶಿವಲೀಲಾಕಥಾಶ್ರವಣ, ಶಿವಭಕ್ತ ಪಾದಸೇವೆ, ಮುಂತಾದವುಗಳಲ್ಲಿ ತೊಡಗಿ ತನ್ನ ಪವಿತ್ರವಾದ ಹೃದಯ ಮಂದಿರದಲ್ಲಿ ಶಿವಪಾದಪದ್ಮಗಳನ್ನು ನೆಲೆ ನಿಲಿಸಿಕೊಂಡಿದ್ದನು. ರಾಜ ಶೇಖರನು ತಂದೆಗೆ ಅನುಗುಣನಾದ ಪುತ್ರನೆನಿಸಿ, ವಯಸ್ಸಿನಲ್ಲಿ ಚಿಕ್ಕವನೇ ಆದರೂ ತಂದೆಯಷ್ಟೇ ದಕ್ಷತೆಯಿಂದ ಶತ್ರುಭಯಂಕರನೂ, ಶಿಷ್ಟಜನ ಪರಿಪಾಲಕನೂ, ಜನಮನ ರಂಜನನೂ, ಯುಕ್ತಾಯುಕ್ತ ವಿಚಾರ ಪರನೂ, ಕ್ಷಮಾಮೂರ್ತಿಯೂ, ರಾಜತಂತ್ರವಿಶಾರದನೂ, ದಾನಪರನೂ, ಸಾತ್ತ್ವಿಕನೂ ಮೇಲಾಗಿ ಶ್ರೀ ಶಿವಮಂತ್ರಧಾರಕನೂ ಆಗಿ ರಾಜ್ಯಪರಿ ಪಾಲನೆಯನ್ನು ಮಾಡುತ್ತಿದ್ದನು. ತಂದೆಯ ಸ್ಥಾನದಲ್ಲಿ ನಿಯುಕ್ತನಾದ ಮಿತವಚನನೂ ಸಹ ತಂದೆಯಂತೆಯೇ ರಾಜನೀತಿಕುಶಲನಾಗಿ ರಾಜಶೇಖರನ ಸಮಸ್ತ ರಾಜಕಾರ್ಯಗಳಲ್ಲಿ ತಾನು ಮುಖ್ಯಕಾರಣನಾ ಗಿರುತ್ತಿದ್ದನು. ಇವರಿಬ್ಬರೂ ಬುದ್ಧಿಶಕ್ತಿ ಮತ್ತು ದೇಹಶಕ್ತಿಗಳ ಸಮಾ ಯೋಗದಂತಿದ್ದರು.

ಒಂದು ದಿನ ಅತ್ಯಂತವೈಭವದ ಒಡ್ಡೋಲಗದಲ್ಲಿ ರಾಜಶೇಖರನು ಸಿಂಹಾಸನಾರೂಢನಾಗಿದ್ದನು. ತನ್ನ ಉಚಿತಾಸನದಲ್ಲಿ ಮಿತವಚನನು ಮಂಡಿಸಿದ್ದನು. ಒಂದೆಡೆ ಸ್ತೋತ್ರಪಾಠಕರ ಸ್ತೋತ್ರಾವಳಿ, ಮತ್ತೊಂದೆಡೆ ಗಾಯಕಿ ಮತ್ತು ನರ್ತಕಿಯರ ಮನೋಹರ ಗಾಯನ ಮತ್ತು ನರ್ತನ, ಮಗುದೊಂದೆಡೆ ಕಾವ್ಯಗಳ ಮುಖಾಂತರ ವರ್ಣಿಸುತ್ತಿದ್ದ ಕವಿಗಳ ಶ್ರೇಣಿ, ಭಕ್ತಿಯಿಂದ ಕಪ್ಪಕಾಣಿಕೆಗಳನ್ನೊಪ್ಪಿಸುತ್ತಿದ್ದ ಸಾಮಂತಪರಂಪರೆಯೊಂದು ಕಡೆ ಹೀಗೆ ಆ ಸಭಾಭವನವು ಮನೋಹರವಾಗಿತ್ತು. ಇಕ್ಕೆಲಗಳಲ್ಲಿ ಚಾಮರಗಳನ್ನು ಹಾಕುತ್ತಿದ್ದ ರಮಣಿಯರು- ಅಲ್ಲಲ್ಲಿ ಮಡಿಯರಶಿಯರ ಸಡಗರದ ಓಡಾಟ ಮುಂತಾದವು ಇನ್ನೂ ಶೋಭೆಯನ್ನು ನೀಡಿದ್ದವು.

ಶಿವಸಭೆಯಂತೆ ಸದಾನಂದ ಬಂಧುರವೆನಿಸಿದ್ದ ಆ ಸಭೆಯ ಮಧ್ಯದಲ್ಲಿ, ಕುಂಡಲಾದ್ಯಲಂಕೃತನೂ, ಸುವರ್ಣದಂಡಧಾರಿಯೂ, ದೀರ್ಘದೇಹಿಯೂ, ಪಟ್ಟವಸ್ತ್ರದಿಂದ ವೇಷ್ಟಿತವಾದ ಶಿರಸ್ಸುಳ್ಳವನೂ, ಸೌಮ್ಯವೇಷಧಾರಿಯೂ, ಪ್ರಸನ್ನವದನನೂ ಆದ ಪ್ರತೀಹಾರಿಯು ಮುಂದೆ ಬಂದು, ನಮಸ್ಕರಿಸಿ ಮಹಾಪ್ರಭು ! ಕಿರಾತದೂತನೋರ್ವನು ಪ್ರಭುಗಳ ದರ್ಶನಾಕಾಂಕ್ಷಿಯಾಗಿ ಬಂದು ಮಹಾದ್ವಾರದಲ್ಲಿ ನಿಂತಿರುವನು' ಎಂದು ಹೇಳಲು, ರಾಜ ಕುಮಾರನು ಕಣ್ಸನ್ನೆಯಿಂದಲೇ ಕರೆತರಲು ಹೇಳಿದನು. ಅಂತೆಯೇ ಆ ಪ್ರತೀಹಾರಿಯು ಹೋಗಿ—ಚಿಗುರುಗಳ ಶಿರೋಭೂಷಣ—ಕೈಗಳಲ್ಲಿ ಆನೆಯ ದಂತದಿಂದ ಮಾಡಿದ ಬಳೆಗಳು—ಹಣೆಯಲ್ಲಿ ಕಸ್ತೂರಿಯ ತಿಲಕ—ಧನುರ್ಬಾಣಗಳು ಮುಂತಾದವನ್ನು ಧರಿಸಿದ್ದ ಕಿರಾತದೂತನೋರ್ವನನ್ನು ಸಭಾಸ್ಥಾನಕ್ಕೆ ಕರೆತಂದನು. ಆತನು ಅತ್ಯದ್ಭುತವಾದ ಸಭಾಭವನವನ್ನು ನೋಡಿ ಆನಂದಾಶ್ಚರ್ಯಗಳನ್ನು ಹೊಂದಿ ರಾಜಕುಮಾರನಿಗೆ ನಮಸ್ಕರಿಸಿ, ಕಸ್ತೂರಿಯ ಭರಣಿ, ಗಜೇಂದ್ರಕುಂಭಸ್ಥಳದ ಮುತ್ತುಗಳು—ಸರ್ಪಗಳ ಫಣಾರತ್ನಗಳು—ಜೇನುಕೊಡಗಳು—ಸುಗಂಧದ್ರವ್ಯಗಳೇ ಮುಂತಾಗಿ ತಾನು ತಂದಿದ್ದ ಎಲ್ಲವನ್ನೂ ಪ್ರಭುವಿಗೆ ಸಮರ್ಪಿಸಿ, ತನ್ನ ಕಂಕುಳಲ್ಲಿನ ವ್ಯಾಘ್ರ ಚರ್ಮದ ಜೋಳಿಗೆಯಲ್ಲಿದ್ದ ಅನರ್ಘರತ್ನವೊಂದನ್ನು ತೆಗೆದು ಆತನ ಪಾದದಡಿಯಲ್ಲಿರಿಸಿದನು. ತನ್ನ ಪಾದಸೇವೆಗಾಗಿ ಬಂದ ಬಾಲಸೂರ್ಯನೋ ಎಂಬಂತಿದ್ದ ಆ ರತ್ನದ ಕಾಂತಿಗೆ ಆಶ್ಚರ್ಯಚಕಿತನಾದ ರಾಜಶೇಖರನು ಒಮ್ಮೆ ರತ್ನವನ್ನೂ ಮತ್ತೊಮ್ಮೆ ಬೇಡನನ್ನೂ ನೋಡುತ್ತಿದ್ದನು. ಇಂಗಿತ ವನ್ನರಿತ ಕಿರಾತದೂತನು, 'ದೇವಾ ! ದಕ್ಷಿಣದೇಶದ ಪುಳಿಂದಪುರದ ಕಿರಾತರಾಜನಾದ ಕಾಲಮೇಘನ ಸೇವಕನು ನಾನು. ಒಂದುಸಾರಿ ಉಗ್ರ ವಾದ ಬೇಸಗೆಯ ಕಾಲವು ಬರಲು, ನಮ್ಮ ರಾಜನು ಅಪರಿಮಿತವಾದ ಬೇಡ ಪಡೆಯೊಡನೆ ಬೇಟೆಗಾಗಿ ಅರಣ್ಯಕ್ಕೆ ಹೊರಟನು. ಅಲ್ಲಿ ಅನೇಕ ಕಾಡು ಮೃಗಗಳನ್ನು ಸಂಹರಿಸುತ್ತಾ ನಮ್ಮ ಪಡೆಯು ಮುಂದೆ ಮುಂದೆ ಸಾಗುತ್ತಿತ್ತು.

ಅಷ್ಟರಲ್ಲಿ ಒಂದೆಡೆ ಒಂದು ದೊಡ್ಡ ಸಿಂಹವು ಕೋಪದಿಂದ ಗರ್ಜಿಸುತ್ತಾ, ತನಗೆದುರಾಗಿ ಬಂದ ಆನೆ ಮುಂತಾದ ಪ್ರಾಣಿಗಳನ್ನೂ

ಮತ್ತು ಬೇಡರ ಪಡೆಯನ್ನೂ ಧ್ವಂಸಮಾಡುತ್ತಾ ಸಾಗಿ ಬರುತ್ತಿತ್ತು. ಕೂಡಲೇ ಕಾಲಮೇಘರಾಜನು ತನ್ನ ಖಡ್ಗವನ್ನು ಹಿಡಿದು ಆ ಸಿಂಹಕ್ಕೆ ಎದುರಾದನು. ಕೋಪಗೊಂಡ ಸಿಂಹವು ಎಲ್ಲರನ್ನೂ ಒಂದೇ ಸಾರಿ ತಿನ್ನು ವುದೋ ಎಂಬಂತೆ ಎದುರಾಯ್ತು. ರಾಜನು ರಭಸದಿಂದ ತನ್ನ ಖಡ್ಗವನ್ನು ಬೀಸಿ ಆ ಸಿಂಹದೊಡನೆ ಬಹುವಾಗಿ ಸೆಣಸಿ ಅದನ್ನು ಕೆಳಕ್ಕೆ ಕೆಡಹಿ ಅದರ ಮಸ್ತಕವನ್ನು ಸೀಳಿದನು. ಅಲ್ಲಿ ಈ ಅಮೋಘವಾದ ರತ್ನವು ದೊರೆಯಿತು. 'ಇದನ್ನು ನಮ್ಮ ರಾಜನಾದ ರಾಜಶೇಖರಭೂಪಾಲನಿಗೆ ಅರ್ಪಿಸಿ ಬಾ' ಎಂದಪ್ಪಣೆಯಿತ್ತು ನನ್ನನ್ನು ಕಳುಹಿಸಿದನು. ಅದರಂತೆ ಇದನ್ನು ತಮ್ಮ ಪದತಲದಲ್ಲಿ ಅರ್ಪಿಸಿದ್ದೇನೆ. ಇಷ್ಟೇ ಅಲ್ಲದೆ ಮತ್ತೊಂದು ವಾರ್ತೆಯೆಂದರೆ—

ಸಾಗರಮಧ್ಯದಲ್ಲಿರುವ ಸಿಂಹಳೇಶ್ವರನು ಮದೋನ್ಮತ್ತನಾಗಿ, ಚೋಳ ದೇಶವೂ ಸಹ ತನ್ನ ಅಧೀನದಲ್ಲಿಯೇ ಇದೆಯೆಂದು ಹೇಳುತ್ತಾ ಗರ್ವಿಸುತ್ತಿರು ವನು. ಇನ್ನು ಪ್ರಭುಚಿತ್ತವೇ ಪ್ರಮಾಣ' ಎಂದು ಹೇಳಿ ನಮಸ್ಕರಿಸಿ ಒಂದೆಡೆ ನಿಂತನು. ಅಷ್ಟರಲ್ಲಿ ವರದಿಗಾರರೂ ಮುಂದೆ ಬಂದು ನಮಿಸಿ, 'ಜೀಯಾ ! ಸಿಂಹಳನು ಕಾಣಿಕೆಯನ್ನಿತ್ತಿಲ್ಲವು' ಎಂದು ಹೇಳಿದರು. ಆಗ ರಾಜಶೇಖರನು ಎಲ್ಲರನ್ನೂ ಬೀಳ್ಕೊಟ್ಟು ಮಿತವಚನನೊಂದಿಗೆ ಸಮಾಲೋಚಿಸಿ, ಸಿಂಹಳೇ ಶ್ವರನ ಗರ್ವಭಂಜನೆಗಾಗಿ ಚತುರಂಗಸೇನಾಸಮೇತನಾಗಿ ಹೊರಡುವು ದೆಂದು ನಿರ್ಧರಿಸಿದನು. ಅದರಂತೆ ತಂದೆಯ ಅಪ್ಪಣೆಯನ್ನೂ ಪಡೆದನು.

ಯುದ್ಧಕ್ಕನುಕೂಲವಾದ ಶರತ್ಕಾಲವೂ ಬಂದಿತು. ಮಿತವಚನ ನೊಂದಿಗೆ ಚತುರಂಗಬಲ ಸಮೇತನಾಗಿ ರಾಜಶೇಖರನು ವಿಜಯಯಾತ್ರೆಗೆ ಹೊರಟನು. ಪ್ರಯಾಣಸೂಚಕಗಳಾದ ಭೇರಿಗಳ ತಾಡನಗಳು ದಿಗಂತ ಗಳನ್ನೇ ಮೊಳಗಿಸಿದವು. ರಾಜಶೇಖರನ ಈ ಸೈನ್ಯವು ಸಮಸ್ತ ಭೂಮಂಡಲ ವನ್ನೇ ಸ್ವಾಧೀನ ಮಾಡಿಕೊಳ್ಳುವುದೋ ಎಂಬಂತೆ ಮುಂದೆ ಮುಂದೆ ಸಾಗಿತು. ಮುಂದೆ ರಾಜಶೇಖರ, ಆತನ ಇಕ್ಕೆಲಗಳಲ್ಲಿ ಮಿತವಚನ ಮತ್ತು ಸೇನಾನಿ ಮೇಘನಾದ; ಇವರನ್ನನುಸರಿಸಿ ಹೊರಟ ಸೂರ್ಯ–ಚಂದ್ರವಂಶಜ ರಾಜಕುಮಾರಗಣ, ಗಜಸೈನ್ಯದಿಂದ ಮತ್ತು ಅಶ್ವಸೈನ್ಯದಿಂದ ಸಂರಕ್ಷಿತ ವಾಗಿ ಸಾಗುತ್ತಿದ್ದ ರಥಸೇನೆ, ಪದಾತಿಸೇನೆ ಹೀಗೆ ಹೊರಟ ಅಪರಿಮಿತವಾದ ಈ ಸೈನ್ಯವು ಮಣಿಕಟಕ ಪರ್ವತದ ತಪ್ಪಲಲ್ಲಿ ಬಿಡಾರ ಮಾಡಿತು. ಚೋಳ

ಭೂಪಾಲನ ಪುತ್ರ ಯುವರಾಜನು ಯುದ್ಧಕ್ಕೆ ಬಂದು ಮಣಿಕಟಕ ಪರ್ವತ ದಲ್ಲಿ ಬಿಡಾರ ಮಾಡಿರುವನೆಂಬ ವರ್ತಮಾನವನ್ನು ದೂತರ ಮುಖಾಂತರ ತಿಳಿದ ಸಿಂಹಳೇಶ್ವರನು ಕೆರಳಿದ ಕೇಸರಿಯಂತೆ ಕೋಪಗೊಂಡು ಸಕಲ ಸೈನ್ಯ ಸಮೇತನಾಗಿ ಹಡಗನ್ನೇರಿ ಹೊರಟು ಬಂದು ರಾಜಶೇಖರನ ಸೈನ್ಯ ವನ್ನೆದುರಿಸಿದನು. ರಣರಂಗದಲ್ಲಿ ಉಭಯ ಸೇನೆಗಳಿಗೂ ಘನಘೋರವಾದ ಸಮರವಾರಂಭವಾಯ್ತು. ಆನೆಯನ್ನೇರಿ ತನಗೆದುರಾಗಿ ಬರುತ್ತಿದ್ದ ಸಿಂಹ ಳೇಶ್ವರನನ್ನು ರಾಜಶೇಖರನು ತನ್ನ ಆನೆಯನ್ನೇರಿ ಕುಳಿತು ಎದುರಿಸಿದನು. ಸಿಂಹಳೇಶ್ವರನ ಬಾಣಪರಂಪರೆಗಳನ್ನು ಮಾರ್ಗಮಧ್ಯದಲ್ಲಿಯೇ ತನ್ನ ಬಾಣ ಗಳಿಂದ ಕತ್ತರಿಸಿಹಾಕಿದನು. ತನ್ನ ಒಂದು ಬಾಣದಿಂದ ಶತ್ರುವಿನ ಆನೆಯ ಕುಂಭಸ್ಥಳವನ್ನು ಭೇದಿಸಿ ಮತ್ತೊಂದರಿಂದ ಶತ್ರುವನ್ನು ಮೂರ್ಛೆಗೊಳಿಸಿ ದನು. ಕೂಡಲೇ ಭಯಗೊಂಡ ಸಿಂಹಳೇಶ್ವರನ ಸೈನ್ಯವು ದಿಕ್ಕೆಟ್ಟು ಹಿಮ್ಮೆ ಟ್ಟಿತು. ಸ್ವಲ್ಪಕಾಲದ ಅನಂತರ ಎಚ್ಚರಗೊಂಡ ಸಿಂಹಳೇಂದ್ರನು ತನ್ನ ಸೈನ್ಯವು ಅಲ್ಲಿಲ್ಲದ್ದನ್ನು ನೋಡಿ ತಲೆತಪ್ಪಿಸಿಕೊಂಡು ಹಡಗನ್ನೇರಿ ಹಿಂತಿ ರುಗಿದನು. ಇತ್ತ ರಾಜಶೇಖರನು ತನ್ನ ಸಮಸ್ತ ಸೈನ್ಯದೊಂದಿಗೆ ಸಿಂಹಳ ದೇಶಕ್ಕೆ ಹೊರಟುಬಂದು ರಾಜಧಾನಿಯಾದ ಕಮಲಾವತಿಯನ್ನು ಆಕ್ರಮಿಸಿದನು.

ಸುಭದ್ರವಾದ ಕೋಟೆಗಳಿಂದ ಆಳವಾದ ಕೊತ್ತಲುಗಳಿಂದ ಹಾಗೂ ಸದಾ ಶಸ್ತ್ರಸಜ್ಜಿತವಾದ ನುರಿತ ಸೈನ್ಯದಿಂದ ಸಂರಕ್ಷಿತವಾಗಿದ್ದ ಆ ಕಮಲಾ ವತಿಯಲ್ಲಿ, ಶತ್ರುಗಳನ್ನು ಹಿಮ್ಮೆಟ್ಟಿಸಲೇಬೇಕೆಂಬ ಸಂಕಲ್ಪದಿಂದ ಸಿಂಹ ಳೇಂದ್ರನು ತನ್ನ ಸಕಲ ಸೈನ್ಯದೊಂದಿಗೆ ಸಿದ್ಧನಾಗಿಯೇ ಇದ್ದನು. ಆದರೆ ರಾಜಶೇಖರನ ಪ್ರಭಾವ ಪರಾಕ್ರಮಾದಿಗಳನ್ನು ಚೆನ್ನಾಗಿಯೇ ಅರಿತಿದ್ದ ನೀತಿಭೂಷಣನೆಂಬ ನೀತಿಕುಶಲನಾದ ಸಿಂಹಳೇಂದ್ರನ ಮಂತ್ರಿಯು, ' ಮಹಾಪ್ರಭು ! ರಾಜಶೇಖರನು ಸಾಮಾನ್ಯನಲ್ಲ. ಈಗಾಗಲೆ ಆತನ ಪ್ರಭಾವದ ಅರಿವು ನಮಗುಂಟಾಗಿದೆ. ಇದನ್ನರಿತೂ ಸಹ ಪುನಃ ನಾವು ಆತನೊಡನೆ ಯುದ್ಧವನ್ನೇ ಮಾಡುವುದಾದರೆ ನಮ್ಮೆಲ್ಲ ಸೈನ್ಯ ಸಮೂಹವೂ ನಾಶವಾಗಿ ದೇಶವೇ ಹಾಳಾಗುತ್ತದೆ. ಆದ್ದರಿಂದ ಮುಂಬರುವ ಅನಿಷ್ಟ ಪರಂಪರೆಯನ್ನು ತಪ್ಪಿಸಲು, ಈ ಯುದ್ಧವನ್ನು

ಕೈಬಿಟ್ಟು ಶಿವಪ್ರಸಾದದಿಂದ ಅಸಾಧ್ಯನಾಗಿರುವ ಆತನೊಂದಿಗೆ ಸಂಧಿ ಮಾಡಿಕೊಳ್ಳುವುದೊಳ್ಳೆಯದು. ಇದರಿಂದ ನಿಮಗೂ ಉತ್ತರೋತ್ತರವಾದ ಶ್ರೇಯಸ್ಸು ಸಂಭವಿಸುವುದರಲ್ಲಿ ಸಂಶಯವಿಲ್ಲ' ಎಂದು ಬಹುವಿಧದಿಂದ ಸಂಧಿಗೇ ಒಡಂಬಡಿಸಿದನು. ಅದರಂತೆಯೇ ಸಿಂಹಳೇಶ್ವರನು ರಾಜಶೇಖರನಲ್ಲಿಗೆ ಶಾಂತಿದೂತನನ್ನು ಕಳುಹಿಸಿ ಸಂಧಿಮಾಡಿಕೊಂಡು ಆತನನ್ನು ತನ್ನ ಅರಮನೆಗೆ ಆಹ್ವಾನಿಸಿದನು.

ರತ್ನಖಚಿತವಾದ ರಥದಲ್ಲಿ ಮಂಗಳಾಲಂಕೃತನಾಗಿ ಕುಳಿತು ಕಮಲಾವತಿಯ ರಾಜಬೀದಿಗಳಲ್ಲಿ ವೈಭವದ ಉತ್ಸವದೊಡನೆ ರಾಜಶೇಖರನು ಅರಮನೆಯೆಡೆಗೆ ಹೊರಟುಬಂದನು. ಮುಂದೆ ಸಮಸ್ತ ವಾದ್ಯ ವೈಭವ, ವೇದಗಾಯಕರು, ವಂದಿಮಾಗಧರು, ಮಂಗಳದ ಆರತಿಗಳನ್ನು ಹಿಡಿದ ಸುಮಂಗಲೆಯರು, ಹಿಂಬದಿಯಲ್ಲಿ ಉಭಯಪಕ್ಷಗಳ ಚತುರಂಗ ಸೇನೆ ಸಾಗಿದ್ದವು. ಇಂತಹ ಅಮೋಘಮಹೋತ್ಸವವನ್ನು ನೋಡಲು, ಹಾಡುತ್ತಿದ್ದ ಸಂಗೀತವನ್ನು ಅಷ್ಟಕ್ಕೇ ನಿಲ್ಲಿಸಿ, ಬಾಜಿಸುತ್ತಿದ್ದ ವೀಣೆಯನ್ನು ಸಖಿಯರಿಗೆ ಕೊಟ್ಟು, ಪಗಡೆಯಾಟವನ್ನು ಅರ್ಧಕ್ಕೇ ಬಿಟ್ಟು, ನೃತ್ಯವನ್ನೂ ಅಲ್ಲಿಗೇ ಕೈಬಿಟ್ಟು, ಸಡಗರದಲ್ಲಿ ಅಲಂಕಾರಗಳನ್ನು ಮುಗಿಸಿಕೊಂಡು ಆ ನಗರದ ಪ್ರಮದಾಮಣಿಯರು ಅತ್ಯಾಸಕ್ತಿಯಿಂದ ಮನೆಗಳಿಂದ ಹೊರಬಂದರು. ಮನ್ಮಥನ ರೂಪವನ್ನೂ ನಾಚಿಸುವ ರೂಪವನ್ನುಳ್ಳ ಈ ಕುಮಾರಕನ ರೂಪಾತಿಶಯಕ್ಕೆ ನಗರದ ಜನಸಮೂಹವೆಲ್ಲ ಮರುಳಾಗಿಹೋಯಿತು. ಅತ್ಯಾನಂದದಿಂದ ಈ ಉತ್ಸವವನ್ನು ನೋಡುತ್ತಾ ಎಲ್ಲರೂ ತಮ್ಮ ಮನದುತ್ಸವವನ್ನು ಹೊಂದಿದರು. ಇವನ ಅದ್ವಿತೀಯ ರೂಪಸಂಪತ್ತಿಯನ್ನೂ ಅಪರಿಮಿತ ಪರಾಕ್ರಮವನ್ನೂ ಮತ್ತು ವಂಶೋನ್ನತಿಯನ್ನೂ ಹೊಗಳಿ ಹೊಗಳಿ ತಣಿಯದಾದರು.

ಕ್ರೀಡಾವನದ ಪುಷ್ಪಶಯ್ಯೆಯಲ್ಲಿ ಮಂಡಿಸಿ ಸೌಂದರ್ಯಶಾರದೆಯೆಂಬ ಸಖಿಯ ಸುಮಧುರಗಾನವನ್ನು ಕೇಳುತ್ತಿದ್ದ ಸಿಂಹಳೇಶ್ವರನ ಕುಮಾರಿ ಸರ್ವಮಂಗಳೆಗೆ, ಆಕೆಯ ಸಖಿಯರು ಸಡಗರದಿಂದ ಓಡಿಬಂದು 'ರಾಜಕುಮಾರಿ! ಕಮಲಲೋಚನನೂ, ಇಂದುವದನನೂ, ಉಜ್ವಲದೇಹಿಯೂ ಮತ್ತು ನವಯೌವನ ಶ್ರೀ ಭರಿತನೂ ಆದ ಸುಂದರ ರಾಜ

ಕುಮಾರನೋರ್ವನು ಬರುತ್ತಿದ್ದಾನೆ, ನೋಡು ಬಾ ' ಎಂದು ಹೇಳಿದರು. ಕೆರಳಿದ ಕುತೂಹಲವುಳ್ಳವಳಾಗಿ ಸಖಿಯರೊಡಗೂಡಿ, ವಸಂತರಾಜನನ್ನು ನೋಡಲು ಬಂದ ವನಲಕ್ಷ್ಮಿಯಂತೆ, ಚಂದ್ರಕಾಂತಶಿಲೆಯ ಮಹಡಿಯನ್ನೇರಿ ರಾಜಬೀದಿಯೆಡೆಗೆ ನೋಡಿದಳು. ಹೊಳೆವ ಕಿರೀಟ-ಹಾರ-ಪೀತಾಂಬರಾದಿ ಗಳಿಂದ ಇಮ್ಮಡಿಗೊಳಿಸಲ್ಪಟ್ಟ ಅವನ ಅನುಪಮ ದೇಹಕಾಂತಿಯನ್ನು ನೋಡಿ ಹರ್ಷಪುಲಕಿತಳಾದಳು ; ಆ ಸೌಂದರ್ಯಕ್ಕೆ ಮಾರುಹೋದಳು. ಅವನ ಆ ಸೌಂದರ್ಯಸಂಪತ್ತನ್ನು ತನ್ನ ದೃಷ್ಟಿಗಳಿಂದ ಪೂರ್ಣವಾಗಿ ಪಾನ ಮಾಡುವವಳಂತೆ ನೋಡಿದಳು ; ಸೂರ್ಯನನ್ನು ಕಂಡ ಕಮಲದಂತೆ. ಹಿಗ್ಗಿದಳು.

ಲೀಲಾಕಮಲವನ್ನು ತನ್ನ ಕೈಯಲ್ಲಿ ತಿರುಗಿಸುತ್ತಾ ಜನಮನ ವನ್ನು ತಣಿಸುತ್ತಾ ಬರುತ್ತಿದ್ದ ರಾಜಶೇಖರನು ಸುತ್ತಲೂ ತನ್ನ ದೃಷ್ಟಿ ಯನ್ನು ಬೀರಿ ನೋಡುತ್ತಿರಲು, ಪೂರ್ಣಚಂದ್ರಕಳಾಧರೆಯಾದ ಸರ್ವ ಮಂಗಳೆಯನ್ನು ಕಂಡನು. ಚಂದ್ರನನ್ನು ಕಂಡ ಸಮುದ್ರದಂತೆ ಹೃದಯಾ ನಂದವುಕ್ಕಿತು. ಅವಳ ಸೌಂದರ್ಯಸಾಗರದಲ್ಲಿ ತಲ್ಲೀನನಾಗಿ ತೇಲಾಡಿ. ದನು. ಈರ್ವರ ದೃಷ್ಟಿಗಳೂ ಪರಸ್ಪರ ಬೆರೆತವು, ಅರಿಯದೆಯೇ ಮನ ಗಳೆರಡೂ ಒಂದುಗೂಡಿದವು. ಯಾವ ಪ್ರಬಲಶತ್ರುವಿಗೂ ಸೋಲದ ಕುಮಾರನು ಈ ಅಬಲಾಮಣಿಗೆ ಸೋತುಹೋದನು. ಚಂಚಲಗಳಾದ ತನ್ನ ಇಂದ್ರಿಯಗಳನ್ನು ಬಹಳ ಪ್ರಯಾಸದಿಂದ ತಡೆಹಿಡಿದು ಮುಂದೆ ಸಾಗಿದನು. ವಿರಹಪೀಡಿತಳಾದ ಸರ್ವಮಂಗಳೆಯು ಮೂರ್ಛೆಹೊಂದಿದಳು.

ಇವಳ ಈ ಅನಿರೀಕ್ಷಿತ ಮೂರ್ಛೆಗೆ ಅಚ್ಚರಿಗೊಂಡ ಸಖಿಯರು ಪಲ್ಲಕ್ಕಿಯಲ್ಲಿ ಇವಳನ್ನು ಕೇಳೀವನಕ್ಕೆ ಕರೆದೊಯ್ದರು. ಅಲ್ಲಿ ಚಿಗುರಿನ ಶಯ್ಯೆಯಲ್ಲಿ ಮಲಗಿಸಿ ದೇಹಕ್ಕೆ ಕರ್ಪೂರವನ್ನು ಲೇಪಿಸಿದರು. ಪುಷ್ಪ ಚಾಮರಗಳಿಂದ ಗಾಳಿಹಾಕಿದರು. ಇವುಗಳಿಂದ ಸರ್ವಮಂಗಳೆಯ ವಿರಹವು ಹೆಚ್ಚಾಯಿತ್ತೇ ಹೊರತು ಕಡಿಮೆಯಾಗಲಿಲ್ಲ. ಕಣ್ಣಲ್ಲಿ ನೀರೂಡಿತು, ಯಾವ ಉಪಚಾರವೂ ಅವಳಿಗೆ ಬೇಡವಾಯ್ತು. ಆದರೂ ವಿಷಯವನ್ನರಿಯದ ಸಖಿಯರು ಕರ್ತವ್ಯವೆಂದು ಶೈತ್ಯೋಪಚಾರಮಾಡುತ್ತಿದ್ದರು.

ಇತ್ತ ರಾಜಶೇಖರನು ಮನದಲ್ಲಿ ಆ ಸುಂದರಮೂರ್ತಿಯನ್ನೇ

ನೆನೆ ನೆನೆದು ಸಿಂಹಳೇಶ್ವರನ ಅರಮನೆಗೆ ಬಂದನು. ಸಿಂಹಳೇಂದ್ರನು ಅತಿ ಗೌರವದಿಂದ ಅವನನ್ನು ಎದುರ್ಗೊಂಡು ವೈಭವದ ಆತಿಥ್ಯವನ್ನೇ ನೀಡಿದನು. ಈ ಸುಕುಮಾರನಿಗೆ ತನ್ನ ಸುಕುಮಾರಿಯನ್ನು ಕೊಟ್ಟು ವಿವಾಹವನ್ನು ನೆರವೇರಿಸಬೇಕೆಂದು ಸಂಕಲ್ಪಿಸುತ್ತಿರುವಷ್ಟರಲ್ಲಿಯೇ, ಸರ್ವಮಂಗಳೆಯ ಸಖಿಯಾದ ಸೌಂದರ್ಯಶಾರದೆಯು ಅವಸರದಿಂದ ಬಂದು, 'ಎಲೈ ಪ್ರಭುವೇ ! ರಾಜಕುಮಾರಿಯು ರಾಜಕುಮಾರನನ್ನು ನೋಡಿದಾಗಿನಿಂದ ವಿರಹ ವ್ಯಥೆಯನ್ನನುಭವಿಸುತ್ತಾ ಇರುವಳು. ಆದ್ದರಿಂದ ಮುಂದಿನ ಕಾರ್ಯವನ್ನು ವಿಳಂಬಮಾಡದೆ ಚಿಂತಿಸಿರಿ' ಎಂದು ಹೇಳಿದಳು. ಇದೇ ಸಂದರ್ಭದಲ್ಲಿಯೇ ರಾಜಕುಮಾರನೂ ಕೂಡ ಪತಿ ಮೋಹಿಯನ್ನು ಈ ವಿಚಾರವಾಗಿ ರಾಜನಲ್ಲಿಗೆ ಕಳುಹಿಸಿಕೊಟ್ಟಿದ್ದನು. ಹೀಗೆ ತಾನಾಗಿ ಕೂಡಿಬಂದ ಈ ತನ್ನ ಸತ್ಯಸಂಕಲ್ಪಕ್ಕೆ ಸಂತೋಷಗೊಂಡ ರಾಜನು ಒಂದು ಶುಭದಿನ ಈರ್ವರಿಗೂ ಮಂಗಳಸ್ನಾನಮಾಡಿಸಿ ಅತ್ಯಂತ ವೈಭವದ ವಿವಾಹಮಂಗಳಕಾರ್ಯವನ್ನು ನೆರವೇರಿಸಿ ತನ್ನ ಮಗಳನ್ನು ರಾಜಕುಮಾರನಿಗೆ ಕನ್ಯಾದಾನ ಮಾಡಿ ಕೃತಾರ್ಥನಾದನು. ಆಹ್ವಾನಿತ ರಾಗಿದ್ದ ಸಂತ್ಯೇಂದ್ರಚೋಳ ಮುಂತಾದ ಹಿರಿಯರೆಲ್ಲರೂ ಮನಸಾರ ಈ ನೂತನದಂಪತಿಗಳನ್ನು ಆಶೀರ್ವದಿಸಿದರು. ಕೆಲವುಕಾಲ ಸಿಂಹಳದೇಶ ದಲ್ಲಿ ತನ್ನ ಪ್ರಿಯೆಯೊಂದಿಗೆ ಆನಂದದಿಂದಿದ್ದು, ಬಳಿಕ ತನ್ನ ದೇಶಕ್ಕೆ ಪತ್ನಿಯೊಡನೆ ಹಿಂತಿರುಗಿದನು. ಶತ್ರುವನ್ನು ಜಯಿಸಿ ಜಯಲಕ್ಷ್ಮಿಯನ್ನು ಪಡೆದು ಕನ್ಯಾರತ್ನದ ಕೈಹಿಡಿದು ಹಿಂತಿರುಗಿದ ತಮ್ಮ ರಾಜಕುಮಾರ ನನ್ನು ಚೋಳದೇಶದ ಜನರು ಬಹಳವಾದ ವೈಭವಾನಂದಗಳಿಂದ ಸ್ವಾಗತಿ ಸಿದರು. ತಂದೆಯಾದ ಸತ್ಯೇಂದ್ರಚೋಳನು ತನ್ನ ದೇವಿಯೊಡನೆ ತುಂಬಿದ ಹೃದಯದೊಂದಿಗೆ ತನ್ನ ಪುತ್ರ ಮತ್ತು ಸೊಸೆಯರನ್ನು ಮನೆಗೆ ಬರಮಾಡಿ ಕೊಂಡನು. ದೇಹಗಳು ಎರಡೇ ಆಗಿದ್ದರೂ ಆತ್ಮಗಳು ಒಂದೇ ಆಗಿದ್ದುದ ರಿಂದ ರಾಜಶೇಖರನು ಸಪತ್ನೀಕನಾಗಿ, ಸಕಾಲದಲ್ಲಿ ಶಿವಾರ್ಚನೆ ಮೊದ ಲಾದವುಗಳನ್ನು ಆಚರಿಸಿ, ರಾಜ್ಯದಾಡಳಿತವನ್ನು ಸುಸೂತ್ರವಾಗಿ ನಡೆಸು ತ್ತಿದ್ದನು. ಮಿತವಚನನ ಸಹಾಯವೂ ಇದ್ದುದರಿಂದ ಯಾವುದೂ ಆಡಳಿತ ದಲ್ಲಿ ಅವನಿಗೆ ಕಷ್ಟಕರವಾಗಿರಲಿಲ್ಲ.

# ೫. ರಾಜಶೇಖರನ ವಸಂತವಿಹಾರ

ಹೃದಯೇಶ್ವರಿಯೊಡನೆ ಅರಮನೆಯಲ್ಲಿ ಆನಂದದಿಂದ ಕಾಲಕಳೆಯುತ್ತಿರಲು, ದಿನ ಕಳೆದಂತೆ ವಸಂತಕಾಲವು ಎಲ್ಲೆಲ್ಲೂ ತನ್ನ ಶೋಭೆಯನ್ನು ಬೆಳಗಿಸಿತು. ಗಿಡ-ಮರ-ಬಳ್ಳಿಗಳೆಲ್ಲ ಚಿಗುರು-ಹೂಗಳ ಭಾರವನ್ನು ಹೊತ್ತು ಮೆರೆಯುತ್ತಿದ್ದವು. ಭ್ರಮರಗಳ ಝೇಂಕಾರ, ಶುಕ-ಪಿಕಾದಿಗಳ ಕಲಕಲ ಧ್ವನಿ, ನವಿಲುಗಳ ನರ್ತನದಿಂದೊಡಗೂಡಿದ ಕೇಕಾರವ ಮುಂತಾದವು ರಸಿಕರ ಹೃದಯಗಳನ್ನು ಸೆಳೆಯುತ್ತಿದ್ದವು. ರತಿ-ಮನ್ಮಥರ ವಿಜಯ ಯಾತ್ರೆಯು ಎಲ್ಲೆಡೆ ನಿರಾತಂಕವಾಗಿ ಸಾಗುತ್ತಿತ್ತು. ಮಂದಾನಿಲವು ಸುಗಂಧಗಳನ್ನು ಹೊತ್ತು ಎಲ್ಲರಿಗೆ ಸುಖಸ್ಪರ್ಶವಾಗಿ ಸುಳಿಯುತ್ತಲಿತ್ತು. ಈ ಆನಂದಮಯ ಸನ್ನಿವೇಶವು ಎಂತಹ ವಿರಾಗಿಯನ್ನೂ ಅನುರಾಗಿಯನ್ನಾಗಿಸುತ್ತಿತ್ತು.

ಇಂತಹ ವಸಂತಕಾಲದಾಗಮನವನ್ನು ಪದ್ಧತಿಯಂತೆ ಸೇವಕ ನೋರ್ವನು ರಾಜಶೇಖರನಿಗೆ ಬಿನ್ನವಿಸಿದನು. ರಸಿಕಜನರಂಜನನೂ, ರಸಿಕ ಶಿಖಾಮಣಿಯೂ ಆದ ಕುಮಾರನು ರಸಿಕಳಾದ ಪ್ರಿಯೆಗೆ ನವವಸಂತದ ಆನಂದದನುಭವವನ್ನುಂಟುಮಾಡಿಸಬೇಕೆಂದು ಬಯಸಿ ಆಕೆಯೊಡನೆ ಪರಿವಾರಸಹಿತನಾಗಿ ನಂದನವನಕ್ಕೆ ಹೊರಡಲು ಸಿದ್ಧನಾದನು. ಮೇನೆಗಳೂ, ಅಶ್ವಗಳೂ, ಗಜಗಳೂ ವನವಿಹಾರಸಾಧನಗಳಾಗಿ ಸಜ್ಜಾಗಿ ಹೊರಟವು. ವನದ ಸಮೀಪಕ್ಕೆ ಬರುತ್ತಿದ್ದಂತೆಯೇ ವನ್ಯಪುಷ್ಪಗಳ ಸುಗಂಧ ಧೂಳಿ-ಭ್ರಮರಗಳ ಝೇಂಕಾರ–ಶುಕಪಿಕಾದಿಗಳ ಕಿಲಕಿಲನಾದ ಇವರನ್ನು ಭವ್ಯವಾಗಿ ಸ್ವಾಗತಿಸಿದವು. ಸುರಗಿ-ಸಂಪಗೆ-ಪಾದರಿ-ತಾವರೆ-ಮಲ್ಲಿಗೆ-ಚೂತ ಮೊದಲಾದ ಗಿಡ-ಮರ-ಬಳ್ಳಿಗಳು ಹೂಗೊಂಚಲುಗಳ ಭಾರದಿಂದ ಬಾಗಿ ಬಾಗಿ ಇವರಿಗೆ ಸ್ವಾಗತವಿತ್ತವು. ತಂಗಾಳಿಯ ಸುಖದ ಸೋಂಕಿನಿಂದ ರೋಮಾಂಚನಗೊಂಡ ಕುಮಾರನು ಪ್ರಿಯೆಯೆಡೆಗೆ ಪ್ರೇಮದೃಷ್ಟಿಯನ್ನು ಹಾಯಿಸಿ, ಅವಳ ದೃಷ್ಟಿಯಲ್ಲಿ ತನ್ನ ದೃಷ್ಟಿಯನ್ನು ಮೇಳವಿಸಿ ಮಹದಾನಂದವನ್ನು ಹೊಂದುತ್ತಾ, ಆ ವನರಾಜಿಯ ನವವಸಂತದ ಸೊಬಗನ್ನು ನೋಡುತ್ತಾ ತೋರುತ್ತಾ ಹೊಗಳುತ್ತಾ ಪ್ರಿಯೆಯೊಡನೆ ಸರಸವಾಡುತ್ತಾ ಮುಂದೆ ಮುಂದೆ ಸಾಗುತ್ತಿದ್ದನು.

ಶೃಂಗಾರದಲ್ಲಿ ಭಕ್ತಿಯನ್ನು ಬೆರೆಸಬೇಕೆಂಬ ಮಹದಾಕಾಂಕ್ಷೆಯಿಂದ, ಪ್ರಿಯಳೊಡನೆ ಅಬಾಧಿತವೂ ಅಖಂಡವೂ ಆದ ಶಿವಪೂಜೆಯಲ್ಲಿ ನಿರತನಾಗ, ಲೋಸುಗ, ಶುಚಿರ್ಭೂತನಾಗಿ ಈ ಪುಷ್ಪಸಮಯದ ನವಕುಸುಮಗಳಿಂದಲೇ ನಿರ್ಮಿಸಲ್ಪಟ್ಟು ಸಿಂಗರಿಸಲ್ಪಟ್ಟಿದ್ದ ಪುಷ್ಪಮಂಟಪದಲ್ಲಿ ಸಜ್ಜುಗೊಳಿಸಲ್ಪ ಟ್ಟಿದ್ದ ಪುಷ್ಪಾಸನದಲ್ಲಿ ಸಪತ್ನೀಕನಾಗಿ ಕುಳಿತನು. ಗಾನವಿಶಾರದೆಯರು ಮನೋಜ್ಞವಾಗಿ ಹಾಡಿ ನರ್ತಿಸುತ್ತಿದ್ದರು. ವಾದ್ಯಪ್ರವೀಣೆಯರು ತಮ್ಮ ನಾಯಕನು ಮೆಚ್ಚುವಂತೆ, ಆ ನರ್ತಕಿಯರ ಗಾನ-ನರ್ತನಗಳಿಗನುಗುಣ ವಾಗಿಯೇ ಹೃದಯಂಗಮವಾಗಿ ವಾದ್ಯವೃಂದಗಳನ್ನು ಮೇಳವಿಸಿದರು. ಈ ರಮಣೀಯದೃಶ್ಯವು ಶ್ರೀ ಉಮಾಮಹೇಶ್ವರರ ನೆಲವೀಡಾದ ಕೈಲಾಸ ವನ್ನೇ ನಾಚಿಸುತ್ತಿತ್ತು. ಸಖೀಜನರು ಹೊತ್ತು ತಂದ ತಿಳಿಗೊಳಗಳ ತಿಳಿ ನೀರಿನಿಂದ ಶಿವನನ್ನಭಿಷೇಕಿಸಿ, ಆ ಸಖಿಯರೇ ಆನಂದದಿಂದ ಆರಿಸಿ ಕೊಯ್ದು ತಂದಿದ್ದ ನವವಸಂತದ ಪತ್ರೆ-ಪುಷ್ಪ-ಫಲಾದಿಗಳನ್ನು ಪರಮಾತ್ಮನಿಗರ್ಪಿಸಿ, ಸುಗಂಧದ ಧೂಪ-ದೀಪಗಳನ್ನು ಮನಸಾರ ಪಶುಪತಿಗೆ ಸಮರ್ಪಿಸಿ ತನ್ಮಯ ನಾಗಿ ಧ್ಯಾನಗಮ್ಯನಾದ ಪರಮಶಿವನನ್ನು ಅನಂತವಾಗಿ ಧ್ಯಾನಿಸಿದನು. ಮತ್ತು ಅಮಿತವಾದ ಅಖಂಡಶಿವಾನಂದವನ್ನನುಭವಿಸಿದನು.

ಅನಂತರ, ಬಿಸಿಲ ಬೇಗೆಯನ್ನಾರಿಸಿಕೊಳ್ಳಲು, ಸುಂದರ ರಾಜಹಂಸ ಗಳಿಂದ ಕಂಗೊಳಿಸುತ್ತಿದ್ದ ಮತ್ತು ಸದ್ಯೋವಿಕಸಿತಕಮಲರಾಜಿಗಳಿಂದ ತುಂಬಿ, ನಿರಭ್ರದಾಗಸದಂತೆ ಪರಿಶುದ್ಧವಾದ ಸರೋವರದೆಡೆಗೆ ತನ್ನ ಹೃದಯೇಶ್ವರಿ ಮತ್ತು ಆಕೆಯ ಹಿತಪರಿವಾರದೊಡನೆ ಆಗಮಿಸಿ, ಅಲ್ಲಿ ಮನ ತಣಿಯುವಂತೆ ಜಲಕ್ರೀಡೆಯಾಡಿದನು. ಇದರಿಂದ ರಾಜಕುಮಾರನಿಗೆ ಸರ್ವಮಂಗಳೆಯೊಡನೆ ಮತ್ತೊಂದು ಮಂಗಳಸ್ನಾನವನ್ನೆಸಗಿದಂತಾಯ್ತು. ಅಭೂತಪೂರ್ವವಾದ ಜಲಕ್ರೀಡೆಯನ್ನು ಮುಗಿಸಿಕೊಂಡು ದಿವ್ಯಾಂಬರ ಗಳನ್ನುಟ್ಟು ತನ್ನರಮನೆಗೆ ಹಿಂತಿರುಗಿದನು.

ಸಂಜೆಯಾಗಿ ಆಗಸದಲ್ಲಿ ಸಂಜೆಗೆಂಪು ಚೆಲ್ಲಿ ನಿಂತಿತು. ಕ್ರಮವಾಗಿ ಲೋಕದಲ್ಲೆಲ್ಲ ಅಂಧಕಾರವಾವರಿಸಿತು. ಶುಭ್ರದಾಕಾಶದಲ್ಲಿ ತಾರೆಗಳು ಮೂಡಿ ಮಿನುಗುತ್ತಿದ್ದವು. ಪೂರ್ವದಿಗಂಗನೆಯ ಮುಖವನ್ನು ಪರಿಚುಂಬಿ ಸುತ್ತಾ ಪೂರ್ಣಚಂದ್ರನುದಯಿಸಿ ಅಂಧಕಾರವನ್ನು ತೊಡೆದು ಹಾಕಿದನು.

ಚಂದ್ರನು ಮೇಲೆ ಮೇಲೇರಿ ಬರುತ್ತಿದ್ದಂತೆ ಚಂದ್ರನ ಚಂದ್ರಿಕೆಯು ಎಲ್ಲೆಡೆ ಚೆಲ್ಲಿ ಪ್ರಕೃತಿಯನ್ನೇ ಬೆಳಗಿಸಿತು. ಇದರಿಂದ ಸರ್ವರ ಹೃದಯಾನಂದವೂ ಕೆರಳಿತು. ವಸಂತ ಕಾಲದ ಈ ಪೂರ್ಣಚಂದ್ರನ ಚಂದ್ರಿಕೆಯು ರಾಜಶೇಖರನನ್ನು ಚಂದ್ರಿಕಾವಿಹಾರಕ್ಕಾಗಿ ಆಹ್ವಾನಿಸಿತು. ಕೂಡಲೇ ಮಿಂದು ಮಡಿಯುಟ್ಟು ಶಿವಪೂಜೆಗೈದು ಪ್ರಸಾದವನ್ನೂ ಸ್ವೀಕರಿಸಿ, ತಾಂಬೂಲಚರ್ವಣ ಮಾಡಿ, ಸುವಾಸಿತ ಹೂಗಳಿಂದಲಂಕೃತನಾಗಿ ಮಿತ್ರವೃಂದಪರಿವಾರದೊಡನೆ ಮನೋಜ್ಞವಾಗಿ ಚಂದ್ರಿಕಾವಿಹಾರವನ್ನು ನಡೆಸಿ ಆನಂದಿತನಾಗಿ ಪ್ರಿಯೆಯನ್ನೂ ಆನಂದಗೊಳಿಸಿ ಅರಮನೆಗೆ ಮರಳಿದನು.

## ೬. ರಾಜಶೇಖರನ ಅಶ್ವವಿಹಾರ

ಒಂದುದಿನ ರಾಜಶೇಖರನು ಎಂದಿನಂತೆ ಬ್ರಾಹ್ಮೀಮುಹೂರ್ತದಲ್ಲಿ ಶಿವಸ್ಮರಣಪೂರ್ವಕವಾಗಿ ಶಯನದಿಂದೆದ್ದನು. ನಿತ್ಯಕರ್ಮಗಳನ್ನು ತೀರಿಸಿಕೊಂಡು ಮಿಂದು ಮಡಿಯುಟ್ಟನು. ಸಜ್ಜುಗೊಳಿಸಲ್ಪಟ್ಟಿದ್ದ ಶಿವಪೂಜಾಗೃಹದಲ್ಲಿ ಸುಖಾಸೀನನಾದನು. ವಿಧಿವತ್ತಾಗಿ ವಿಭೂತಿ-ರುದ್ರಾಕ್ಷಿಗಳನ್ನು ಧರಿಸಿ ಶ್ರೀಶಿವಪಂಚಾಕ್ಷರಿಯನ್ನು ಜಪಿಸಿ ಶಿವಾನಂದಿಯಾಗಿ ಶಿವಪೂಜೆಯಲ್ಲಿ ನಿರತನಾದನು. ಇಷ್ಟರಲ್ಲಿ ಪೂರ್ವದಿಗಂಗನೆಯ ಕಂಠಾಲಿಂಗನವನ್ನು ಮಾಡುತ್ತಾ ಸೂರ್ಯದೇವನುದಯಿಸಿದನು. ಇತ್ತ ರಾಜಶೇಖರನೂ ಸಹ ತನ್ನ ಇಷ್ಟದೈವಕ್ಕೆ ಶ್ರವಣ-ಕೀರ್ತನ-ಸ್ಮರಣ-ಪಾದಸೇವನ-ಅರ್ಚನ-ವಂದನ-ದಾಸ್ಯ (ತಾನು ಶಿವನ ಸೇವಕನೆಂದು ಭಾವಿಸುವುದು) ಸಖ್ಯ (ಶಿವನನ್ನು ಪ್ರೀತಿಸುವುದು) ಮತ್ತು ಆತ್ಮನಿವೇದನಗಳೆಂಬ ನವವಿಧಭಕ್ತಿಗಳಿಂದಲೂ ಸಿಂಹಾಸನ-ಪಾದ್ಯ-ಅರ್ಘ್ಯ-ಆಚಮನ-ಸ್ನಾನ-ವಸ್ತ್ರ-ಭಸ್ಮ-ಗಂಧ-ಅಕ್ಷತೆ-ಪತ್ರೆಪುಷ್ಪ-ಧೂಪ-ದೀಪ-ನೈವೇದ್ಯ-ಪುಷ್ಪಾಂಜಲಿ-ಪ್ರದಕ್ಷಿಣೆ-ನಮಸ್ಕಾರ ಹೀಗೆ ಷೋಡಶ (೧೬) ಉಪಚಾರಸಹಿತವಾದ ಪೂಜೆಯನ್ನರ್ಪಿಸಿದನು. ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗಸ್ವರೂಪಿಯಾದ ಪರಶಿವಮೂರ್ತಿಗೆ ತನ್ನ ತನು-ಮನ-ಭಾವಗಳನ್ನು ಸಮರ್ಪಿಸಿ, ಶಿವಜೀವೈಕ್ಯ ಜ್ಞಾನಾಮೃತವೆನಿಸಿದ ದಿವ್ಯ ಪಾದೋದಕವನ್ನೂ ಮತ್ತು ಶುದ್ಧ-ಸಿದ್ಧ-ಪ್ರಸಿದ್ಧಗಳೆನಿಸಿದ ಪ್ರಸಾದತ್ರಯಗಳನ್ನೂ ಪರಮಭಕ್ತಿಯಿಂದ ಸ್ವೀಕರಿಸಿ ಸ್ವಯಂ ಶಂಭುವಾಗಿ ಬೆಳಗಿದನು.

(೧. ಆಚಾರದಲ್ಲಿ ತೊಡಗಿರುವ ಸ್ಥೂಲದೇಹವು ತನ್ನಲ್ಲಿ ನೆಲೆಗೊಂಡ ಇಷ್ಟ ಲಿಂಗಕ್ಕೆ ಅರ್ಪಿತವಾಗಿ ಶುದ್ಧ ಪ್ರಸಾದವೆನಿಸುತ್ತದೆ. ಇಷ್ಟಲಿಂಗಕ್ಕೆ ಅರ್ಪಿತ ವಾಗುವುದೆಂದರೆ, ಗುರುವು ಉಪದೇಶಿಸಿರುವ ಆಚರಣೆಯಲ್ಲಿ ಈ ಶರೀರ ವನ್ನು ತೊಡಗಿಸುವುದು ಎಂದರ್ಥ. ಹೀಗೆ ಸ್ಥೂಲದೇಹವನ್ನು ಲಿಂಗೋ ಪಾಸನಾರೂಪವಾದ ಆಚಾರದಲ್ಲಿ ತೊಡಗಿಸಿದರೆ ಆಗ ಇಷ್ಟಲಿಂಗಕ್ಕೆ ಈ ದೇಹವು ಅರ್ಪಿತವಾಗಿ ಶುದ್ಧಪ್ರಸಾದವೆನಿಸುತ್ತದೆ. ಹಾಗೆಯೇ ಮನಸ್ಸನ್ನು ಸೂಕ್ಷ್ಮದೇಹದಲ್ಲಿರುವ ಪ್ರಾಣಲಿಂಗಕ್ಕೆ ಅರ್ಪಿಸಬೇಕು. ಅಂದರೆ ಮನಸ್ಸು ಸದಾಕಾಲವೂ ಶ್ರೀಶಿವಪಂಚಾಕ್ಷರೀ ಮಹಾಮಂತ್ರವನ್ನು ಚ್ಚರಿಸುತ್ತಿರಬೇಕು. ಹೀಗಾದಲ್ಲಿ ಮನಸ್ಸು ಪ್ರಾಣಲಿಂಗಕ್ಕೆ ಅರ್ಪಿತವಾಗಿ ಸಿದ್ಧಪ್ರಸಾದವೆನಿಸುತ್ತದೆ. ಅಂತೆಯೇ ಕಾರಣಶರೀರದಲ್ಲಿರುವ ಭಾವ ಲಿಂಗಕ್ಕೆ ಭಾವನೆಯನ್ನು ಸಮರ್ಪಿಸಬೇಕು. ಅಂದರೆ ಹೃದಯದಲ್ಲಿ ಉಪಾಸ್ಯಮೂರ್ತಿಯಾದ ಪರಮಾತ್ಮನ ರೂಪವನ್ನು ಸದಾಕಾಲವೂ ಭಾವಿಸಿಕೊಂಡಿರಬೇಕು. ಆಗ ಭಾವವು ಭಾವಲಿಂಗಕ್ಕೆ ಅರ್ಪಿತವಾಗಿ ಪ್ರಸಿದ್ಧ ಪ್ರಸಾದವೆನಿಸುತ್ತದೆ. ೨. ಅಲ್ಲದೆ ತನು-ಮನ-ಧನಗಳು ಕ್ರಮವಾಗಿ ಗುರು-ಲಿಂಗ-ಜಂಗಮಕ್ಕರ್ಪಿತವಾಗಬೇಕು. ಅಂದರೆ ಗುರುವು ಬೋಧಿಸಿದ ಆಚಾರದಲ್ಲಿ ಶರೀರವನ್ನು ಸವೆಯಿಸಬೇಕು. ಆಗ ಆಚಾರದಲ್ಲಿ ತೊಡಗಿಸ ಲ್ಪಟ್ಟ ಶರೀರವು ಶುದ್ಧಪ್ರಸಾದವೆನಿಸುತ್ತದೆ. ಮನಸ್ಸು ಸದಾಕಾಲವೂ ಶ್ರೀಶಿವಪಂಚಾಕ್ಷರಿಯನ್ನುಚ್ಚರಿಸುತ್ತಿದ್ದು ಲಿಂಗಕ್ಕೆ ಸಮರ್ಪಿತವಾದುದಾಗಿ ಸಿದ್ಧಪ್ರಸಾದವೆನಿಸುತ್ತದೆ. ಸತ್ಯಶುದ್ಧ ಕಾಯಕದಿಂದ ಸಂಪಾದಿಸಿದ ಧನವನ್ನು ಜಂಗಮಸೇವೆಗೆ ವಿನಿಯೋಗಿಸಿ ಜಂಗಮವನ್ನು ತೃಪ್ತಿಪಡಿಸುವುದ ರಿಂದ ಜಂಗಮಕ್ಕರ್ಪಿತವಾಗುವ ಧನವು ಪ್ರಸಿದ್ಧಪ್ರಸಾದವೆನಿಸುತ್ತದೆ. ೩. ಹಾಗೆಯೇ ಪ್ರತಿಯೊಂದು ಪದಾರ್ಥದಲ್ಲಿಯೂ ರೂಪ-ರುಚಿ ಮತ್ತು ತೃಪ್ತಿಗಳೆಂಬ ಮೂರು ಗುಣಗಳಿರುತ್ತವೆ. ಈ ಮೂರೂ ಗುಣಗಳನ್ನೂ ಕ್ರಮವಾಗಿ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗಗಳಿಗೆ ಸಮರ್ಪಿಸುವುದರಿಂದ ಈ ರೂಪ-ರುಚಿ-ತೃಪ್ತಿಗಳು ಕ್ರಮವಾಗಿ ಶುದ್ಧ-ಸಿದ್ಧ-ಪ್ರಸಿದ್ಧ ಪ್ರಸಾದವೆನಿ ಸುತ್ತವೆ. ಹೀಗೆ ವೀರಶೈವ ತತ್ತ್ವದಲ್ಲಿ ಪ್ರಸಾದದ ಪ್ರಕ್ರಿಯೆಯನ್ನು ಸಂಕ್ಷೇಪವಾಗಿ ತಿಳಿಯಬಹುದಾಗಿದೆ.)

ಅತ್ಯವೋಘವಾದ ಪೂಜಾದಿಗಳನ್ನು ಮುಗಿಸಿಕೊಂಡು ರಾಜ ಕುಮಾರನು ಮಕೂಲವಸ್ತ್ರಗಳನ್ನು ಧರಿಸಿಕೊಂಡನು. ಕವಚ-ಕಂಕಣ-ಕಿರೀಟ-ಕುಂಡಲ-ಹಾರ-ತಿಲಕಾದ್ಯಲಂಕಾರಗಳನ್ನು ಅಲಂಕರಿಸಿಕೊಂಡು ಉಜ್ವಲನಾದ ಸೂರ್ಯನಂತೆ ಬೆಳಗಿದನು. ಹೀಗೆ ಉಜ್ವಲ ವೇಷಧಾರಿಯಾಗಿ ಸಭಾಂಗಣದೆಡೆಗೆ ಹೊರಟನು. ವಂದಿ ಮಾಗಧರು ಹೊಗಳುತ್ತಿದ್ದರು, ಸ್ತುತಿಪಾಠಕರು ಸ್ತೋತ್ರಮಾಡುತ್ತಿದ್ದರು, ವೇದವಿದರು ವೇದಗಳನ್ನು ಘೋಷಿಸುತ್ತಿದ್ದರು, ಮಂತ್ರಿಗಳು ಮಾರ್ಗದರ್ಶನಮಾಡುತ್ತಿದ್ದರು, ಸಾಮಂತರು ಜಯಜಯಕಾರ ಮಾಡುತ್ತಿದ್ದರು, ಪ್ರಜೆಗಳು ಹರ್ಷೋದ್ಗಾರಗೈಯುತ್ತಿದ್ದರು ; ಇಂತಹ ಸಂದರ್ಭದಲ್ಲಿ ಹೆಚ್ಚು ಶೋಭಾಯಮಾನವಾಗಿದ್ದ ಸಭಾಂಗಣವನ್ನು ಪ್ರವೇಶಿಸಿ ಅದನ್ನು ಬೆಳಗಿಸಿದನು. ಪದ್ಧತಿಯಂತೆ ರತ್ನಖಚಿತವಾದ ಸಿಂಹಾಸನಕ್ಕೆ ಪ್ರದಕ್ಷಿಣೆಮಾಡಿ ಅಭಿವಂದಿಸಿ, ಸರ್ವಜನಹೃದಯಪೀಠವನ್ನು ಅಲಂಕರಿಸಿರುವ ರೀತಿಯಲ್ಲಿ ಆ ರತ್ನಸಿಂಹಾಸನವನ್ನಲಂಕರಿಸಿದನು. ಆಗ ಚಾಮರಾದಿಗಳ ವೈಭವವು ಇವನ ವೈಸಿರಿಯನ್ನು ಹೆಚ್ಚಿಸಿತು. ಸಭಾಸದರ ನೇತ್ರಕಮಲಪರಂಪರೆಗಳ ಮಧ್ಯದಲ್ಲಿ, ತೇಜೋಮಯನೂ ನೇತ್ರಾನಂದದಾಯಕನೂ ಆದ ಉದಯರವಿಯಂತೆ ಹೊಳೆದನು. ಸಾಮಂತ ಸಮೂಹವು ಶಿರಬಾಗಿ ನಮಿಸುತ್ತಾ ಕಾಣಿಕೆಯನ್ನರ್ಪಿಸುತ್ತಿತ್ತು. ವೇದವಿದರು ವೇದಘೋಷದೊಂದಿಗೆ ರಾಜಾಶೀರ್ವಾದ ಮಾಡುತ್ತಿದ್ದರು. ಸ್ತುತಿಪಾಠಕರು ಸ್ತುತಿಗೈಯ್ಯುತ್ತಿದ್ದರು. ಗುರುಜನರು ಫಲಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸುತ್ತಿದ್ದರು. ಸಭಾಸದರೆಲ್ಲರ ಹೃನ್ಮನಗಳನ್ನೂ ಮತ್ತು ದೃಷ್ಟಿಗಳನ್ನೂ ತನ್ನೆಡೆಗೆ ಸೆಳೆದುಕೊಂಡು ಅಖಂಡ ಪರಿಪೂರ್ಣ ಪರಂಜ್ಯೋತಿಯಾಗಿ ಬೆಳಗಿದನು.

ಈತನ ಸನಿಹದಲ್ಲಿಯೇ ಮಂತ್ರಿಕುಮಾರ ಮಿತವಚನನು ಶಿರಬಾಗಿ ನಿಂದು ನಮಿಸಿ ತನ್ನ ಆಸನದಲ್ಲಿ ಮಂಡಿಸಿದನು. ಎಲ್ಲರೂ ಉಚಿತಾಸನಗಳನ್ನಲಂಕರಿಸಿದರು. ಅಮರೇಂದ್ರನ ದಿವ್ಯಸಭೆಯನ್ನು ನಾಚಿಸುತ್ತಿದ್ದ ಈ ಸಭಾಮಧ್ಯದಲ್ಲಿ ವೀಣಾಮೃದಂಗಾದಿ ಮಧುರವಾದ್ಯನಿನಾದಗಳು ಮೊಳಗುತ್ತಿದ್ದವು. ಈ ಸಂದರ್ಭದಲ್ಲಿ ಅಭಿನವರಂಭೆಯೆಂಬ ಸಾರ್ಥಕವಾದ ಬಿರುದನ್ನು ಪಡೆದ ನರ್ತಕಿಯೋರ್ವಳು ನಾನಾವಿಧದ ನಾಟ್ಯಭಂಗಿಗಳನ್ನು

ಪ್ರದರ್ಶಿಸುತ್ತಾ, ರಾಗ–ತಾಳ–ಲಯಾದಿಗಳಿಗನುಗುಣವಾಗಿ ನವರಸಗಳನ್ನೂ ಅಭಿವ್ಯಕ್ತಪಡಿಸುತ್ತಾ, ಎಲ್ಲರ ಹೃದಯಗಳನ್ನೂ ನರ್ತನಮಾಡಿಸುತ್ತಾ ಅಮೋಘವಾಗಿ ನರ್ತನಮಾಡಿದಳು. ಸಕಲ ಕಲಾಪ್ರವೀಣನಾದ ರಾಜ ಶೇಖರನಿಗೆ ಮೆಚ್ಚುಗೆಯಾಗುವಂತೆ ಕಲೆಗಳನ್ನು ಪ್ರದರ್ಶಿಸುವುದೆಂದರೆ ಅದು ಅತ್ಯಂತ ಸಾಹಸದ ಮಾತು. ಆನಂದತುಂದಿಲನಾದ ರಾಜಶೇಖರನು ಆ ಎಲ್ಲಾ ಕಲಾಪ್ರವೀಣೆಯರನ್ನೂ ಯೋಗ್ಯರೀತಿಯಲ್ಲಿ ಸನ್ಮಾನಿಸಿದನು. ಸನ್ಮಾನ ಪಡೆದ ಅವರೆಲ್ಲರೂ ಕುಮಾರನಿಗೆ ನಮಿಸಿ ಸಭೆಯಿಂದ ನಿರ್ಗಮಿಸಿದರು.

ಇಷ್ಟರಲ್ಲಿ ದೀರ್ಘಕಾಯನಾದ ಸಿಂಧುರಾಜನು ಕ್ಷೀರಸಾಗರದಂತೆ ಗಂಭೀರನಾಗಿ ಸಭೆಗೆ ಆಗಮಿಸಿದನು. ಭಯಭಕ್ತಿಗಳಿಂದ ರಾಜಕುಮಾರನಿ ಗಭಿವಂದಿಸಿ ಪುಷ್ಪಭರಿತವಾದ ರತ್ನಾಂಜಲಿಯನ್ನೂ ಅಮೂಲ್ಯವಾದ ರತ್ನಹಾರಗಳನ್ನೂ ಅರ್ಪಿಸಿದನು. ಅನಂತರ, ಸಕಲ ಸುಲಕ್ಷಣಗಳಿಂದ ವಿಜೃಂಭಿಸುತ್ತಿದ್ದ ಎರಡು ಸುಂದರ ಅಶ್ವಗಳನ್ನು ಸಮರ್ಪಿಸಿ ತನ್ನ ಕೃತಾರ್ಥ ತೆಗೆ ಸಂತೋಷಗೊಂಡು ಕುಮಾರನಿಂದ ಬೀಳ್ಕೊಂಡು ಹೊರಟುಹೋದನು. ಮನೋವೇಗವನ್ನೂ ಮೀರಿದ ವೇಗಶೀಲಗಳಾದ ಆ ಅಶ್ವಗಳನ್ನು ನೋಡಿದ ರಾಜಶೇಖರನು, ಅಶ್ವಪರೀಕ್ಷಕರಿಂದ ಅವುಗಳ ಜಾತಿ–ಅಂಗ–ಪ್ರತ್ಯಂಗಗಳ ಲಕ್ಷಣ–ಮನಸ್ಸು–ಗಮನ ಮುಂತಾದವುಗಳನ್ನು ಪರೀಕ್ಷಿಸಿದನು. 'ದೇವ! ಈ ಅಶ್ವಗಳು ಸಮುದ್ರದಲ್ಲುತ್ಪನ್ನವಾದ ದೇವಾಶ್ವವನ್ನೂ ಮೀರಿಸಿವೆ. ಇವು ಎಲ್ಲ ರೀತಿಯಿಂದಲೂ ಉತ್ತಮೋತ್ತಮವಾದ ಅಶ್ವಗಳಾಗಿವೆ' ಎಂಬ ಅಶ್ವಪರೀಕ್ಷಕರ ಮಾತನ್ನೂ, ಮಿತವಚನನ ಅಂಗೀಕಾರವನ್ನೂ ರಾಜ ಶೇಖರನು ಸಂತೋಷದಿಂದ ಗ್ರಹಿಸಿದನು. ಈ ವೇಳೆಗೆ ಮಧ್ಯಾಹ್ನ ಸೂಚಕ ವಾದ ಭೇರಿಯು ಧ್ವನಿಗೈಯಲು ಸಭೆಯನ್ನು ನಿಲ್ಲಿಸಿ, ಮಿಂದು ಮಡಿಯುಟ್ಟು ಪೂಜಾಗೃಹಕ್ಕೆ ತೆರಳಿ ಶಿವಪೂಜೆಯಲ್ಲಿ ಮಗ್ನನಾದನು. ಹೃದಯಾಕಾಶದಲ್ಲಿ ಶ್ರೀ ಪರಶಿವಮೂರ್ತಿಯನ್ನು ನೆಲೆಗೊಳಿಸಿ, ಆತ್ಮಾರ್ಪಣೆಯನ್ನು ಗೈದು, ಶಿವಾನಂದಭೋಗಾನಂದಿಯಾಗಿ ಪರಂಬ್ರಹ್ಮ–ಪರಂಜ್ಯೋತಿಸ್ವರೂಪನಾಗಿ ಪ್ರಕಾಶಿಸಿದನು, ಶ್ರೀಮಹಾಮಂತ್ರವೇ ನೈವೇದ್ಯವೆತ್ತುಬಂದಂತೆ ಕಂಗೊಳಿಸಿದನು.

ಪೂಜಾನಂತರ ಮಿತವಚನನೊಂದಿಗೆ ಶಿವಪ್ರಸಾದವನ್ನು ಸೇವಿಸಿ,

ತಾಂಬೂಲಚರ್ವಣಮಾಡಿ, ಮುತ್ತಿನ ಕರುಮಾಡದ ಮುಂದಿನ ಮೊಗಸಾಲೆ ಯಲ್ಲಿ ವಿಲಾಸದಿಂದ ಆಸನಾರೂಢನಾದನು. ಎದುರಾಗಿ ಕಟ್ಟಿದ್ದ ನವ್ಯ ವಾಜಿಗಳನ್ನು ನೋಡಿ, ಅವುಗಳನ್ನು ಏರಿ ವಿಹರಿಸಬೇಕೆಂಬ ಆಸೆಯುಂಟಾಗಿ ಮಿತವಚನನನ್ನು ಕುರಿತು, 'ಮಿತ್ರ! ಈ ಮನೋಹರ ಅಶ್ವಗಳನ್ನೇರಿ ನಾವೀರ್ವರೂ ಸೈನ್ಯಸಮೇತರಾಗಿ ಈ ನಗರಿಯಲ್ಲಿ ಸಂಚರಿಸೋಣ' ಎಂದನು. ಕಾರ್ಯಾಕಾರ್ಯವಿಚಾರಜ್ಞನಾದ ಮಂತ್ರಿಕುಮಾರನು, ಮನದಲ್ಲಿ ಇದು ಬಹಳ ಅನುಚಿತವೆಂದು ಬಗೆದು ರಾಜಶೇಖರನನ್ನು ಕುರಿತು, 'ಭೂಪಾಲ! ನೀನು ಸರಸಗುಣಹಾರನೂ, ವಿನಯಾಭರಣನೂ, ವಿವೇಕ ನಿಧಿಯೂ, ಸಕಲಕಲಾನಿಲಯನೂ, ದಯಾಸಾಗರನೂ, ಸತ್ಯಶೀಲನೂ, ಯಶೋವಂತ ಮತ್ತು ಮಹಾಶಿವಭಕ್ತನೂ ಆಗಿರುವೆ. ನಾನಾದರೋ ನಿನ್ನ ಅನುಚರನಾಗಿರುವೆ. ಅಂದಮಾತ್ರಕ್ಕೇ ಭೃತ್ಯನಾದ ನನ್ನ ಮಾತನ್ನು ನೀನು ಕಡೆಗಣಿಸಬೇಡ. ನೋಡು, ಈ ನಗರಿಯು ಶಿವಭಕ್ತರ ನೆಲೆವೀಡಾ ಗಿದೆ. ಅಲ್ಲದೆ ಈ ಅಭಿನವ ಅಶ್ವಗಳು ಪಳಗಿರುವುದಿಲ್ಲ. ಹೀಗಿರುವ ಈ ಅಶ್ವಗಳನ್ನೇರಿ ಸೈನ್ಯಸಹಿತ ಪಟ್ಟಣದಲ್ಲಿ ವಿಹರಿಸಬೇಕೆಂಬುದು ಯುಕ್ತ ವಾಗಿ ಕಾಣುತ್ತಿಲ್ಲ. ಏಕೆಂದರೆ, ನಮ್ಮ ದೆಸೆಯಿಂದ ಈ ನಗರದ ಭಕ್ತಜನ ರಲ್ಲಿ ಯಾರೊಬ್ಬರಿಗಾದರೂ ಏನಾದರೂ ಅನರ್ಥವಾದಲ್ಲಿ ದಯಾಪರನೂ ಶಿವಭಕ್ತಕಿಂಕರನೂ ಆದ ನಿಮ್ಮ ತಂದೆಯು ಸ್ವಲ್ಪವೂ ಸೈರಿಸನು. ತಪ್ಪು ಮಾಡಿದವರು ಯಾರೇ ಆಗಿದ್ದರೂ ಅವರನ್ನು ನಿಮ್ಮ ತಂದೆಯು ಶಿಕ್ಷಿಸದೆ ಬಿಡುವುದಿಲ್ಲ. ನಿಮ್ಮ ವಂಶಜನೇ ಆದ ಧರ್ಮೇಂದ್ರಚೋಳನ ಮಗನು ಒಂದುಸಾರಿ ರಥಾರೂಢನಾಗಿ ರಾಜಬೀದಿಯಲ್ಲಿ ಬರುತ್ತಿರುವಾಗ ಆ ರಥದ ಚಕ್ರಕ್ಕೆ ಒಂದು ಎಳೆಗರುವು ಸಿಕ್ಕಿ ಮಡಿಯಿತು. ಈ ವಿಷಯವನ್ನು ತಿಳಿದ ಧರ್ಮೇಂದ್ರಚೋಳನು ಕಡುಕೋಪಗೊಂಡು, ಕೂಡಲೇ ಅದೇ ರಥವನ್ನೇರಿ ಆ ತನ್ನ ಮಗನನ್ನು ಅದೇ ರೀತಿ ಆ ರಥದ ಕೆಳಕ್ಕೆ ಕೆಡಹಿ, ಅವನ ಮೇಲೆ ರಥವನ್ನು ಹರಿಯಿಸಿ ಕೊಂದನು. ಅಪರಾಧಿಗಳು ತಮ್ಮ ಸುತರೇ ಆಗಿರಲಿ, ಸಹೋದರರೇ ಆಗಿರಲಿ ಅಥವಾ ಬಂಧುಬಾಂಧವರೇ ಆಗಿರಲಿ, ಧರ್ಮ ನಿಷ್ಠರು ಅದನ್ನು ಪರಿಗಣಿಸುವುದಿಲ್ಲ. ಅಮಿತಪರಾಕ್ರಮಿಯೂ, ಅನೇಕ ರಥ-ಗಜಾಶ್ವಾದಿಗಳ ಆರೋಹಣವನ್ನು ಬಲ್ಲವನೂ ಆದ ನನಗೆ ಈ ವಿಧದ ಭೀತಿ

ಯನ್ನು ಹುಟ್ಟಿಸುವೆಯಾ? ಎನ್ನುವ ಅಭಿಪ್ರಾಯವು ನಿನ್ನ ಮನಸಲ್ಲಿರಬಹುದು. ಆದರೂ ಕೇಳು ಸಂದೇಹವನ್ನುಳ್ಳ ಕಾರ್ಯವನ್ನು ವಿಚಾರ ಮಾಡದೇ ಮಾಡಬಾರದು. ಐಶ್ವರ್ಯವನ್ನು ಹೊಂದಿ ಪರೋಪಕಾರ ಮಾಡಬೇಕು, ವಿದ್ಯೆಯನ್ನಾರ್ಜಿಸಿ ಮತ್ಸರವನ್ನು ದೂರವಿರಿಸಬೇಕು, ಪ್ರಭುತ್ವವನ್ನು ಪಡೆದು ನೀತಿವಂತನಾಗಬೇಕು ಮತ್ತು ಪರಾಕ್ರಮಿಯಾಗಿ ವಿನಯಶೀಲನಾಗಿರಬೇಕು. ಇದು ನೀತಿಯ ಮಾರ್ಗ. ಹೀಗಿರುವಲ್ಲಿ ಪ್ರಭುವಾದ ನೀನು ಅನೀತಿಗೆ ಕೈಹಾಕಬೇಡ. ಜ್ಞಾನಿಗಳಾದವರು, ಕೊನೆಗೊಳ್ಳದ, ಫಲಶೂನ್ಯವಾದ, ನಿಂದ್ಯವಾದ, ಪರರಿಗೆ ದುಃಖದಾಯಕವಾದ ಮತ್ತು ಮೋಕ್ಷಕ್ಕಡಚಣೆಯನ್ನುಂಟುಮಾಡುವ ಯಾವ ಕಾರ್ಯವನ್ನೂ ಮಾಡುವುದಿಲ್ಲ. ತನಗೆ ಇಷ್ಟವಾದುದು ಪರರಿಗೆ ಅನಿಷ್ಟವಾಗಬಹುದು, ಹಾಗೆಯೇ ಪರರಿಗಿಷ್ಟವಾದುದು ತನಗನಿಷ್ಟವಾಗಬಹುದು. ಆದರೆ ಪ್ರಜೆಗಳ ಹಿತಚಿಂತನೆಯಲ್ಲಿರುವ ನೀನು ಯುಕ್ತಾಯುಕ್ತಗಳನ್ನು ವಿಚಾರಿಸದೆ ಕಾರ್ಯ ಮಾಡಬಾರದು. ಆಪ್ತರ ಹಿತೋಕ್ತಿಯಂತೆ ನಡೆಯತಕ್ಕವನಿಗೆ ಅಪರಿಮಿತವಾದ ಶ್ರೇಯಸ್ಸು ಸಂಭವಿಸುತ್ತದೆ. ಅಂಧಕಾರವು ಹೇಗೆ ಸೂರ್ಯನನ್ನಾವರಿಸಲಾರದೋ ಹಾಗೆಯೇ ಆಸೆ ಮೊದಲಾದ ಶಾರೀರಕ ವ್ಯಾಮೋಹ ಗುಣಗಳು ನಿನ್ನನ್ನಾವರಿಸಲಾರವು. ಆದ್ದರಿಂದ ಮುಂದೊದಗುವ ಇಷ್ಟಾನಿಷ್ಟಗಳನ್ನು ಚೆನ್ನಾಗಿ ವಿಚಾರಮಾಡಿ, ನೀತಿವಿದರಿಗೂ ಜ್ಞಾನಿಗಳಿಗೂ ಸಮ್ಮತವಲ್ಲದ ಕಾರ್ಯದಲ್ಲಿ ತೊಡಗದಿರು. ವಿವೇಕಿಯೂ ನೀತಿಶಾಸ್ತ್ರಜ್ಞನೂ ಆದ ನಿನಗೆ ನಾನು ಹೇಳಬೇಕಾದ ಅಗತ್ಯವೇನೂ ಇಲ್ಲ' ಎಂದು ನೀತಿಯುಕ್ತವಾದ ಹಿತನುಡಿಗಳಿಂದಲೇ ತಡೆದನು.

ಅವನ ಹಿತೋಕ್ತಿಗೆ ಹುಸಿನಕ್ಕ ರಾಜೇಂದ್ರತನಯನು, 'ಮಿತ್ರ! ಮೇಘಗರ್ಜನೆಗೆ ಹೆದರಿ ಹಂಸವು ತನ್ನ ಕೇಳಿಯನ್ನು ಬಿಡದು, ಸಂಪಗೆಯ ಅಸಾಧ್ಯಕಂಪನ್ನು ತಡೆಯಲಾರೆನೆಂದು ಭ್ರಮರವು ವನದ ವಿಹಾರವನ್ನೇ ನಿಲ್ಲಿಸದು, ಮುಳ್ಳುಗಳಿಗೆ ಹೆದರಿ ಮದಗಜವು ವನಸಂಚಾರವನ್ನು ತ್ಯಜಿಸದು. ಹಾಗೆಯೇ ಅನಿಷ್ಟವನ್ನು ಊಹಿಸಿ ಅದಕ್ಕೆ, ಭಯಪಟ್ಟು ಆನಂದದಾಯಕವಾದ ಈ ಅಶ್ವವಿಹಾರವನ್ನು ನಿಲ್ಲಿಸತಕ್ಕ ಹೇಡಿ ನಾನಲ್ಲ. ಈ ರೀತಿ ನಿಂದ್ಯನಾಗುವುದು ರಾಜಧರ್ಮಕ್ಕೆ ವಿರೋಧವಷ್ಟೆ!' ಎಂದು

ತನ್ನ ಅಚಲ ನಿರ್ಧಾರವನ್ನು ವ್ಯಕ್ತಪಡಿಸಿದನು. ಆಗ ಮಿತವಚನನು, ‘ಭೂಮೀಂದ್ರಲಲಾಮ! ಧರ್ಮರಾಜನು ಅಶರೀರವಾಣಿಯ ಮಾತಿನಂತೆ ನೀರನ್ನು ಕುಡಿಯದೆ ತನ್ನ ತಮ್ಮಂದಿರನ್ನು ಪಡೆದನಷ್ಟೆ. ಅಂತೆಯೇ ನೀತಿ ಪೂರ್ಣವಾದ ನನ್ನ ಮಾತನ್ನು ಕೇಳುವುದರಿಂದ ನಿನ್ನ ಅಭಿಮಾನಕ್ಕೆ ಹಾನಿ ಬಾರದು, ಆದರೆ ಗೌರವವೇ ದೊರೆಯುತ್ತದೆ. ಅಭಿಮಾನಕ್ಕೆ, ನೀತಿಗೆ, ಶಿವಭಕ್ತಿಗೆ ಹಾಗೂ ಧರ್ಮಕ್ಕೆ ಕುಂದುಬರುವ ಸಂದರ್ಭದಲ್ಲಿ ನಾವು ಹೆದರಲೇಬೇಕು. ದರ್ಪಣದಲ್ಲಿ ನಿನ್ನ ಸ್ವರೂಪವನ್ನರಿಯುವಂತೆ ನನ್ನ ಮಾತಿನಲ್ಲಿ ನೀತಿಕುಶಲತೆಯನ್ನು ಮನಗಾಣು’ ಎಂದು ಮತ್ತೆ ಬೋಧಿಸಿದನು. ಈ ಯಾವ ಹಿತನುಡಿಯೂ ಅವನ ನಿರ್ಧಾರವನ್ನು ಕದಲಿಸಲು ಸಮರ್ಥವಾಗಲಿಲ್ಲ. ನಸುನಕ್ಕ ರಾಜೇಂದ್ರನಂದನನು, ‘ಮಿತ್ರವರ್ಯ! ಮನಸ್ಸಿನಲ್ಲುಂಟಾದ ಬಯಕೆಯನ್ನು ಈಡೇರಿಸಿಕೊಳ್ಳುವಂತೆ ಬೋಧಿಸಿ ಪ್ರೇರಿಸಬೇಕೇ ಹೊರತು ಹೀಗೆ ಬೇಡವೆಂದು ತಡೆಯುವುದು ಸನ್ಮಿತ್ರನ ಲಕ್ಷಣವಲ್ಲ. ಅಲ್ಲದೆ ಪರಮೇಶ್ವರನ ಅಪ್ಪಣೆಯನ್ನು ಮೀರಿ ವರ್ತಿಸಲು ಹರಿಬ್ರಹ್ಮಾದಿಗಳಿಗೂ ಸಾಧ್ಯವಿಲ್ಲ. ಆಪತ್ತು ಬರುವ ಸಂದರ್ಭದಲ್ಲಿ ಅದು ಮನುಷ್ಯನ ಪ್ರಯತ್ನವನ್ನು ಬಯಸದೆ ಆತನಿರುವಲ್ಲಿಗೆ ತಾನೇ ಬರುತ್ತದೆ. ಹಳಗದ ಈ ಅಶ್ವಗಳಿಂದ ನಮಗೆ ಅನಿಷ್ಟವಾಗಬಹುದೇನೋ ನಿಜ, ಇದರಿಂದ ತಂದೆಯಾದ ಚೋಳೇಂದ್ರಭೂಪಾಲನು ಕೋಪಗೊಳ್ಳುವುದೂ ಸತ್ಯವಾಗಬಹುದು. ಅಂದಮಾತ್ರಕ್ಕೇ ಶಿವಭಕ್ತನಾದ ನಾನು ಹೆದರುವುದಿಲ್ಲ. ಸಂಭವಿಸಬಹುದಾದ ವಿಪತ್ಪರಂಪರೆಯನ್ನು ಶ್ರೀ ಶಿವಮಂತ್ರಪ್ರಭಾವದಿಂದಲೇ ನಾಶಮಾಡಿ ತನ್ಮುಖಾಂತರ ಮೋಕ್ಷವನ್ನು ಸಾಧಿಸುತ್ತೇನೆ. ಈ ವಿಹಾರಸಂದರ್ಭದಲ್ಲಿ ಒಂದುವೇಳೆ ನಿನ್ನಿಂದಲೇನಾದರೂ ಅಪರಾಧವು ಜರುಗಿದಪಕ್ಷದಲ್ಲಿ ಆ ಅಪರಾಧವು ನಿನ್ನದಾಗಿರದೆ ನನ್ನದಾಗಿರಲಿ ಮತ್ತು ಅದರ ಶಿಕ್ಷೆ ನಿನಗಲ್ಲ ಆದರೆ ನನಗೆ. ಶಿವನಾಣತಿಯಂತಾಗಲಿ, ಈ ಅಶ್ವಗಳನ್ನು ಆರೋಹಿಸಿ ವಿಹಾರವನ್ನು ನಡೆಸಲೇಬೇಕು. ನಮ್ಮ ಈ ವಿಹಾರದಿಂದ ನಗರದ ಜನತೆಗೆ ಸಂತೋಷವಾದಲ್ಲಿ ಅದು ನಮಗಾನಂದವೇ ಅಲ್ಲವೇ?’ ಎಂದು ವಿಹಾರಕ್ಕೆ ಒಪ್ಪಲು ಬಲಾತ್ಕರಿಸಿದನು. ಮಂತ್ರಿಕುಮಾರನು, ‘ಶಿವನು ತನ್ನ ಮಹತ್ತ್ವವನ್ನು ಭೂಲೋಕದಲ್ಲಿ ವ್ಯಕ್ತಪಡಿಸುವ ನಿಮಿತ್ತ

ವಾಗಿಯೇ ಈತನಲ್ಲಿ ಹೀಗೆ ಪ್ರೇರೇಪಣೆಯನ್ನುಂಟುಮಾಡುತ್ತಿದ್ದಾನೆ’ ಎಂದು ಬಗೆದು ಒಪ್ಪಿಗೆಯಿತ್ತನು.

ಇಷ್ಟರಲ್ಲಿಯೇ ಸಂಧ್ಯಾಕಾಲವೂ ಪ್ರಾಪ್ತವಾಯ್ತು. ಆ ರಾತ್ರಿ ಅಪಾರವಾದ ಶ್ರದ್ಧಾಭಕ್ತಿಗಳಿಂದ ಶಿವನನ್ನು ನಾನಾವಿಧವಾಗಿ ಪೂಜಿಸಿ, ಭಜಿಸಿ, ಶಿವನ ಚಿಂತನೆಯಲ್ಲಿಯೇ ಮೈಮರೆತು ಮಲಗಿದನು. ಉದಯಕ್ಕೆ ಮುನ್ನ ಉದಯರಾಗವನ್ನು ಕೇಳಿ ಎಚ್ಚೆತ್ತನು. ಸುಗಂಧ ಜಲದಲ್ಲಿ ಮಿಂದು ಶುಭ್ರವಸ್ತ್ರಧಾರಿಯಾಗಿ, ಸ್ಫಟಿಕದ ಹಾವುಗೆಗಳನ್ನು ಮೆಟ್ಟಿ ಚಂದ್ರಕಾಂತ ಶಿಲಾಮಯವಾದ ಪೂಜಾಗೃಹವನ್ನು ಸೇರಿ ಆನಂದಸಾಗರವು ಮೇರೆ ಮೀರಿ ಹರಿಯುವಂತೆ ಹೃದಯಾನಂದವು ತುಂಬಿತುಳುಕುತ್ತಿರಲು ಶ್ರೀ ಪರಶಿವ ಮೂರ್ತಿಯನ್ನು ತದೇಕಚಿತ್ತನಾಗಿ ಪೂಜಿಸಿ ಆನಂದಿಸಿದನು. ಪರಿಶುದ್ಧವಾದ ಹೃದಯ ಕಮಲಮಧ್ಯದಲ್ಲಿ ದಿವ್ಯತೇಜೋಮಯವಾದ ಶಿವತತ್ತ್ವವು ತೊಳಗಿ ಬೆಳಗುತ್ತಿತ್ತು. ಎಂದಿಗಿಂತಲೂ ಅಮೋಘವೂ ಅದ್ವಿತೀಯವೂ ಆಗಿದ್ದುದು ಇಂದಿನ ಈ ಶಿವಪೂಜೆ. ಹೀಗೆ ಪೂಜೆಯನ್ನು ಮುಗಿಸಿ, ಪಾದೋದಕ ಪ್ರಸಾದಗಳನ್ನು ಸ್ವೀಕರಿಸಿದನು. ವೀರಮಾಹೇಶ್ವರರನ್ನು ವೈಭವದ ಪೂಜಾದಿಗಳಿಂದ ಸಂತೃಪ್ತಿಪಡಿಸಿ ತನ್ನ ಮನಕ್ಕೊಪ್ಪಿಗೆಯಾದ ಉಡುಪನ್ನು ಧರಿಸಿದನು. ಇದೇ ವೇಳೆಗೆ ಮಂತ್ರಿಕುಮಾರ ಮಿತವಚನನೂ ಸಹ ಸಿದ್ಧನಾಗಿ ಅಲ್ಲಿಗೆ ಬಂದನು. ಕುಮಾರನ ಆಣತಿಯಂತೆ ಅಶ್ವಗಳನ್ನು ಅಲ್ಲಿಗೆ ಕರೆತರಲಾಯ್ತು. ಕೂಡಲೇ ಅಶ್ವವೈಹಾಳಿಯ ಸೂಚಕವಾದ ಭೇರಿ ವಾದ್ಯಗಳು ಮೊಳಗಿದವು. ಈ ಮೊಳಗನ್ನು ಕೇಳಿ, ಈ ಮೊದಲೇ ಸೂಚನೆ ಯಂತೆ ಸಜ್ಜುಗೊಂಡಿದ್ದ ರಥ-ಅಶ್ವ-ಗಜ-ಪದಾತಿ ಮೊದಲಾದ ಚತುರಂಗ ಸೇನೆಯೂ ವಿಹಾರಕ್ಕೆ ಸಿದ್ಧವಾಗಿ ಹೊರಬಂದು ನಿಂತಿತು. ಮಂಗಳವಾದ್ಯ ಗಳು ಭೋರ್ಗರೆಯುತ್ತಿರಲು, ವಂದಿಮಾಗಧರು ಹೊಗಳುತ್ತಿರಲು ಅತ್ಯಂತ ಪ್ರೀತಿಯಿಂದ ರಾಜಶೇಖರನು ಪವನಗಮನವೆಂಬ ಅಶ್ವವನ್ನು ಆರೋಹಿ ಸಿದನು. ಇವನನ್ನನುಸರಿಸಿ ಮಿತವಚನನೂ ಸಹ ಹರಿಣಗತಿಯೆಂಬ ಮತ್ತೊಂದು ಅಶ್ವವನ್ನು ಆರೋಹಿಸಿದನು. ಹೀಗೆ ಆರೋಹಣಮಾಡಿ ಮುಂದೆ ಹೊರಟರು. ಇವರನ್ನನುಸರಿಸಿ ಚತುರಂಗ ಸೇನೆಯೂ ಚಲಿಸಿತು. ಥುಗಥುಗಿಸುತ್ತಿರುವ ವೇಷಭೂಷಣಗಳನ್ನುಳ್ಳ ಅಸಂಖ್ಯಾತ ರಾಜಪುತ್ರರು

ರಾಜಕುಮಾರನನ್ನು ಸುತ್ತುಗಟ್ಟಿ ಮುಂದೆ ಮುಂದೆ ಸಾಗುತ್ತಿದ್ದರು. ರಾಜಬೀದಿಗಳಲ್ಲಿ ಸುಂದರಿಯರು ಸೇಸೆಯನ್ನಿಟ್ಟರು. ಬೀದಿಗಳ ಇಕ್ಕೆಲಗಳಲ್ಲಿ ತುಂಬಿನಿಂತಿದ್ದ ಜನಸ್ತೋಮವು ಹರ್ಷಧ್ವನಿಗೈದಿತು.

ಪಳಗಿದ ಕುದುರೆಗಳಲ್ಲದೇ ಇದ್ದರೂ, ಶಾಸ್ತ್ರವಿಚಕ್ಷಣರೂ-ಶಿವಭಕ್ತಿಪರಾಯಣರೂ ಆದ ಕುಮಾರಕರ ಕೈಚಳಕಗಳಿಂದಾಗಿ ಪಳಗಿದವುಗಳಂತೆಯೇ ತಮ್ಮ ಧಾರ್ಷ್ಟ್ಯವನ್ನು ಬಿಟ್ಟು ಈ ಅಶ್ವಗಳು ಇವರ ಸಂಜ್ಞೆಯನ್ನರಿತು ಚಲಿಸುತ್ತಿದ್ದವು. ಚಂಡಿನಂತೆ ಪುಟನೆಗೆದು, ಮಿಂಚಿನಂತೆ ಆಕಾಶದಲ್ಲಿ ಹೊಳೆದು, ಮೀನಿನಂತೆ ಚಿಮ್ಮುತ್ತಾ ಜಿಂಕೆಯಂತೆ ಚಂಗನೆ ಹಾರುತ್ತಾ, ಗರುಡನಂತೆ ವೇಗವಾಗಿ ಚಲಿಸುತ್ತಾ ಈ ಈರ್ವರ ಅಶ್ವಗಳೂ ನೋಡುಗರ ನೇತ್ರಗಳಿಗೆ ಹಬ್ಬವನ್ನುಂಟುಮಾಡಿದವು. ಹೀಗೆ ವಿವಿಧ ವಿಲಾಸಗಳಿಂದ ರಾಜಬೀದಿಗಳನ್ನು ದಾಟಿ ಪಟ್ಟಣದ ಹೊರಬಯಲನ್ನು ಸೇರಿ ಸಕಲ ಸೇನೆಯೂ ಇಬ್ಭಾಗವಾಗಿ ಎದುರುಬದುರಾಗಿ ನಿಂತಿತು.

ಎಲ್ಲ ಸೈನಿಕರೂ ಪರಸ್ಪರವಾಗಿ ಸಂಘಟ್ಟಿಸುತ್ತಾ ಶತ್ರುಗಳನ್ನು ಹಿಮ್ಮೆಟ್ಟಿಸುವಲ್ಲಿ ಪ್ರಯೋಗಿಸಬಹುದಾದ ಎಲ್ಲ ರೀತಿಯ ಕೌಶಲಗಳನ್ನೂ ವ್ಯಕ್ತಪಡಿಸುತ್ತಲಿದ್ದರು. ಗಜಸೇನೆಯು ಗಜಸೇನೆಯಮೇಲೆ, ರಥಸೇನೆಯು ರಥಸೇನೆಯ ಮೇಲೆ, ತುರುಗಸೇನೆಯು ತುರುಗಸೇನೆಯ ಮೇಲೆ ಹಾಗೆಯೇ ಕಾಲ್ಬಲವು ಕಾಲ್ಬಲದ ಮೇಲೆ ತಮ್ಮ ಶಕ್ತಿಪ್ರದರ್ಶನಮಾಡುತ್ತಾ ರಾಜಶೇಖರನ ಆನಂದವನ್ನು ಇಮ್ಮಡಿಮಾಡಿತು. ಪಾದಾಘಾತದಿಂದೆದ್ದ ಧೂಳಿಯು ಆಗಸವನ್ನೆಲ್ಲ ವ್ಯಾಪಿಸಿ ಸೂರ್ಯನನ್ನೇ ಮರೆಮಾಡಿತು. ತನ್ನ ಸೈನ್ಯವು ಅಮಿತವಾದ ಈ ವಿಹಾರದಿಂದಾಗಿ ಹೆಚ್ಚು ಹೆಚ್ಚಾಗಿ ಆನಂದಿಸಿದ್ದನ್ನು ಕಂಡ ರಾಜಕುಮಾರನು ಅಪರಿಮಿತವಾಗಿ ಸಂತೋಷಗೊಂಡನು. ಸಂಧ್ಯಾಕಾಲವು ಸಮೀಪಿಸುತ್ತಿದ್ದಂತೆ ವಿಹಾರವನ್ನು ಕೊನೆಗಾಣಿಸಿ ಸಕಲ ಸೈನ್ಯದೊಡನೆ ಪಟ್ಟಣದೆಡೆಗೆ ಹೊರಟರು. ವಿವಿಧವಿಲಾಸಗಳ ನಡಗೆಗಳಿಂದ ಹಿಂತಿರುಗಿ ಬರುತ್ತಿದ್ದ ಅಶ್ವಗಳ ವೈಹಾಳಿಯನ್ನು ಅತಿಸಂಭ್ರಮ ಮತ್ತು ಸಂತೋಷಗಳಿಂದ ನಗರದ ಜನಸಮೂಹವು ಕಿಕ್ಕಿರಿದು ನಿಂದು ನೋಡಿ ಆನಂದಿಸಿತು. ವಾಯುವೇಗ-ಮನೋವೇಗಗಳನ್ನೂ ಮೀರಿಸಿದ್ದ ರಾಜಶೇಖರ-ಮಿತವಚನರ ಅಶ್ವಗಳಾದ ಪವನಗಮನ ಮತ್ತು ಹರಿಣಗಮನಗಳು ನಾನು ಮುಂದು ತಾನು ಮುಂದೆಂಬಂತೆ ಮುಂದೆ ಮುಂದೆ ಸಾಗಿಬರುತ್ತಿದ್ದವು.

# ೭. ವೈಹಾಳಿಯ ದುರಂತ

ಧರ್ಮಿಷ್ಠರ ನೆಲೆವೀಡಾಗಿದ್ದ ಆ ಧರ್ಮವತೀ ನಗರಿಯಲ್ಲಿ ತಿರುಕೊಳ ವಿನಾಚಿಯೆಂಬೋರ್ವ ಶಿವಭಕ್ತೆಯಿದ್ದಳು. ಅವಳಿಗೆ ಶಿವಪ್ರಸಾದದಿಂದ ಜನಿಸಿದ ಶಂಕರನೆಂಬೋರ್ವ ಐದು ವರ್ಷದ ಮಗನಿದ್ದನು. ಅಶ್ವಗಳ ಈ ವೈಹಾಳಿಯು ನಗರಿಗೆ ಹಿಂತಿರುಗಿ ಬರುವ ಸಂದರ್ಭದಲ್ಲಿ ತಾಯಿಯಾದ ತಿರುಕೊಳವಿನಾಚಿಯು ಮಗನೊಬ್ಬನನ್ನೇ ಮನೆಯಲ್ಲಿ ಬಿಟ್ಟು ತಾನು ನೀರಿಗೆಂದು ಹೋಗಿದ್ದಳು. ಇತ್ತ ಬೀದಿಯಲ್ಲಿನ ಕಲಕಲಧ್ವನಿಯನ್ನು ಕೇಳಿ ಅದೇನು ನೋಡಬೇಕೆಂಬ ಕುತೂಹಲದಿಂದ ಹೊರಬಂದು, ಬೀದಿಯಲ್ಲಿ ಇಕ್ಕೆಲಗಳಲ್ಲಿ ನಿಂತಿದ್ದ ಜನರ ಮಧ್ಯದಲ್ಲಿ ನುಸುಳಿ ನುಸುಳಿ ನುಗ್ಗಿಬಂದು ಬೀದಿಯ ನಡುವೆ ನಿಂತನು. ಮೇಲೆ ಮೇಲೆ ನುಗ್ಗಿಬರುತ್ತಿದ್ದ ಕುದುರೆಗಳ ರಭಸಕ್ಕೆ, ನೆಲಕ್ಕುರುಳಿ 'ಅಮ್ಮಾ!' ಎಂದು ಚೀರಿಟ್ಟನು. ಕಂಗೆಟ್ಟು ದಿಕ್ಕುಕಾಣದೆ ರೋದಿಸಿದನು. ನೆಲದಲ್ಲಿ ಕೈಯೂರಿ ಮೇಲೇಳಬೇಕೆಂದು ಏಳುತ್ತಿರುವಷ್ಟರಲ್ಲಿಯೇ ನಡುಬೀದಿಯಲ್ಲಿ ಅವಸ್ಥೆಪಡುತ್ತಿರುವ ಬಾಲಕನನ್ನು ಕಂಡ ರಾಜಶೇಖರನು ಅತಿವೇಗದಿಂದ ಬರುತ್ತಿದ್ದ ಅಶ್ವವನ್ನು ಕೂಡಲೇ ವೇಗವಾಗಿ ನೆಗೆಯಿಸಿ, ಹಿಂತಿರುಗಿ ಮಿತ್ರನಾದ ಮಿತವಚನನಿಗೆ 'ದಾಟಿಸು' ಎಂದು ಹೇಳುವಷ್ಟರಲ್ಲಿಯೇ ಮಿತವಚನನ ಅಶ್ವದ ಕಾಲ್ಗೊರಸಿಗೆ ಶಂಕರನ ಶಿರಸ್ಸು ಸಿಕ್ಕಿ ಶರೀರದಿಂದ ಬೇರ್ಪಟ್ಟುಹೋಗಿತ್ತು, ರಕ್ತದ ಧಾರೆಯೇ ಹರಿದಿತ್ತು. ನೋಡಿದ ಈರ್ವರ ಮನಸ್ಸೂ ಮಂಜಿನಂತೆ ಕರಗಿಹೋದವು. ಬಹುವಾಗಿ ವ್ಯಥೆಪಟ್ಟು, 'ಇದರ ಮರ್ಮವನ್ನು ಶಿವನೇ ಬಲ್ಲ, ಮಿಂಚಿ ಹೋದುದಕ್ಕೆ ಚಿಂತಿಸಿ ಫಲವಿಲ್ಲ. ಗಿರಿಜಾರಮಣನ ಪಾದಾರವಿಂದಗಳ ಅವಿಚ್ಛಿನ್ನಭಕ್ತಿಯ ದೆಸೆಯಿಂದ ಈ ಕಷ್ಟಪರಿಸ್ಥಿತಿಯನ್ನು ಕಡೆಹಾಯಿಸುವ ಸಾಹಸವನ್ನು ಮಾಡೋಣ' ಎಂದೀರ್ವರೂ ಚಿಂತಿಸುತ್ತಾ, ಧೈರ್ಯದಿಂದ ಮನಸ್ಸನ್ನು ಸ್ಥಿರಗೊಳಿಸಿ ರಾಜದ್ವಾರದೆಡೆಗೆ ಬಂದು ಅಶ್ವಗಳಿಂದ ಇಳಿದರು. ಎಲ್ಲರನ್ನೂ ಉಚಿತವಾಗಿ ಗೌರವಿಸಿ ಬೀಳ್ಕೊಟ್ಟು, ರಾಜಶೇಖರ ಮಿತವಚನ ರಿಬ್ಬರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಇತ್ತ ಆ ಪುರಜನರೆಲ್ಲ ಸೇರಿ ಬಾಲಕನ ಶರೀರವನ್ನೂ ಶಿರಸ್ಸನ್ನೂ ನೋಡಿ, 'ಅಕ್ಕಟಾ! ಈ ಸುಕುಮಾರನಾರು? ಯಾರ ಮಗನು? ಈ

ಶಿಶುವಿನ ಈ ವಿಧದ ವಿಚಿತ್ರ ವಧೆಯನ್ನು ತಿಳಿದ ಬಳಿಕ ಭೂಪೇಶನು ಸುಮ್ಮನೆ ಬಿಡುವನೆ? ಶಿವಶರಣಪಾದಪದ್ಮಭಜಕನಾದ ಚೋಳೇಂದ್ರನು ಅಪರಾಧಿಗಳ ಮೇಲೆ ಕೋಪಗೊಳ್ಳದಿರುವನೇ? ಅಪರಾಧಿಗೆ ಯಾವ ಶಿಕ್ಷೆಯನ್ನು ವಿಧಿಸಬಲ್ಲನೋ? ಇದರ ವಿಚಿತ್ರವನ್ನು ಶಿವನೇ ಬಲ್ಲ' ಎಂದು ಮಾತನಾಡಿಕೊಳ್ಳುತ್ತಿದ್ದರು. ಇಷ್ಟರಲ್ಲಿ ನೀರಿಗೆ ಹೋಗಿದ್ದ ತಿರುಕೊಳವಿನಾಚಿಯು ಮನೆಗೆ ಬಂದು ನೀರಿನ ಪಾತ್ರೆಯನ್ನು ಕೆಳಕ್ಕಿಳಿಸಿ, ಶಂಕರನನ್ನು ಕೂಗಿದಳು. ಮಗನು ಎಲ್ಲಿಯೂ ಮನೆಯಲ್ಲಿ ಕಾಣದಿರಲು, ಗಾಬರಿಯಿಂದ 'ಶಂಕರಾ! ಶಂಕರಾ!' ಎಂದು ಬೊಬ್ಬಿಟ್ಟಳು. ಮನೆಯಲ್ಲಿ ಎಲ್ಲಿಯೂ ಅವನ ಸುಳಿವು ಸಿಕ್ಕಲಿಲ್ಲ. ರಾಜಪುತ್ರರ ವಿಹಾರವನ್ನು ನೋಡಬಯಸಿ ಬೀದಿಗೆ ಹೋಗಿರಬೇಕೆಂದೆಣಿಸಿ ಬೀದಿಗೆ ಬಂದು ಅಲ್ಲೆಲ್ಲ ಕೂಗುತ್ತಾ ಅರಸಿದಳು. ಅಲ್ಲಿಯೂ ಕಾಣಲಿಲ್ಲ. 'ಆನೆಗಳ ತುಳಿತಕ್ಕೇ ಸಿಕ್ಕಿದನೋ? ರಥಗಳ ಚಕ್ರಕ್ಕೇ ಸಿಕ್ಕಿದನೋ? ಕುದುರೆಗಳ ಕಾಲಿಗೇ ಸಿಕ್ಕಿದನೋ?' ಎಂದು ಶಂಕಿಸಿ 'ಮಗನೇ! ಶಂಕರಾ! ಎಲ್ಲಿರುವೆ? ನನ್ನ ಕಂದಾ?' ಎಂದೊರಲುತ್ತಾ ಬೀದಿಯಲ್ಲಿ ಅಲೆದಲೆದು ಕೊರಗಿ ಬಸವಳಿಯುತ್ತಿದ್ದಳು. ಪೌರರು ದುಃಖಪಡುತ್ತಿರುವ ಇವಳನ್ನು ಕಂಡು, ಶಿಶುವು ಇವಳದೇ ಇರಬೇಕೆಂದು ಬಗೆದು, ಈಕೆಯನ್ನು ಕರೆದು ಜನಸಂದಣಿಯಲ್ಲಿ ಒಳನುಗ್ಗಿಸಿ ತುರಂಗದಾಘಾತದಿಂದ ಬೇರ್ಪಟ್ಟಿದ್ದ ರುಂಡಮುಂಡಗಳುಳ್ಳ ಬಾಲಕನ ಶರೀರವನ್ನು ತೋರಿಸಿದರು. ತಟ್ಟನೆ, ದಿಕ್ಕೆಟ್ಟು ಕಳವಳಿಸಿ, ಕಾಳ್ಗಿಚ್ಚಿನ ಮಧ್ಯೆ ಸಿಕ್ಕಿಕೊಂಡ ಜಿಂಕೆಯಂತೆ ಗತಿಕಾಣದೆ ಹೌಹಾರಿದಳು. ಒಸಗಿಹಾಕಲ್ಪಟ್ಟ ಹೂವಿನಂತೆ ಕುಂದಿಹೋದಳು. ಹೊಟ್ಟೆಯನ್ನು ಬಡಿದುಕೊಳ್ಳುತ್ತಾ, 'ನನ್ನ ಮರಿಯಂಚೆಯನ್ನು ಹೀಗೆ ತರಿದವರಾರು?' ಎಂದು ಚಿಟ್ಟನೆ ಚೀರಿದಳು. ರಕ್ತದ ಮಡುವಿನಲ್ಲಿ ಬಿದ್ದು ಧೂಳಿನಿಂದ ತುಂಬಲ್ಪಟ್ಟಿದ್ದ ತನ್ನ ಶಂಕರನ ರುಂಡಮುಂಡಗಳನ್ನು ತೆಗೆದುಕೊಂಡು ತೊಡೆಯ ಮೇಲಿರಿಸಿಕೊಂಡಳು. ತನ್ನ ಸೆರಗಿನಿಂದ ತಲೆಯ ಮೇಲಣ ರಕ್ತದ ಕಲೆ ಧೂಳಿಗಳನ್ನು ಒರಸಿದಳು. ಕಣ್ಣೀರ ಕೋಡಿ ಹರಿಯುತ್ತಲಿತ್ತು. ಕಂಠಬಿಗಿದು ಬಿಕ್ಕುತ್ತ ಬಿಕ್ಕುತ್ತ ರೋದಿಸುತ್ತಿದ್ದಳು. ಹಾಗೆಯೇ ಮುಖವನ್ನು ಸೆರಗಿನಿಂದೊರಸಿ, ಆಭರಣಗಳನ್ನು ಸರಿಪಡಿಸಿ, ಮೇರೆ

ಮೀರಿ ಬಂದ ದುಃಖವನ್ನು ಸೈರಿಸಲಾರದೆ, ಕೆನ್ನೆ-ಗಲ್ಲಗಳನ್ನು ಹಿಡಿದು ಮುದ್ದಿಸುತ್ತಾ, 'ಹಾ! ಸುಕುಮಾರ ಶಂಕರಾ! ಎನ್ನ ಮುದ್ದು ಕಂದಾ! ಇದೆಲ್ಲಿಯ ದುರವಸ್ಥೆ ನಿನಗೆ? ಇದು ಹೇಗೆ ಸಂಭವಿಸಿತು? ಎಲ್ಲಿಯ ಅಶ್ವಗಳು? ಇದೆಲ್ಲಿಯ ಹಾಳು ವೈಹಾಳಿ? ಎಲ್ಲಿಯ ರಾಜಕುಮಾರರು? ಈ ವೈಹಾಳಿಯ ದರ್ಶನಕ್ಕೆಂದು ಬಂದ ನಿನಗೆ ಈ ದುರವಸ್ಥೆಯೇ? ಅಯ್ಯೋ! ನೋಡಲಾರೆ, ಸೈರಿಸಲಾರೆ. ಸುಂದರಕುಮಾರಾ! ಪತಿಯ ಮರಣದ ದುಃಖವನ್ನು ನಿನ್ನಿಂದಾಗಿಯೇ ಸೈರಿಸಿಕೊಂಡಿದ್ದೆ. ವಂಶೋದ್ಧಾರಕನೂ ನನ್ನ ಪ್ರಾಣಸ್ವರೂಪನೂ ಆದ ನೀನೇ ಹೀಗೆ ನನ್ನನ್ನು ದೂರಮಾಡಿ ಹೋದಮೇಲೆ ಇನ್ನಾರಿಗಾಗಿ ನಾನು ಬದುಕಲಿ? ಈ ದುಃಖವನ್ನು ಹೇಗೆ ಸೈರಿಸಲಿ? ಶಿವನೇ! ನನಗಿನ್ನು ದಿಕ್ಕು ಯಾರು? ಕುಮಾರ! ಶಂಕರ! ಕುದುರೆಯು ನಿನ್ನನ್ನು ತುಳಿದಾಗ ದಿಗ್ಭ್ರಾಂತನಾಗಿ, ನಿರ್ದಯಳಾದ ನನ್ನನ್ನು ಅಮ್ಮಾ! ಅಮ್ಮಾ!! ಎಂದು ಕೂಗಿದೆಯಾ? ಅಥವಾ ಇವಳು ದುಷ್ಟಳೆಂದು ಬಗೆದು ಸುಮ್ಮನಿದ್ದೆಯಾ ಕಂದ?' ಎಂದು ಬಹುವಿಧವಾಗಿ ಪ್ರಲಪಿಸುತ್ತಿದ್ದಳು. ಇವಳ ಈ ಪ್ರಲಾಪವನ್ನು ನೋಡಲಾರದೆ ಎಂಬಂತೆ ಸೂರ್ಯನಸ್ತಮಿಸಿದನು.

## ೮. ದೊರೆಯ ವರೆಗೆ ದೂರು

ತಿರುಕೊಳವಿನಾಚಿಯ ದುಃಖಾಗ್ನಿಯಿಂದ ಹೊರ ಹೊರಟ ಹೊಗೆಯೋ ಎಂಬಂತೆ ಎಲ್ಲೆಡೆ ಅಂಧಕಾರವಾವರಿಸಿತು. ಇದನ್ನು ಕಂಡ ತಿರುಕೊಳವಿನಾಚಿಯು ತನ್ನ ಮಗನ ರುಂಡ ಮುಂಡಗಳನ್ನು ಎತ್ತಿ ಕೊಂಡು ಮನೆಗೆ ಬಂದಳು. ಅಲ್ಲಿ ರುಂಡವನ್ನು ಮುಂಡಕ್ಕೆ ಜೋಡಿಸಿ ನೋಡಿದಳು. ಸೈರಿಸಲಾರದೆ ಮಮ್ಮಲ ಮರುಗಿದಳು. 'ಶಿವ ಶಿವಾ! ಸರ್ವನಾಶವಾಯ್ತೇ? ನನ್ನ ಕಲ್ಪವೃಕ್ಷವೇ ಕಡಿದು ಬಿತ್ತೇ? . . . . . . ಕುಮಾರಾ! ಹಸಿದಿರುವೆಯಲ್ಲವೇ? ಸುಮ್ಮನೆ ಮಲಗಿರುವೆಯೇಕೆ? ಬಾ ಕಂದ, ಬಾ! ಊಟಮಾಡು ಬಾ! ಮಾತಾಡು! . . . . . . ಅಯ್ಯೋ! ನೀನು ಮಾತನಾಡಲಾರೆ, ನೀನು ಮಾತನಾಡಲಾರೆ. ನನ್ನಿಂದ ಬಹಳ ದೂರ-ದೂರಕ್ಕೆ ಹೊರಟುಹೋಗಿರುವೆ. ನಿನ್ನನೆಂತು ಮರೆಯಲಿ

ಕಂದಾ ! ನೀನಾಡುತ್ತಿದ್ದ, ಮಲಗುತ್ತಿದ್ದ ಸ್ಥಳಗಳನ್ನಿನ್ನೆಂತು ನೋಡಲಿ ? ಆಟವಾಡಿ ಬಂದಾಗ ಮೈಯಲ್ಲಿ ಅಂಟಿಕೊಂಡಿದ್ದ ಧೂಳನ್ನು ಒರಸಿ ಮೈತೊಳೆದು ಮಡಿಬಟ್ಟೆಯುಡಿಸಿ, ಅಲಂಕರಿಸಿ, ತಿನಿಸು ತಿನ್ನಿಸುತ್ತಾ ಮುದ್ದಿಸುತ್ತಿದ್ದ ನಿನ್ನ ಈ ತಾಯಿಯನ್ನು ಬಿಟ್ಟು ನೀನೊಬ್ಬನೆ ಎಲ್ಲಿಗೆ ಹೋದೆ ಮುದ್ದುಮಗನೇ ? . . . . ಅಮ್ಮಾ! ಅಳಬೇಡವೇ ಅಮ್ಮಾ! ನೀನತ್ತರೆ ನಾ ಸುಮ್ಮನಿರಲಾರೆನಮ್ಮಾ! ಎಂದು ಸಂತೈಸದೆ, ಕೆನ್ನೆಗಳ ಮೇಲೆ ಉಸುರುತ್ತಿರುವ ನನ್ನ ಕಣ್ಣೀರನ್ನು ನಿನ್ನ ಮುದ್ದು ಮುದ್ದಾದ ಕೈಗಳಿಂದ ಒರಸದೆ ಗಾಢವಾದ ಸುಖನಿದ್ರೆಯಲ್ಲಿ ಲೀನನಾಗಿರುವೆಯಾ ಮಗನೇ ? ಈ ವಿಧವಾದ ದುರವಸ್ಥೆಯಲ್ಲಿರುವ ನಿನ್ನನ್ನು ನೋಡುತ್ತಲಿರುವ ನನ್ನ ಕಣ್ಣುಗಳು ಹೀಗೆಯೇ ಹಿಂಗಿಹೋಗಬಾರದೇಕೆ ? ಹೀಗೆಲ್ಲ ಪ್ರಲಪಿಸುತ್ತಿರುವ ಈ ನಾಲಗೆಯು ಇಂತೆಯೇ ಉಡುಗಿಹೋಗಬಾರದೇಕೆ ? ಈ ಬರಡು ಹೃದಯವಾದರೂ ಒಡೆದು ಚೂರು ಚೂರಾಗಬಾರದೇಕೆ ? . . . ಅಯ್ಯೋ ! ಶಿವ ಶಿವಾ ! ನಾನು ಕಠೋರ ಹೃದಯಳು. ನನ್ನೀ ಮುದ್ದು ಕುವರನು ನನ್ನಿಂದ ದೂರನಾಗಿ ಹೊರಟುಹೋಗಿದ್ದರೂ ನಾನಿನ್ನೂ ಬದುಕಿಯೇ ಇರುವೆನಲ್ಲಾ ? ಯಾರಲ್ಲಿ ನನ್ನೀ ದುಃಖವನ್ನು ತೋಡಿಕೊಳ್ಳಲಿ ? ಮತ್ತೆ ಇನ್ನಾರಿಗಾಗಿ ನಾನು ಬದುಕಿರಲಿ ? ನನಗೆ ದಿಕ್ಕಿನ್ನಾರು ತಂದೆ ! ಶಿವನೇ ! ನಿನಗೂ ನನ್ನಮೇಲೆ ಕೋಪವೇ ? ನೀನಿತ್ತ ಈ ವರಪ್ರಸಾದವನ್ನು ನೀನೇ ಹೀಗೆ ಕಸಿಯಬಹುದೇ ? . . . . ಕುಮಾರ ! ಶಿವನ ವರದಿಂದ ನಿನ್ನನ್ನು ಪಡೆದದ್ದು ಹೀಗೆ ನೀನು ಕುದುರೆಯ ಕಾಲಿಗೆ ಸಿಕ್ಕಿ ಮಡಿಯಲೆಂದೇನು ? ನನ್ನಂತಹ ಕಡುಪಾಪಿ ಹೆಣ್ಣು ಈ ಲೋಕದಲ್ಲಿ ಮತ್ತಾರಾದರೂ ಇರುವರೇ ? ಶಂಕರಾ ! ಇನ್ನಾರನ್ನು ಶಂಕರಾ ! ಶಂಕರಾ !! ಎಂದು ಕರೆಯಲಿ ? ಕಂದಾ ! ಶಿವಶರಣರ ಪವಿತ್ರವಾದ ಪಾದ ಧೂಳಿಯಲ್ಲಿ ಭಕ್ತಿಭಾವದಿಂದ ಹೊರಳಾಡಬೇಕಾಗಿದ್ದ ನಿನ್ನ ಈ ಶಿರಸ್ಸು, ಕುದುರೆಯ ಕಾಲ್ಗೊರಸಿನಿಂದೆದ್ದ ಧೂಳಿಯಲ್ಲಿ ಹೊರಳಾಡುವ ದುಃಸ್ಥಿತಿಯನ್ನು ಹೊಂದಬೇಕಾಯ್ತೇ ? ವಂಶದ ಕುಡಿ ನೀನೇ ಎಂದು ನಂಬಿದ್ದ ನನ್ನ ನಂಬಿಕೆಯು ಕೇವಲ ನಂಬಿಕೆಯಾಗಿಯೇ ಹೋಯಿತೇ ? ಮುದ್ದು ಮಗನೇ ! ನೀನೇ ಹೀಗಾದ ಮೇಲೆ ನಾನಿನ್ನು ಬದುಕಿರುವೆನೇ ?

ಎಂದೆಂದಿಗೂ ಜೀವಿಸಿರಲಾರೆ . . . . . . ಶಿವಶಿವಾ ! ದಯಾಮಯ ! ನೀನೂ ಕರುಣೆ ತೋರದಾದೆಯಾ ? . . . . . ಅಮ್ಮಾ ! ಜಗನ್ಮಾತೆ ! ನಿನಗೂ ದಯೆ ಬಾರದೆ ? ನೀನು ಸರ್ವಮಂಗಳೆಯಲ್ಲವೇ ? ದಯಾ ಮೂರ್ತಿಯಾದ ನೀನಲ್ಲದೆ ನನಗಿನ್ನಾರು ಗತಿ ತಾಯೆ ? ಅಂಬ ! ಜಗದಂಬ ! ಜಗದೀಶ್ವರಿ ! ಪರಮೇಶ್ವರಿ ! ಶಂಕರಿ ! ನೀನೇ ರಕ್ಷಿಸು ' ಎಂದು ದೇವಿಯಲ್ಲಿ ಮೊರೆಯಿಟ್ಟಳು.

ಹೀಗೆ ಈಕೆಯ ರೋದನವು ರಾತ್ರಿಯೆಲ್ಲ ಅವ್ಯಾಹತವಾಗಿ ನಡೆಯಿತು. ಮುಖಕಾಂತಿ ಗರಬಡಿದಂತೆ ಕುಂದಿಹೋಯ್ತು, ಕಣ್ಗಳಕಾಂತಿ ಕಂದಿ ಹೋಯ್ತು, ಶರೀರ ಕೃಶವಾಯ್ತು, ಬಲವೆಲ್ಲ ಉಡುಗಿ ಹೋಯ್ತು; ಕೆದರಿದ ಕೂದಲು, ಹುಚ್ಚು-ಹುಚ್ಚಾಗಿ ಅರಚಿಕೊಳ್ಳುವಾಗ ಹರಿದುಹೋದ ಸೀರೆ, ಪ್ರಜ್ಞಾಶೂನ್ಯತೆ ಇವೆಲ್ಲ ಎಂತಹವರಿಗೂ ಮನಕರಗಿಸುವಂತಿತ್ತು.

ಇವಳ ಈ ಮೊರೆಯನ್ನು ಲಾಲಿಸಿದ ಶ್ರೀ ಪಾರ್ವತೀಪರಮೇಶ್ವರರು ತಮ್ಮ ಮಹಿಮೆಯನ್ನು ವ್ಯಕ್ತಪಡಿಸುವ ರೀತಿಯನ್ನೂ ಮತ್ತು ತನ್ನ ವಂಶಜ ರಾದ ಈ ಚೋಳಭೂಪಾಲಕರು ತಮ್ಮ ಅಪಾರ ಶಿವಭಕ್ತಿಯನ್ನು ಜಗತ್ತಿಗೇ ಪ್ರಸಿದ್ಧಪಡಿಸುವ ರೀತಿಯನ್ನೂ ಕಣ್ಣಾರ ನೋಡಿ ಆನಂದಿಸಬೇಕೆಂಬ ಮಹದಾಕಾಂಕ್ಷೆಯಿಂದ ಸೂರ್ಯನುದಯಿಸಿದನು. ಬೆಳಗಾದುದೇ ತಡ ಶಿವಪ್ರೇರಣೆಯಿಂದ ಎಂಬಂತೆ, ಕೂಡಲೇ ತಿರುಕೊಳವಿನಾಚಿಯು ತನ್ನ ಕುಮಾರನ ಕಳೇಬರವನ್ನು ಎತ್ತಿಕೊಂಡು ಅಪಾರವಾಗಿ ರೋದನ ಮಾಡುತ್ತಾ ನೇರವಾಗಿ ಮಹಾರಾಜನ ಅರಮನೆಯ ಅಂತಃಪುರದ ಮಹಾ ದ್ವಾರದ ಬಳಿ ಬಂದು ನಿಂತಳು. ಅಲ್ಲಿ ರಾಜನನ್ನುದ್ದೇಶಿಸಿ, ' ಧರ್ಮರಕ್ಷಣ ಶೀಲನೂ, ಸತ್ಯಸಂಧನೂ, ಪರಮಶಿವಭಕ್ತನೂ ಆದ ಸತ್ಯೇಂದ್ರಚೋಳ ಮಹಾಪ್ರಭೋ ! ದೀನಳಾದ ನನ್ನ ಮೊರೆಯನ್ನು ಕೇಳಿ ನನ್ನಲ್ಲಿ ಕೃಪೆಮಾಡಿ ಧರ್ಮರಕ್ಷೆಯನ್ನು ನೀಡಬೇಕು ' ಎಂದು ದುಃಖಿಸುತ್ತಲೇ ಮೊರೆಯಿಟ್ಟಳು.

ನಗರದ ಶಿವಭಕ್ತರಲ್ಲಿ ಯಾರಿಗೋ ಏನೋ ಅಪರಾಧವಾಗಿದೆಯೆಂದು ಕನಲಿ ಕೋಪಗೊಂಡು ರಾಜ ಸತ್ಯೇಂದ್ರಚೋಳನು, ಅಂತಃಪುರದಿಂದ ಹೊರಬಂದು ಅರಮನೆಯ ಸಿಂಹಾಸನವನ್ನೇರಿ ಕುಳಿತನು. ಕೂಡಲೇ,

"ಈ ರೋದನವೆಲ್ಲಿಯದು ? ಯಾರಿಂದಾದುದು ? ' ಎಂದು ವಿಚಾರಿಸುವಲ್ಲಿ ಕಂಚುಕಿಯು ಮುಂದೆ ಬಂದು, ' ದೇವಾ ! ಓರ್ವ ಸ್ತ್ರೀಯು ತನ್ನ ಕಂದನ ಕಳೇಬರವನ್ನು ಹೊತ್ತು ತಂದು ದುಃಖಿಸುತ್ತಾ ಪ್ರಭುಗಳಲ್ಲಿ ಮೊರೆಯಿಡು ತ್ತಿರುವಳು ' ಎಂದನು. ಆಗ ರಾಜನು, ' ಆಕೆಯನ್ನು ಒಳಕ್ಕೆ ಬರಮಾಡು ನಾನೇ ವಿಚಾರಮಾಡುತ್ತೇನೆ ' ಎಂದಾಜ್ಞಾಪಿಸಿದನು. ಅಪ್ಪಣೆಯಂತೆ ಕಂಚುಕಿಯು ಆಕೆಯನ್ನು ರಾಜನೆಡೆಗೆ ಕರೆತಂದನು. ಕೆದರಿದ ಕೂದಲು, ಧೂಳಿನಿಂದ ಮುಚ್ಚಿಹೋದ ಮೈ, ಬಾಡಿಹೋದ ಕಣ್ಣು, ಬತ್ತಿಬಸವಳಿದ ಮುಖ, ನಿಟ್ಟುಸಿರಿನಿಂದ ಏದುತ್ತಿದ್ದ ಎದೆ ಈ ದುರವಸ್ಥೆಯಲ್ಲಿದ್ದು, ತನ್ನೆರಡೂ ಕೈಗಳಿಂದ ಛಿನ್ನಭಿನ್ನವಾಗಿ ರಕ್ತಸಿಕ್ತವಾಗಿದ್ದ ಶಿಶುವಿನ ಕಳೇಬರವನ್ನು ಹಿಡಿದು, ಮೈವೆತ್ತ ದುಃಖಸಾಗರವೋ ಎಂಬಂತೆ ತನ್ನೆಡೆಗೆ ಬರುತ್ತಿದ್ದ ಇವಳನ್ನು ರಾಜೇಂದ್ರನು ನೋಡಿದನು. ಮುಂದೆ ಬಂದ ತಿರುಕೊಳವಿನಾಚಿಯು ತನ್ನ ಕಂದನ ಶರೀರವನ್ನು ರಾಜನ ಮುಂದಿರಿಸಿ ಇಮ್ಮಡಿ–ಮುಮ್ಮಡಿಗೊಂಡ ದುಃಖದ ಭರದಿಂದಾಗಿ ಹಾಗೆಯೇ ನೆಲಕ್ಕುರುಳಿದಳು. ಆಗ ಮಹಾರಾಜನು, ' ತಾಯೀ ! ದುಃಖಿಸದಿರು. ನಡೆದಿರುವ ಸಂಗತಿಯೇನು ? ಯಾರಿಂದ ಈ ಶೈವಶಿಶುವಿಗೆ ಈ ವಿಧದ ದುರವಸ್ಥೆ ಸಂದಿದೆ ? ಹೇಳು. ಧೈರ್ಯವಾಗಿ ಹೇಳು. ಸಂತೈಸಿಕೋ. ಅವರಿಗೆ ತಕ್ಕ ಶಾಸ್ತಿಯನ್ನು ಮಾಡಿಯೇ ತೀರುವೆನು ' ಎಂದಭಯವಿತ್ತನು. ತನಗೆ ಅಮೃತಸೇಚನದಂತಾದ ರಾಜನ ಈ ಮಾತಿನಿಂದ ಆಕೆಯು ತನ್ನಳಲನ್ನು ಸಂತೈಸಿಕೊಂಡರೂ ಸೀಮಾತೀತವಾದ ದುಃಖದ ಭರವನ್ನು ತಡೆಯಲಾರದವಳಾಗಿ ಗದ್ಗದ ಕಂಠದಿಂದಲೇ ತನ್ನ ಕಥೆಯನ್ನರುಹಿದಳು.

' ಮಹಾಪ್ರಭು ! ಧರ್ಮದ ನೆಲೆವೀಡಾದ ಸಿನ್ನೀನಗರಿಯಲ್ಲಿ ಶಿವಭಕ್ತ ಪರಾಯಣನೂ, ವೈಶ್ಯಶ್ರೇಷ್ಠನೂ ಆದ ಮಾರ್ತಾಂಡನ ಪತ್ನಿಯೇ ನಾನು ತಿರುಕೊಳವಿನಾಚಿಯು. ನನ್ನ ಪತಿಯು ಒಮ್ಮೆ ಹಡಗಿನಲ್ಲಿ ಸರಕುಗಳ ಸಮೇತ ವ್ಯಾಪಾರಕ್ಕೆಂದು ಸಮುದ್ರಯಾನ ಮಾಡಿದನು. ಆತನು ಹೊರ ಡುವ ವೇಳೆಗೆ ನಾನು ಆರು ಮಕ್ಕಳ ತಾಯಿಯಾಗಿದ್ದು ಏಳನೆಯ ಮಗು ವಾದ ಈ ನನ್ನ ಮುದ್ದು ಕಂದನಿಗೆ ಮೂರು ತಿಂಗಳ ಗರ್ಭಿಣಿಯಾಗಿದ್ದೆ. ಗಾಳಿಯ ಹೊಡೆತಕ್ಕೆ ಸಿಕ್ಕಿದ ಹಡಗು ದೈವಗತಿಯಿಂದ ನೀರಪಾಲಾಯ್ತು.

ಅಂತೆಯೇ ನನ್ನ ಸೌಭಾಗ್ಯನೌಕೆಯೂ ನುಚ್ಚುನೂರಾಗಿ ನೀರಪಾಲಾಯ್ತು. ಅನಂತರ ಜೀವನಕ್ಕೆ ಗತಿಕಾಣದೆ, ಬಡತನ-ರೋಗ-ರುಜಿನಗಳಿಗೆ ಸಿಕ್ಕಿ ಕೇವಲ ಆರು ತಿಂಗಳ ಅವಧಿಯಲ್ಲಿಯೇ ನನ್ನ ಆರು ಮಕ್ಕಳೂ ಶಿವಪಾದ ವನ್ನು ಸೇರಿದವು. ಈ ಪುತ್ರವಿಯೋಗದುಃಖವನ್ನು ಸಹಿಸದೆ ಚಿಂತೆಯ ಆವೇಗಕ್ಕೆ ಸಿಕ್ಕಿ ಮೂರ್ಛಿತಳಾಗಿ ಬಿದ್ದೆನು. ಆಗ ಶ್ರೀ ಪರಶಿವನು ಗೋಚರ ನಾಗಿ, 'ಮಗಳೇ! ಹೆದರಬೇಡ, ದುಃಖಿಸಬೇಡ, ಪ್ರಶಾಂತಳಾಗು. ನನ್ನೊಲುಮೆ ನಿನಗಾವಾಗಲೂ ಇದೆ. ನೋಡು, ನಿನ್ನ ಪವಿತ್ರವಾದ ಉದರದಲ್ಲಿ ನನ್ನ ವರಪ್ರಸಾದದಿಂದಲೇ ಬೆಳೆಯುತ್ತಿರುವ ಪುತ್ರನು ಜನಿಸಿ ನಿನ್ನ ಎಲ್ಲ ದುಃಖಗಳನ್ನೂ ದೂರಮಾಡಿ ನಿನ್ನ ಮೋಕ್ಷಸಾಮ್ರಾಜ್ಯಕ್ಕೆ ಮುಖ್ಯ ಕಾರಣನಾಗುತ್ತಾನೆ. ನನ್ನ ಮಾತನ್ನು ನಂಬು' ಎಂದು ಹೇಳುತ್ತಾ ಪೈದಡವಿ ಮಾಯವಾದನು. ಆತನ ಪವಿತ್ರ ಕರಸ್ಪರ್ಶದಿಂದ ಚೈತನ್ಯವೂಡಮೂಡಿದ ನಾನು ಕಣ್ತೆರೆದೆನು. ಪರಶಿವನ ಅಭಯವಚನದಂತೆ ದುಃಖವನ್ನೆಲ್ಲ ದೂರಮಾಡಿ ಸದಾ ಶಿವಸ್ಮರಣೆಯಲ್ಲಿದ್ದೆನು. ಹೀಗಿರುವಲ್ಲಿ ಒಂದು ಶುಭದಿನ ಈ ಶಿಶುವಿಗೆ ಜನ್ಮವಿತ್ತೆನು. ಶಂಕರನ ವರಪ್ರಸಾದಲಭ್ಯ ನಾದ್ದರಿಂದ ಈತನಿಗೆ ಶಂಕರನೆಂದೇ ನಾಮಕರಣಮಾಡಿ ಈತನನ್ನು ಕರೆಯುವ ನೆವದಲ್ಲಿ ಶಂಕರನನ್ನು ನೆನೆಯುತ್ತಲಿದ್ದೆನು ಅಥವಾ ಈತನೇ ಶಂಕರನೆಂದು ಬಗೆದಿದ್ದೆನು.

ಕಾಲಾನುಗುಣವಾಗಿ ಬೆಳೆದ ಈತನು ಎಲ್ಲ ಹುಡುಗರಂತೆ ಸಾಮಾನ್ಯ ನಾಗಿರಲಿಲ್ಲ. ನಾನು ಮಾಡುತ್ತಿದ್ದ ಎಲ್ಲ ವಿಧವಾದ ಶಿವಸ್ತುತಿ-ಶಿವಪೂಜೆ-ಶಿವಶರಣರ ಪಾದಸೇವೆ ಮೊದಲಾದವುಗಳಲ್ಲಿ ಈತನು ಭಾಗಿಯಾಗಿ ಅವುಗಳನ್ನು ಅಂತೆಯೇ ಆಚರಿಸುತ್ತಿದ್ದನು. ಹೀಗೆ ಶಿವಧ್ಯಾನದಲ್ಲಿ ಎಷ್ಟೋ ಕಾಲ ಮಗ್ನನಾಗಿಬಿಡುತ್ತಿದ್ದನು. ತನ್ನೆಲ್ಲ ಈ ಕಾರ್ಯದಿಂದ ನನ್ನೆಲ್ಲ ದುಃಖವನ್ನೂ ಮರೆಯಿಸಿದ್ದನು. ಆದರೇನು? ಪುನಃ ನನ್ನ ಪಾಪರಾಶಿ ಉಮ್ಮಳಿಸಿತು. ನಿನ್ನೆ ನಡೆದ ರಾಜಕುಮಾರ-ಮಂತ್ರಿಕುಮಾರಕರ ವೈಹಾಳಿಯ ಸಂದರ್ಭದಲ್ಲಿ ಕುದುರೆಯ ಕಾಲ್ತೊರಸಿಗೆ ಸಿಕ್ಕಿ ನನ್ನ ಮುದ್ದು ಕಂದನು ಈ ದುರವಸ್ಥೆಯನ್ನು ಹೊಂದಿರುವನು. ದೇವ ದೇವ! ಇದರಿಂದ ನನ್ನ ಆಸೆ-ಆಕಾಂಕ್ಷೆಗಳೆಲ್ಲವೂ ಮಣ್ಣುಪಾಲಾದವು. ಶಿವನ ಅಭಯ

ವಚನವೂ ವ್ಯರ್ಥವಾಯ್ತು, ನನಗೂ ಗತಿಯಿಲ್ಲವಾಯ್ತು. ಧರ್ಮಮೂರ್ತಿಯಾದ ನೀನೇ ನನಗೆ ಮಾರ್ಗವನ್ನು ತೋರಬೇಕು' ಎಂದು ಎಲ್ಲವನ್ನೂ ತೋಡಿಕೊಂಡಳು. ಇವಳ ಜೀವನ ವೃತಾಂತವನ್ನೆಲ್ಲ ತಿಳಿದ ರಾಜನು ಆಶ್ಚರ್ಯಗೊಂಡು, 'ಶಿವ ಶಿವಾ! ಇವೆಲ್ಲವೂ ನಿನ್ನ ವಿಚಿತ್ರವೇ ಹೌದು' ಎಂದು ಮನದಲ್ಲಾಲೋಚಿಸಿ, ಕೂಡಲೇ ಮಹಾಸಚಿವ ಪತಿಮೋಹಿಯನ್ನು ಬರಹೇಳಿದನು.

ರತ್ನಮಯವಾದ ಕಿರೀಟ-ಕುಂಡಲ-ಹಾರಾದಿಗಳಿಂದ ಪರಿಶೋಭಿಸುತ್ತಿದ್ದ ಮಹಾಮಾತ್ಯ ಪತಿಮೋಹಿಯು ಕೂಡಲೇ ಸಭೆಗಾಗಮಿಸಿದನು. ಮಹಾರಾಜನಿಗೆ ಶಿರಬಾಗಿ ನಮಿಸಿ ಒಂದೆಡೆ ನಿಂತನು. ಗ್ರಹಗಸ್ತ ಚಂದ್ರನಂತೆ, ಅಗ್ನಿಜ್ವಾಲೆಗೆ ಸಿಕ್ಕಿದ ಪುಷ್ಪದಂತೆ ಕಂದಿ ಕುಂದಿಹೋಗಿದ್ದ ತಿರುಕೊಳವಿನಾಚಿಯನ್ನೂ ಮತ್ತು ದುರ್ಮರಣಕ್ಕೀಡಾಗಿದ್ದ ಆಕೆಯ ಪುತ್ರನನ್ನೂ ನೋಡಿದನು. ಸರ್ವಜ್ಞನೂ ಕುಶಾಗ್ರಬುದ್ಧಿಯೂ ಆಗಿದ್ದುದರಿಂದ ಎಲ್ಲವನ್ನೂ ಕೂಡಲೇ ಗ್ರಹಿಸಿದನು. ನಿನ್ನಿನ ರಾಜಕುಮಾರ ಮಂತ್ರಿಕುಮಾರರೀರ್ವರ ಅಶ್ವಾರೋಹಣದಿಂದಾದ ದುರಂತವಿದೆಂದು ತಿಳಿಯಲು ತಡವಾಗಲಿಲ್ಲ. 'ಇದು ಶಿವನ ಲೀಲೆಯಲ್ಲದೆ ಬೇರೆಯಲ್ಲ; ತನ್ನ ಭಕ್ತರ ಭಕ್ತಿಯನ್ನು ಪರೀಕ್ಷಿಸಿ ಅವರಿಗೆ ಚಿರಶಾಶ್ವತದ ಮೋಕ್ಷಪದವಿಯನ್ನು ನೀಡಬೇಕೆಂಬ ಸದುದ್ದೇಶದಿಂದ ಶ್ರೀ ಜಗಧೀಶ್ವರನೇ ಹೀಗೆ ಈ ಪರಿಸ್ಥಿತಿಯನ್ನು ತಂದೊಡ್ಡಿದ್ದಾನೆ;' ಆತನ ಸಂಕಲ್ಪಕ್ಕೆ ಎದುರುಂಟೇ?' ಎಂದು ಯೋಚಿಸುತ್ತಿರುವಷ್ಟರಲ್ಲಿ, ಇಂಗಿತಜ್ಞನಾದ ರಾಜನು ಮಹಾಮಾತ್ಯನನ್ನುದ್ದೇಶಿಸಿ, 'ಮಂತ್ರಿವರ್ಯಾ! ಈ ಅಪರಾಧಕ್ಕೆ ಕಾರಣರಾದ ಈರ್ವರನ್ನೂ ತಡಮಾಡದೆ ಬರಮಾಡು' ಎಂದಾಜ್ಞಾಪಿಸಿದನು. ಮುಂದಾಗಬಹುದನ್ನು ಮೊದಲೇ ಭಾವಿಸಿದ್ದು ಸಿದ್ಧರಾಗಿದ್ದ ಕುಮಾರಕರೀರ್ವರೂ ಮಹಾರಾಜನ ಅಪ್ಪಣೆಯಾಗುವಷ್ಟರಲ್ಲಿಯೇ ಮಹಾರಾಜನಿಗೆದುರಾಗಿ ಬಂದು ಅಭಿವಂದಿಸಿ ಶಿರಬಾಗಿ ನಿಂತರು.

ಕೆಂಡದ ಕಿಡಿಗಳನ್ನೇ ಕಾರುತ್ತಿರುವ ಕಣ್ಣುಗಳಿಂದ ಮಹಾರಾಜನು ಈರ್ವರನ್ನೂ ದಿಟ್ಟಿಸಿದನು. ಹುಬ್ಬುಗಳು ಗಂಟಿಕ್ಕಿದವು, ಹಣೆಯಲ್ಲಿ ಬೆವರು ಹನಿಗಳುದುರುತ್ತಿದ್ದವು, ತುಟಿಗಳು ಕಂಪಿಸುತ್ತಿದ್ದವು. ಮುಖವು ಅಗ್ನಿ

ಯಂತೆ ಉರಿಯುತ್ತಿತ್ತು. ಭಯವನ್ನು ಮೂಡಿಸುವ ಮತ್ತು ಮೇಘ ಗರ್ಜನೆಯಂತೆ ಗಂಭೀರವಾದ ಧ್ವನಿಯಿಂದ ರಾಜನು, 'ಯೌವನ-ಐಶ್ವರ್ಯ-ರಾಜ್ಯಾದಿಗಳ ಮದದಿಂದ ಕೊಬ್ಬಿ ಯುಕ್ತಾಯುಕ್ತತೆಯನ್ನು ವಿಚಾರ ಮಾಡದೆ, ಅಪಕೀರ್ತಿಗೂ ಹೆದರದೆ, ಅಕ್ಷಮ್ಯವೂ-ಅತಿಘೋರವೂ-ಆತ್ಮ ವಿನಾಶಕಾರಿಯೂ ಆದ ಈ ಶಿಶುಹತ್ಯೆಯ ಪಾಪಕಾರ್ಯವನ್ನೆಸಗಬಹುದೇ? ನಿಮಗೆ ಇಂತಹ ಉದ್ಧಟತನವು ತಕ್ಕುದಲ್ಲ. ಇದರಿಂದ ನಿಮ್ಮ ಶಿವಭಕ್ತಿ-ಸಚ್ಚರಿತ್ರೆ-ಸದ್ವಿನಯಾದಿಗಳೆಲ್ಲವೂ ಪರಿಪೂರ್ಣವಾಗಿ ನಾಶವಾಗಿ ಹೋದವು. ಶಿವಭಕ್ತರಾದವರನ್ನು ಉದ್ಧರಿಸುವ ನಿಮಿತ್ತವಾಗಿ ಎಂತಹ ದುಸ್ಸಾಧ್ಯಗಳಾದ ಕಷ್ಟಗಳನ್ನೇ ಎದುರಿಸಬೇಕಾದ ನೀವು ಶಿವಭಕ್ತರನ್ನೇ ಈರೀತಿ ನಾಶಪಡಿಸಲು ತೊಡಗಿ ಪರಮೇಶ್ವರನ ಕೋಪಾಗ್ನಿಗೆ ತುತ್ತಾಗಿರುವಿರಿ. ಶಿವಪೂಜೆಗಿಂತಲೂ ಶಿವಶರಣರ ಪೂಜೆಯೇ ಶ್ರೇಷ್ಠವಾದುದೆಂದು ಶ್ರುತಿಗಳೇ ಸಾರುತ್ತಿರುವಲ್ಲಿ ಶಿವಭಕ್ತರನ್ನು ಪೂಜಿಸಿ ಗೌರವಿಸದೆ ಹೀಗೆ ಕೊಂದು ಮಹಾಪಾತಕಿಗಳಾಗಿರುವಿರಿ. ನಿಮ್ಮ ತಲೆಯನ್ನೇ ಇದಕ್ಕೆ ಪ್ರತಿಯಾಗಿ ಕೊಟ್ಟರೂ ಈ ಶಿವಭಕ್ತ ಶಿಶುಹತ್ಯಾದೋಷದಿಂದ ಮುಕ್ತರಾಗಲಾರಿರಿ. ಹೇಳಿ! ನಿಮ್ಮಿರ್ವರಲ್ಲಿ ಯಾರು ಈ ಹತ್ಯೆಯನ್ನು ಮಾಡಿದವರು?' ಎಂದು ಪ್ರಶ್ನಿಸಿದನು.

ಆಗ ಮಿತವಚನನು ಮುಂದೆ ಬಂದು ಕೈಮುಗಿದು ನಿಂದು, 'ಜೀಯಾ! ಹಿಂದಿನದಿನದ ಸಭೆಯಲ್ಲಿ ಸಿಂಧುರಾಜನು ಎರಡು ನೂತನಗಳಾದ ಅಶ್ವಗಳನ್ನು ರಾಜಕುಮಾರನಿಗೆ ಸಮರ್ಪಿಸಿ ಹೋದನು. ಅವುಗಳನ್ನು ಹತ್ತಿ ಚತುರಂಗಬಲಸಹಿತರಾಗಿ ವಿಹಾರವನ್ನು ನಡೆಸಿ ಸಂಜೆ ನಗರಿಗೆ ಹಿಂತಿರುಗುತ್ತಿರುವಾಗ ನಗರಿಯ ರಾಜಬೀದಿಯಲ್ಲಿ ನಾವು ಸಾಗಿ ಬರುತ್ತಿದ್ದೆವು. ಈ ಶಿಶುವು ಜನಸಂದಣಿಯಲ್ಲಿ ನುಸುಳಿ ಮಾರ್ಗಮಧ್ಯಕ್ಕೆ ಬಂದಾಗ, ಈತನನ್ನು ಕಂಡ ರಾಜಕುಮಾರನು ತತ್ಕ್ಷಣವೇ ಈ ಕುಮಾರನಿಗೆ ಅಪಾಯವಾಗದಂತೆ ತನ್ನ ಅಶ್ವವನ್ನು ನೆಗೆಯಿಸಿಕೊಂಡು ಹೋಗಿ ನನಗೆ ಎಚ್ಚರಿಕೆ ನೀಡಬಯಸಿದನು. ಇಷ್ಟರಲ್ಲಿ ನಾನೂ ಕುದುರೆಯನ್ನು ನೆಗೆಯಿಸಬೇಕೆಂದಿದ್ದೆ. ಆದರೆ ಆ ವೇಳೆಗೆ ಕಾರ್ಯ ಮಿಂಚಿಹೋಗಿತ್ತು. ನನ್ನ ಅಶ್ವದ ಕಾಲ್ಗೊರಸು ಈ ಕುಮಾರನ ಶಿರಸ್ಸನ್ನು ಛಿದ್ರಮಾಡಿತ್ತು-

ಈ ಅಪರಾಧವು ನನ್ನದೇ ಆದ್ದರಿಂದ, ಇದಕ್ಕೆ ಪ್ರತಿಯಾಗಿ ನನ್ನ ಶಿರಸ್ಸನ್ನು ಛೇದನೆಮಾಡಿಸುವುದು ಯುಕ್ತವಾಗಿದೆ' ಎಂದು ಹೇಳಿ ವಂದಿಸಿ ಬಾಗಿ ನಿಂತನು. ಕೂಡಲೇ ರಾಜನು ಪತಿವ್ರೋಹಿಗೆ, 'ಈತನ ಶಿರಸ್ಸನ್ನು ಈ ಶಿಸುವಿನ ಶಿರಸ್ಸಿಗೆ ಪ್ರತಿಯಾಗಿ ಬಲಿಕೊಡುವುದು' ಎಂದಾಜ್ಞಾಪಿಸಿ ದನು. ಅಷ್ಟರಲ್ಲಿ ರಾಜಕುಮಾರನಾದ ರಾಜಶೇಖರನು ಮುಂದೆ ಬಂದು ತನ್ನೆರಡೂ ಕೈಗಳನ್ನು ಜೋಡಿಸಿ ಶಿರಬಾಗಿ ಕೈಮುಗಿದು ಎಲ್ಲರಿಗೂ ಸಂತೋಷ-ಕೌತುಕವನ್ನುಂಟುಮಾಡುವ ರೀತಿಯಲ್ಲಿ, ತನ್ನ ಸತ್ಯವಾಕ್ಯ ಪರಿಪಾಲನೆಯನ್ನು ಶಿರಸಾವಹಿಸಿ ಸ್ಥಿರಗೊಳಿಸತಕ್ಕವನಾಗಿ ಮಹಾರಾಜನಿಗೆ ಹೀಗೆ ಬಿನ್ನವಿಸಿದನು.

'ಮಹಾರಾಜ! ನನ್ನೀ ಬಿನ್ನಹವನ್ನು ಮನ್ನಿಸಬೇಕು. ನಿನ್ನೆಯ ಸಭೆಯಲ್ಲಿ ಸಿಂಧುರಾಜನು ತಂದರ್ಪಿಸಿದ ಮನೋಹರ ವಾಜಿಗಳನ್ನು ನೋಡಿ ಅವುಗಳನ್ನು ಹತ್ತಲೇಬೇಕೆಂಬ ಆಸೆ ಒಡಮೂಡಿತು. ಈ ಮಿತ್ರನಲ್ಲಿ ನನ್ನಾಸೆಯನ್ನು ಹೇಳಿಕೊಂಡೆನು. ಆಗ ಈತನು ನನ್ನನ್ನು ತಡೆದು, 'ನಗರಿಯು ಶಿವಭಕ್ತವೃಂದದಿಂದ ತುಂಬಿದೆ; ಈ ಅಶ್ವಗಳು ಇನ್ನೂ ಪಳಗಿಸಲ್ಪಟ್ಟಿಲ್ಲ, ಪಳಗಿಸಲ್ಪಡದ ಇವುಗಳನ್ನೇರಿ ಹೋಗುವುದರಿಂದ ಯಾರಿಗಾದರೂ ಆಪತ್ತೊದಗಬಹುದು. ಆಗ ನಮ್ಮ ಮಹಾರಾಜನು ಸಹಿಸನು ಮತ್ತು ಶಿಕ್ಷೆಯನ್ನು ವಿಧಿಸದೇ ಬಿಡನು' ಎಂದು ಎಷ್ಟು ಬೇಡ ವೆಂದರೂ ನಾನು ಕೇಳದೆ, ಆತನನ್ನು ಬಲಾತ್ಕರಿಸಿ, 'ನಿನ್ನಿಂದಾಗುವ ಅಪರಾಧವು ನನ್ನದಾಗಿರಲಿ, ಆ ನಿನ್ನ ಅಪರಾಧಕ್ಕೆ ನಾನೇ ಸಂಪೂರ್ಣ ಹೊಣೆಯಾಗಿರುತ್ತೇನೆ. ಈ ಅಶ್ವವಿಹಾರವನ್ನು ನಡೆಸಲೇಬೇಕು' ಎಂದು ಒಪ್ಪಿಸಿ ಅಶ್ವಾರೋಹಣ ಮಾಡಿದೆನು. ಸಂಜೆ ಹಿಂತಿರುಗುವಾಗ ಈ ಮಿತ್ರನ ಅಶ್ವದ ಕಾಲಿಗೆ ಸಿಕ್ಕ ಈ ಬಾಲನು ಮೃತನಾದನಷ್ಟೆ. ಆದ್ದರಿಂದ ನನ್ನ ಮಿತ್ರನಿಗೆ ಕೊಟ್ಟ ಮಾತಿನಂತೆ, ಈ ಅಪರಾಧವು ಈತನದಾಗಿರದೆ ನನ್ನದೇ ಆಗಿರುತ್ತದೆ ಮತ್ತು ಈ ಅಪರಾಧದಂಡನೆಗಾಗಿ ನನ್ನ ಶಿರಸ್ಸನ್ನೇ ಛೇದನ ಮಾಡಿಸಬೇಕೇ ಹೊರತು ಈತನ ಶಿರಸ್ಸನ್ನಲ್ಲ. ಇದೋ ನನ್ನ ಮಾತಿನಂತೆ ಈ ಬಾಲಕನ ಶಿರಸ್ಸಿಗೆ ಪ್ರತಿಯಾಗಿ ನನ್ನ ಶಿರಸ್ಸನ್ನು ಅರ್ಪಿಸಲು ಸಿದ್ಧನಾಗಿ ದ್ದೇನೆ' ಎಂದು ಗಂಭೀರವಾಣಿಯಿಂದ ನುಡಿದನು.

ಸಭೆಯಲ್ಲಿದ್ದವರಿಗೆ ಈತನ ಮಾತಿನಿಂದ ಸರ್ವೇದಾಶ್ಚರ್ಯವಾಯ್ತು, ಎಲ್ಲರೂ ಈತನ ಸತ್ಯಪ್ರಿಯತೆಗೆ ಮೆಚ್ಚಿದರು. ಇವನ ವಂಶ-ವಿದ್ಯೆ-ವಿನಯಾದಿಗಳನ್ನು ಹೊಗಳುತ್ತಾ ತಲೆದೂಗಿದರು. ಇಂತಹ ಸತ್ಯವಾಕ್ಯಪರಿಪಾಲಕರು ಈತನೊಬ್ಬನಲ್ಲದೆ ಜಗತ್ತಿನಲ್ಲಿ ಮತ್ತಾರೂ ಇಲ್ಲವೆಂದು ತಮ್ಮ ರಾಜನಂದನನ ಬಗ್ಗೆ ಪ್ರಶಂಸಾರೂಪವಾಗಿ ಅಭಿಮಾನವನ್ನು ವ್ಯಕ್ತಪಡಿಸಿದರು. ಆದರೆ ಈ ಅಭಿಮಾನಾದಿಗಳು ಹೆಚ್ಚು ಕಾಲ ಅವರ ಮನದಲ್ಲಿ ನಿಲ್ಲಲಿಲ್ಲ. ಮುಂದೊದಗಬಹುದಾದ ರಾಜಶೇಖರಕುಮಾರನ ದುಸ್ಥಿತಿಯ ಬಗ್ಗೆ ನೆನೆದು ಬಹುವಾಗಿ ವ್ಯಥೆಪಟ್ಟರು.

ರಾಜನು ರಾಜಶೇಖರನ ಮಾತುಗಳನ್ನು ಕೇಳಿ ತನ್ನ ಪುತ್ರನ ಗುಣಾದಿಗಳ ಬಗ್ಗೆ ಒಳಗೊಳಗೇ ಆನಂದಿಸಿ, ಕೂಡಲೇ ಮಹಾಮಾತ್ಯನನ್ನು ಕುರಿತು, 'ಮಂತ್ರಿವರ್ಯ! ಈತನೇ ಈ ಶಿವಭಕ್ತನಾದ ಸುಕುಮಾರ ಶಂಕರಕುಮಾರನ ಈ ದುಃಸ್ಥಿತಿಗೆ ಕಾರಣನಾದವನಷ್ಟೆ! ಇನ್ನು ತಡಮಾಡದೆ ಈತನ ಶಿರಸ್ಸನ್ನು ಛೇದನ ಮಾಡಿ ತರುವುದು' ಎಂದಾಜ್ಞಾಪಿಸಿದನು. ಈ ಮಾತನ್ನು ಕೇಳಿದ ರಾಜಶೇಖರನು ಮಹಾದಾನಂದದಿಂದ ತಾನೇ ಧನ್ಯನೆಂದು ತಿಳಿದು ತಂದೆಯ ಪಾದಗಳಿಗೆ ಭಕ್ತಿಯಿಂದಭಿವಂದಿಸಿದನು. ಪತಿವ್ರೋಹಿಯು ತನ್ನ ಮನದಳಲನ್ನು ಬಹು ಪ್ರಯಾಸದಿಂದ ತಡೆಹಿಡಿದು ಮಹಾರಾಜನನ್ನು 'ಶಿವಪೂಜೆಗೆ ದಯಮಾಡಿಸಿರಿ' ಎಂದು ಪ್ರಾರ್ಥಿಸಿ ಬೀಳ್ಕೊಟ್ಟು ತಾನೂ ಸಹ ತನ್ನ ಪೂಜಾಗೃಹಕ್ಕೆ ತೆರಳಿದನು.

## ೯. ರಾಜಶೇಖರನ ಸತ್ಯಪರಿಪಾಲನೆ

ಮಹಾಮಾತ್ಯ ಪತಿವ್ರೋಹಿಯು ಭಕ್ತಿಶ್ರದ್ಧೆಗಳಿಂದ ತನ್ನ ಇಷ್ಟಲಿಂಗವನ್ನಾರಾಧಿಸಿ ಸ್ತುತಿಗೈದು ಪ್ರಸಾದವನ್ನು ಸ್ವೀಕರಿಸಿದನು. ಆ ಬಳಿಕ, 'ನನ್ನ ಒಡೆಯನ ಕುಮಾರನನ್ನು ನನ್ನ ಕೈಯಾರ ಕೊಂದು ಹೇಯವಾದ ಈ ಶರೀರವನ್ನು ಹೇಗೆತಾನೆ ಹೊತ್ತಿರಲಿ? ಕುಮಾರನಿಗೆ ಮುನ್ನವೇ ನನ್ನ ಪ್ರಾಣಗಳನ್ನು ಪಾರ್ವತೀಪತಿಯ ಪಾದಾರವಿಂದಗಳಲ್ಲಿ ಸಮರ್ಪಿಸುತ್ತೇನೆ' ಎಂದು ನಿರ್ಧರಿಸಿ ಬಲಗೈಯಿಂದ ಖಡ್ಗವನ್ನು ಸೆಳೆದು ಎಡಗೈಯಿಂದ ತನ್ನ ಶಿರಸ್ಸಿನ ಕೇಶವನ್ನು ಹಿಡಿದುಕೊಂಡು ಶಿರಸ್ಸನ್ನು ಕತ್ತರಿಸಿಟ್ಟನು.

ಇತ್ತ ರಾಜಶೇಖರನೂ ತನ್ನ ಪೂಜಾಗೃಹಕ್ಕೆ ತೆರಳಿ ಶುಚಿರ್ಭೂತನಾಗಿ ಶಿವಲಾಂಛನಗಳಾದ ವಿಭೂತಿ-ರುದ್ರಾಕ್ಷಿಗಳನ್ನು ಧರಿಸಿ ನಾನಾವಿಧದುಪಚಾರಗಳಿಂದ ಲಿಂಗಮೂರ್ತಿಯಾದ ಪರಶಿವನನ್ನು ಅನನ್ಯಭಕ್ತಿಯಿಂದರ್ಚಿಸಿದನು. ಏಕಾಗ್ರಚಿತ್ತನಾಗಿ, 'ಕಾಮಸಂಹರ, ತ್ರಿಲೋಕೇಶ, ಸರ್ವೇಶ್ವರ, ಭಕ್ತಜನಮಂದಾರ, ಚಂದ್ರಾರ್ಧಶೇಖರ, ತ್ರಿಪುರಾರಿ, ಕಾಲಕಾಲ, ನೀಲಕಂಠ, ತ್ರಿಲೋಚನ, ಶೂಲಪಾಣೇ, ಓಂಕಾರಸ್ವರೂಪ, ಮೋಕ್ಷದಾಯಕ, ಗೌರೀಪತೇ, ಶಂಕರ ರಕ್ಷ ಮಾಂ ರಕ್ಷ ಮಾಂ' ಎಂದು ಸ್ತುತಿಸುತ್ತಾ ಪುಷ್ಪಾಂಜಲಿಯಿತ್ತು ನಮಸ್ಕರಿಸಿದನು. ಅನಂತರ ಮಾಹೇಶ್ವರರನ್ನು ಪೂಜಿಸಿ ಅವರಿಂದ ಪಾದೋದಕಪ್ರಸಾದಗಳನ್ನು ಪಡೆದು ಅವರನ್ನು ಭೂರಿ ಧನಕನಕವಸ್ತ್ರಾದಿಗಳಿಂದ ಸಂತೃಪ್ತಿಗೊಳಿಸಿ ಅವರ ಪೂರ್ಣಾಶೀರ್ವಾದವನ್ನು ಪಡೆದು ಅಂತಃಪುರದೆಡೆಗೆ ಬಂದನು. ಅಲ್ಲಿ ಸಖಿಯರ ಮಧ್ಯದಲ್ಲಿ ಮಣಿಪೀಠದಲ್ಲಿ ಮಂಡಿಸಿದ್ದ ತನ್ನ ತಾಯಿ ಅಮೃತಮತಿಮಹಾದೇವಿಗೆ ಭಕ್ತಿಯಿಂದಭಿವಂದಿಸಿದನು. ತುಂಬಿಬಂದ ವಾತ್ಸಲ್ಯದಿಂದ ದೇವಿಯು ಮಗನನ್ನು ಮತ್ತೆ ಮತ್ತೆ ಬಿಗಿದಪ್ಪಿ ಮುತ್ತಿಟ್ಟು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಳು. ಅರಳಿದ ಕೇದಾಪರೆಯಂತೆ ಮನೋಹರವಾಗಿದ್ದ ಆತನ ಮುದ್ದು ಮುಖವನ್ನು ತನ್ನ ಕುಸುಮ ಕೋಮಲವಾದ ಕರಕಮಲಗಳಿಂದ ಸವರುತ್ತಾ, 'ಸುಕುಮಾರ! ನಿನ್ನ ಮುಖಾರವಿಂದದಲ್ಲಿ ಹೊಳೆಯುವ ಈ ದಿವ್ಯಕಾಂತಿಯನ್ನು ನೋಡಿದರೆ, ಈ ದಿನ ಏನೋ ವಿಶೇಷ ಕಾರ್ಯವು ನಡೆದಿರುವುದೆಂದು ನನಗನಿಸುತ್ತಿದೆ. ಅದೇನು ಹೇಳು?' ಎಂದು ಕೇಳಿದಳು. ಆಗ ರಾಜಶೇಖರನು ನಡೆದ ವೃತ್ತಾಂತವನ್ನೆಲ್ಲ ವಿವರಿಸಿ, 'ಅಮ್ಮಾ! ರಾಜಾಜ್ಞೆಯಂತೆ ನಾನೀಗ ವಧ್ಯಸ್ಥಳಕ್ಕೆ ಹೋಗುತ್ತಿದ್ದೇನೆ. ನಿಮ್ಮ ಪಾದಕಮಲಗಳಿಗೆ ನಮಸ್ಕರಿಸಿ, ಅಭೇದ್ಯವಾದ ವಜ್ರಕವಚದಂತಿರುವ ದಿವ್ಯಾಶೀರ್ವಾದವನ್ನು ನಿಮ್ಮಿಂದ ಪಡೆದು ಹೋಗೋಣವೆಂದು ಬಂದೆನು. ತಾಯೇ! ನನ್ನ ಅಗಲುವಿಕೆಯಿಂದ ದುಃಖಿಸದಿರಿ. ನಿಮಗೆ ಮಿತಪಜನನೇ ಪುತ್ರನಾಗಿರುವನು. ಇನ್ನು ನನ್ನನ್ನಾಶೀರ್ವದಿಸಿ ಕಳುಹಿಸಿಕೊಡಿ' ಎಂದು ಹೇಳಿ ಪುನಃ ಪಾದಗಳಿಗೆರಗಿದನು.

ಸ್ವಭಾವಧೀರೆಯೂ, ಶಿವಭಕ್ತಿಪರಾಯಣಳೂ ಆದ ಅಮೃತಮತಿ ಮಹಾದೇವಿಯು, ಉಕ್ಕಿಬಂದ ಮನದಳಲನ್ನು ತಡೆದು, ತನ್ನ ಕುಮಾರನ

ಮೈಯನ್ನು ನೇವರಿಸುತ್ತಾ, 'ಸುಕುಮಾರಾ! ರಾಜಾಜ್ಞೆಗೆ ವಿರುದ್ಧವಾಗಿ ನಡೆಯಲೂಬಾರದು ಮತ್ತು ನುಡಿಯಲೂ ಬಾರದು. ಶಿವಭಕ್ತೆಯೋರ್ವಳ ಶಿಶುವಿಗಾಗಿ ನಿನ್ನ ಪವಿತ್ರ ಪ್ರಾಣವನ್ನು ಪರಮೇಶ್ವರನ ಪಾದಾರವಿಂದದಲ್ಲಿ ಅರ್ಪಿಸಲು ಹೊರಟಿರುವೆ. ಈ ವಿಧದ ಭಕ್ತಿ-ಶ್ರದ್ಧೆ-ಸತ್ಯ-ನಯ-ವಿನಯ-ವಿವೇಕ-ಧೈರ್ಯ-ಶೌರ್ಯಾದಿಗಳು ನನ್ನ ಪುತ್ರನಾದ ನಿನ್ನಲ್ಲಲ್ಲದೆ ಬೇರಾರಲ್ಲೂ ಸಲ್ಲದು. ನಿನ್ನೀ ಕಾರ್ಯದಿಂದ ನಮ್ಮ ವಂಶದ ಕೀರ್ತಿಯು ಜಗದ್ವಿಖ್ಯಾತವಾಗುತ್ತದೆ. ಶ್ರೀ ಪರಶಿವನ ಕೃಪೆಯು ಯಾವಾಗಲೂ ನಿನಗಿರುತ್ತದೆ. ನಿನಗೆ ಶುಭವಾಗಲಿ, ಹೋಗಿ ಬಾ' ಎಂದು ಆಶೀರ್ವದಿಸಿ ಬೀಳ್ಕೊಟ್ಟಳು. ತಾಯಿಯ ಆಶೀರ್ವಾದವನ್ನು ಪಡೆದು ಹೊರಟ ರಾಜಶೇಖರನು ರಾಜಬೀದಿಯಲ್ಲಿ ಬರುತ್ತಿರುವಾಗ ದೂತರ ಮುಖಾಂತರ ಮಂತ್ರಿ ಪತಿವ್ರೋಹಿಯ ಆತ್ಮಾರ್ಪಣೆಯ ವಿಷಯವನ್ನು ತಿಳಿದು ಮಹಾರಾಜನಲ್ಲಿಗೆ ಬಂದನು. ಆತನಿಗೆ ಈ ವಿಷಯವನ್ನರಿಕೆಮಾಡಿದನು. ಪತಿವ್ರೋಹಿಯ ಸ್ವಾಮಿನಿಷ್ಠೆಗೆ ಅಚ್ಚರಿಗೊಂಡ ರಾಜನು ಕ್ಷಣಕಾಲ ಚಿಂತಿಸಿ, ತನ್ನ ಸಮೀಪ ರಕ್ಷಕನಾಗಿದ್ದ ಸಂದಾಯಿಯನ್ನು ಕರೆದು, 'ನೀನೀಗಲೇ ಈ ರಾಜಶೇಖರನ ಶಿರಸ್ಸನ್ನು ಕಡಿದು ತಾ' ಎಂದಪ್ಪಣೆ ಮಾಡಿದನು. ಕೂಡಲೇ ಸಂದಾಯಿಯೊಡನೆ ರಾಜಶೇಖರನು ವಧಾಸ್ಥಾನಕ್ಕೆ ಹೊರಟನು.

ಪರಮೇಶ್ವರನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಾ ರಾಜಬೀದಿಗಳಲ್ಲಿ ರಾಜಶೇಖರನು ನಡೆದುಬರುತ್ತಿದ್ದನು. ಈತನ ಗಂಭೀರ ಮುಖಮುದ್ರೆಯನ್ನು ನೋಡಿ ಜನರು, 'ಅಖಂಡ ಸಾಮ್ರಾಜ್ಯಕ್ಕೊಡೆಯನಾಗಿ, ನವ ಯೌವನ ಸಂಪನ್ನನಾಗಿ ಅತುಳೈಶ್ವರ್ಯಭರಿತನಾಗಿದ್ದರೂ ಈ ರಾಜಕುಮಾರನು ತನ್ನ ಸತ್ಯಪಾಲನೆಗಾಗಿ ತನ್ನ ಪ್ರಾಣವನ್ನೇ ಅರ್ಪಿಸಲು ಹೊರಟಿರುವನು. ಇಂತಹ ರಾಜಪುತ್ರನು ಈ ಲೋಕದಲ್ಲಿಯೇ ಇಲ್ಲ' ಎಂದು ಹೊಗಳುತ್ತಿದ್ದರು. ಮತ್ತೆ ಕೆಲವರು, 'ಶಿವ ಶಿವ! ಶಿವಭಕ್ತನೂ ಉತ್ತಮ ಚಕ್ರವರ್ತಿಯೂ ಆದ ನಮ್ಮೀ ಚೋಳಭೂಪಾಲನಿಗೆ ಇದು ಸರಿಯೇ? ಮಂತ್ರಿಕುಮಾರನಿಂದಾದ ತಪ್ಪಿಗೆ ಈ ಸುಕುಮಾರನನ್ನು ಬಲಿಕೊಡುವುದೇ?' ಎಂದು ಕಣ್ಣೀರಿಡುತ್ತಿದ್ದರು. ಮತ್ತೆ ಸ್ತ್ರೀಯರು, 'ಅಯ್ಯೋ! ಈ ಹಾಳು ಕುದುರೆಗಳು ಏಕಾದರೂ ಬಂದುವೋ? ಈ ಸುಕುಮಾರರು

ಏಕಾದರೂ ಏರಿದರೋ ? ಈ ಶಂಕರನಾದರೂ ಏಕೆ ಸಿಕ್ಕಿಬಿದ್ದನೋ ? ಈ ತಿರುಕೊಳವಿನಾಚಿಯು ಏಕಾದರೂ ದೂರಿತ್ತಳೋ ? ರಾಜನು ತನ್ನ ಈ ಪುತ್ರನಿಗೇ ಹೀಗೆ ಶಿಕ್ಷೆ ವಿಧಿಸಬೇಕೇ ? ಇದಾವ ದುರ್ದೈವವೋ ? ' ಎಂದು ಗೋಳಿಟ್ಟರು. ಇದನ್ನೆಲ್ಲ ಕೇಳುತ್ತ ಮೇರುಪರ್ವತದಂತೆ ಅಚಲ ನಾಗಿ ರಾಜಬೀದಿಗಳಲ್ಲಿ ಸಾಗುತ್ತಾ ಉದ್ಯಾನವನವನ್ನು ಪ್ರವೇಶಿಸಿದನು.

## ೧೦. ಸಂದಾಯಿಯ ಕರ್ತವ್ಯನಿಷ್ಠೆ

ಗೊತ್ತುಮಾಡಲ್ಪಟ್ಟಿದ್ದ ವಧ್ಯಸ್ಥಾನದಲ್ಲಿ ರಾಜಶೇಖರನು ಪದ್ಮಾಸನ ವನ್ನಾಶ್ರಯಿಸಿ ಕುಳಿತನು. ತನ್ನ ಮನಸ್ಸನ್ನು ಏಕಾಗ್ರದಲ್ಲಿರಿಸಿ ಶ್ರೀ ಪರ ಶಿವನ ಪಾದಾರವಿಂದಗಳನ್ನು ಧ್ಯಾನಿಸುತ್ತಿದ್ದನು. ಈತನ ಚರ್ಯೆಯನ್ನು ನೋಡಬಯಸಿ ಶಂಕರನು ಸಕಲ ದೇವಗಣದೊಂದಿಗೆ ಉಮಾ ಸಮೇತ ನಾಗಿ ಆಕಾಶದಲ್ಲಿ ನಿಂತನು. ರಾಜಶೇಖರನು ತನ್ನ ಖಡ್ಗವನ್ನು ಸೆಳೆದು ತನ್ನ ಕೊರಳನ್ನು ಕತ್ತರಿಸಿಕೊಳ್ಳಲುದ್ಯುಕ್ತನಾದನು. ಅಷ್ಟರಲ್ಲಿ ಸಂದಾ ಯಿಯು, ' ಒಡೆಯ ! ದಿವ್ಯ ಪಂಚಾಕ್ಷರೀ ಪ್ರಭಾವದಿಂದ ಜನಿಸಿದ ನೀನು ಈ ಸಂದರ್ಭದಲ್ಲಿ ಶ್ರೀ ಪಂಚಾಕ್ಷರಿಯನ್ನುಚ್ಚರಿಸದೆ ಹೀಗೆ ಈ ಕಾರ್ಯದಲ್ಲಿ ತೊಡಗಬಹುದೇ ? ' ಎಂದು ಹೇಳಿದನು. ಮುಗುಳುನಗೆಯಿಂದ ರಾಜ ಕುಮಾರನು, ' ಸಂದಾಯಿ ! ನೀನು ನನಗೆ ಪರಮ ಆಪ್ತನಷ್ಟೆ ! ಮರೆತಿದ್ದುದನ್ನು ನೀನು ಜ್ಞಾಪಕಮಾಡಿಕೊಟ್ಟೆ ' ಎಂದನು. ಆಗ ಸಂದಾಯಿಯು ಅತಿ ವಿನಯದಿಂದ, ' ದೇವ ! ಸೇವಕನಾದ ನನ್ನಲ್ಲಿ ನಿನಗೆ ಪರಿಹಾಸ್ಯವೇ ? ಅವಸಾನಕಾಲದಲ್ಲಿ ದಿವ್ಯಮಂತ್ರವನ್ನುಚ್ಚರಿಸ ಬೇಕೆಂಬ ವೇದಾಗಮೋಕ್ತಿಗಳು ಸುಳ್ಳೇನು ? ಅಥವಾ . . . . ನಿನ್ನೀ ಕಾರ್ಯದ ಮರ್ಮವೇನೆಂಬುದನ್ನು ತಿಳಿಸಬೇಕು ' ಎಂದು ಬೇಡಲು, ರಾಜಶೇಖರನು, ' ಸಂದಾಯಿ ! ನಿನ್ನ ಮಾತು ಸತ್ಯ. ಅಂತ್ಯಕಾಲದಲ್ಲಿ ಈ ಮಹಾಮಂತ್ರವನ್ನು ಜಪಿಸಬೇಕೆಂದು ವೇದಾಗಮಾದಿಗಳ ಆಜ್ಞೆಯುಂಟು. ಒಂದುವೇಳೆ ಹಾಗೆ ಮಂತ್ರವನ್ನುಚ್ಚರಿಸಿ ಕಾರ್ಯದಲ್ಲಿ ತೊಡಗಿದೆನೆಂದರೆ ನಿನ್ನ ಈ ಸ್ವಾಮಿನಿಷ್ಠೆ—ಭೃತ್ಯಭಾವ ಮತ್ತು ರಾಜಾಜ್ಞೆಗಳು ಭಂಗಹೊಂದು ವುವು. ಆಗ ಆ ದೋಷವು ನಿನಗೇ ಸಲ್ಲುವುದು. ಇದನ್ನರಿತೇ ನಾನು

ಉಚ್ಚರಿಸುತ್ತಿಲ್ಲ' ಎಂದನು. 'ಮಹಾನುಭಾವ! ನಿನ್ನ ಈ ಮಾತು ನನಗರ್ಥವಾಗಲಿಲ್ಲ. ಮಹಾಮಂತ್ರ ಜಪಕ್ಕೂ ರಾಜಾಜ್ಞೆಯ ಭಂಗಕ್ಕೂ ಸಂಬಂಧವೇನು? ವಿವರಿಸಿ ತಿಳಿಸಬೇಕು.' ಎಂದು ಸಂದಾಯಿಯು ಪ್ರಾರ್ಥಿಸಲು, ರಾಜಶೇಖರನು, 'ಕೇಳು ಈ ಮಹಾಮಂತ್ರವು ವರ್ಣಿಸಲ ಸಾಧ್ಯವಾದ ಪ್ರಭಾವವುಳ್ಳದ್ದು. ನಾನು ಈ ಮಂತ್ರವನ್ನುಚ್ಚರಿಸುವಾಗ ನೀನು ಖಡ್ಗವನ್ನು ಬೀಸಿದರೆ ಅದು ನನ್ನ ಕಂಠದಲ್ಲಿ ಹೂ ಮಾಲೆಯಾಗುತ್ತದೆ. ಇದರಿಂದ ನಿನ್ನ ಕರ್ತವ್ಯಕ್ಕೆ ಚ್ಯುತಿಬಂದು ರಾಜಾಜ್ಞೆಯನ್ನು ಮೀರಿದ ದೋಷವೂ ಸಂಘಟಿಸುವುದಿಲ್ಲವೇ? ಅದಕ್ಕಾಗಿ ನಾನು ಉಚ್ಚರಿಸುತ್ತಿಲ್ಲ' ಎಂದನು. ಅವಕ್ಕೆ ಸಂದಾಯಿಯು, 'ವಿಭೋ! ನನಗೆ ದೋಷವು ಸಂಭವಿಸಿದರೂ ಸಂಭವಿಸಲಿ, ನಾನು ರಾಜಾಜ್ಞೆಯನ್ನು ಮೀರಿದರೂ ಚಿಂತೆಯಿಲ್ಲ, ನೀನು ಮಾತ್ರ ಈ ಮಹಾಮಂತ್ರವನ್ನುಚ್ಚರಿಸಲೇಬೇಕು. ಇಲ್ಲದಿದ್ದರೆ ಶ್ರೀ ಶಂಕರನೊಂದಿಗೆ ನಿನ್ನ ಐಕ್ಯವು ಸಾಧ್ಯವಾಗದು. ಆದ್ದರಿಂದ ನನ್ನ ಪ್ರಾರ್ಥನೆಯನ್ನು ಮನ್ನಿಸಿ ಮಹಾಮಂತ್ರವನ್ನುಚ್ಚರಿಸುತ್ತಾ ನಿನ್ನ ಕಾರ್ಯದಲ್ಲಿ ತೊಡಗಬೇಕು' ಎಂದು ಪ್ರಾರ್ಥಿಸಿದನು. ಆಗ ರಾಜಶೇಖರನು, 'ನೀನು ಈ ವರೆವಿಗೂ ಸೈರಿಸಿರುವೆ, ಇನ್ನು ಸ್ವಲ್ಪಕಾಲ ಸುಮ್ಮನಿದ್ದು ಮುಂದಾಗುವ ವಿಚಿತ್ರವನ್ನು ನೋಡುತ್ತಿರು' ಎಂದು ಹೇಳಿ ತನ್ನ ಖಡ್ಗದಿಂದ ತನ್ನ ಕಂಠವನ್ನು ಕತ್ತರಿಸಿಕೊಳ್ಳಲುದ್ಯುಕ್ತನಾದನು.

ಅಷ್ಟರಲ್ಲಿ ಗಿರಿಜೆಯು, 'ದೇವ ದೇವ! ನಿನ್ನ ಭಕ್ತನು ತನ್ನ ಪ್ರಾಣವನ್ನು ನಿನಗರ್ಪಿಸಲುದ್ಯುಕ್ತನಾಗಿರುವನು. ಇವನನ್ನು ಕಾಪಾಡಬಾರದೇಕೆ?' ಎಂದು ಶಂಕರನನ್ನು ಕೇಳಿದಳು. ಆಗ ಶಂಕರನು, 'ಉಮಾ, ಸ್ವಲ್ಪ ಸೈರಿಸು; ನಡೆಯಬೇಕಾದ ಕಾರ್ಯಗಳು ಇನ್ನೂ ಬಹಳವಾಗಿವೆ. ಈ ಸದ್ಭಕ್ತರ ಅದ್ಭುತಶಕ್ತಿಯನ್ನು ನಿನ್ನ ಕಣ್ಣಾರ ನೀನೇ ನೋಡಿ ಆನಂದಿಸುವೆ' ಎಂದು ಸಂತೈಸಿದನು.

ಇತ್ತ ರಾಜಶೇಖರನು ಕೂಡಲೇ ತನ್ನ ಹೃದಯಾಂಭೋಜದಲ್ಲಿ ಶ್ರೀ ಗೌರೀವರನನ್ನು ಭಾವಿಸಿ ಧ್ಯಾನಿಸುತ್ತಾ ಶಿರಸ್ಸನ್ನು ಕತ್ತರಿಸಿದನು. ಕೂಡಲೇ ಶಿರಸ್ಸು ಮುಂಡದಿಂದ ಬೇರೆಯಾಗಿದ್ದರೂ ಶ್ರೀಶಿವಪಂಚಾಕ್ಷರಿಯನ್ನುಚ್ಚರಿಸಲಾರಂಭಿಸಿತು. ಎಡಗೈಯಿಂದ ಆತನು ಶಿರಸ್ಸನ್ನು ಸಂದಾ

ಯಿಯ ಕೈಗಿತ್ತನು. ಈ ಅದ್ಭುತವನ್ನು ಕುತೂಹಲಿಯಾಗಿ ನೋಡುತ್ತಿದ್ದ ಸಂದಾಯಿಯು ನಿಬ್ಬೆರಗಾಗಿ ಶಿವನನ್ನೇ ಧ್ಯಾನಿಸುತ್ತಾ ಆ ಶಿರಸ್ಸನ್ನು ಹಿಡಿದು ಕೊಂಡು ರಾಜಬೀದಿಗಳ ಮುಖಾಂತರ ಅರಮನೆಯೆಡೆಗೆ ಹೊರಟನು. ಅತ್ಯಾಶ್ಚರ್ಯವನ್ನುಂಟುಮಾಡುತ್ತಿರುವ ಈ ಶಿರಸ್ಸನ್ನು ನೋಡಿದ ನಾಗರಿಕರಿಗೆ ಆಶ್ಚರ್ಯ ದುಃಖಗಳು ಒಮ್ಮೆಗೇ ಹೊಮ್ಮಿಬಂದವು. ಸೇವಕನು ಆ ಶಿರಸ್ಸನ್ನು ರಾಜನ ಸನ್ನಿಧಿಗೆ ತಂದು ಆತನ ಪಾದಗಳ ಮುಂದಿರಿಸಿ ನಮಸ್ಕರಿಸಿ ನಿಂತನು. ಮಹಾಮಂತ್ರೋಚ್ಚಾರಣೆಯನ್ನು ಮಾಡುತ್ತಾ ದೇದೀಪ್ಯಮಾನವಾಗಿ ಹೊಳೆಯುತ್ತಿರುವ ತನ್ನ ಪುತ್ರನ ಶಿರಸ್ಸನ್ನು ನೋಡಿ ರಾಜನಿಗೆ ಆಶ್ಚರ್ಯಾನಂದಗಳು ಒಮ್ಮೆಗೇ ಉಕ್ಕಿಬಂದವು. ಸಂದಾಯಿಯನ್ನು ನೋಡಿ, 'ಈ ಕಾರ್ಯವು ನಡೆದ ಬಗೆ ಹೇಗೆ? ಈ ಕುಮಾರನು ಮತ್ತೇನನ್ನು ಹೇಳಿದನು?' ಎಂದು ಕೇಳಿದನು. ಸಂದಾಯಿಯು ಭಕ್ತಿಯಿಂದ ಅಲ್ಲಿ ತಮ್ಮಿರ್ವರಿಗೂ ನಡೆದ ಸಂಭಾಷಣೆಯನ್ನೆಲ್ಲ ವಿವರಿಸಿ, ತಾನೂ ಸಹ ಮನದಲ್ಲಿ ಶಿವನನ್ನು ಧ್ಯಾನಿಸುತ್ತಾ, ರಾಜಶೇಖರನು ಖಡ್ಗವನ್ನು ಹೊರ ತೆಗೆದ ರೀತಿಯನ್ನು ತಾನೂ ಅನುಕರಣಮಾಡುತ್ತಾ, 'ಜೀಯಾ! ಇದೋ ಹೀಗೆ ಆತನು ತನ್ನ ಶಿರಸ್ಸನ್ನು ಕತ್ತರಿಸಿ ಹೀಗೆ ನನ್ನ ಕೈಗಿತ್ತನು' ಎಂದು ಹೇಳುತ್ತಾ ತನ್ನ ಖಡ್ಗದಿಂದ ತನ್ನ ಶಿರಸ್ಸನ್ನು ಛೇದಿಸಿ ರಾಜನಕೈಗಿತ್ತನು.

ಇದನ್ನು ನೋಡಿದ ರಾಜನು ಆಶ್ಚರ್ಯಗೊಂಡು, ಸಂದಾಯಿಯ ರಾಜನಿಷ್ಠೆ-ಕರ್ತವ್ಯನಿಷ್ಠೆ-ಸ್ವಾಮಿಭಕ್ತಿ-ದೈವಭಕ್ತಿಗಳಿಗೆ ತಲೆದೂಗಿ, ಮಹಾಮಂತ್ರವನ್ನುಚ್ಚರಿಸುತ್ತಿದ್ದ ರಾಜಶೇಖರನ ಶಿರಸ್ಸಿನ ಪಕ್ಕದಲ್ಲಿ ಈ ಶಿರಸ್ಸನ್ನು ಇರಿಸಿದನು. ಕೂಡಲೇ ಸಂದಾಯಿಯ ಶಿರಸ್ಸು ಆ ಶಿರಸ್ಸಿನ ಸಂಸರ್ಗದಿಂದ ಪಂಚಾಕ್ಷರೀ ಮಹಾಮಂತ್ರವನ್ನುಚ್ಚರಿಸಲಾರಂಭಿಸಿತು. ಆಗ ರಾಜನು ಮಿಗಿಲಾದ ಕೌತುಕದಿಂದ ಮಂತ್ರಮಹಿಮೆಗೆ ಬೆರಗಾಗಿ, ತಿರುಕೊಳವಿನಾಚಿಯನ್ನು ಕುರಿತು, 'ಭಕ್ತೆ! ಇದೋ ನೋಡು ನಿನ್ನ ಮಗನ ಒಂದು ಶಿರಸ್ಸಿಗೆ ಎರಡು ಶಿರಸ್ಸುಗಳನ್ನು ಕೊಟ್ಟಿದ್ದೇನೆ' ಎಂದು ಹೇಳಿ, ಶಂಕರನ ಶಿರಸ್ಸನ್ನು ರಾಜಶೇಖರನ ಶಿರಸ್ಸಿನ ಮತ್ತೊಂದು ಪಾರ್ಶ್ವದಲ್ಲಿಟ್ಟನು. ಇನ್ನೂ ಅದ್ಭುತ, ಅದೂ ಸಹ ಇತರ ಶಿರಸ್ಸುಗಳಂತೆಯೇ ದಿವ್ಯಪಂಚಾಕ್ಷರಿಯನ್ನುಚ್ಚರಿಸಲಾರಂಭಿಸಿತು.

## ೧೧. ಶಿವಮಂತ್ರ ಮಹಿಮೆ

ಕೂಡಲೇ ತಿರುಕೊಳವಿನಾಚಿಯು ಸಂದಾಯಿಯು ಕರಬಂಧದಲ್ಲಿದ್ದ ಖಡ್ಗವನ್ನು ಸೆಳೆದು, ಮಹಾರಾಜನಿಗೆ, 'ಮಹಾಪ್ರಭು! ಲೋಕಮಾನ್ಯನಾದ ನಿನ್ನ ಪುತ್ರನ ಶಿರಸ್ಸನ್ನು ನನ್ನ ಪುತ್ರನಿಗಾಗಿ ಬಲಿಯಾಗಿಸಿದೆಯಷ್ಟೆ! ಇದೋ! ಈ ಎಲ್ಲ ಶಿರಸ್ಸುಗಳಿಗೆ ನನ್ನ ಶಿರಸ್ಸೂ ಅರ್ಪಿತವಾಗಲಿ' ಎಂದು ಹೇಳಿ ತನ್ನ ಶಿರವನ್ನು ತರಿದು ನೆಲದಮೇಲಿಟ್ಟಳು. ರಾಜನು ಇದನ್ನು ಆ ಮೂರು ಶಿರಸ್ಸುಗಳ ಪಕ್ಕದಲ್ಲಿರಿಸಿ ಮಹಾಮಂತ್ರಿ ಪತಿವ್ರೋಹಿಯ ಶಿರಸ್ಸನ್ನೂ ತರಿಸಿಟ್ಟನು. ಈ ಎರಡೂ ಶಿರಸ್ಸುಗಳು ಅವುಗಳಂತೆಯೇ ಪಂಚಾಕ್ಷರಿಯನ್ನುಚ್ಚರಿಸಲಾರಂಭಿಸಿದವು. 'ಶಿವನ ಪಂಚಮುಖಗಳಿನಿಸಿರುವ ಪಂಚ ಅಕ್ಷರಗಳಂತೆ ಹೊಳೆಯುತ್ತಿರುವ ಈ ಐದು ಶಿರಸ್ಸುಗಳಿಗೆ ನನ್ನ ಶಿರಸ್ಸು ಓಂಕಾರವಾಗಿಯಾಗಲಿ' ಎಂದು ಬಗೆದ ಮಹಾರಾಜನು ತನ್ನ ಖಡ್ಗವನ್ನು ಹೊರಸೆಳೆದು, ಶಿವನನ್ನು ಧ್ಯಾನಿಸುತ್ತಾ ತನ್ನ ಶಿರವನ್ನು ಕತ್ತರಿಸಿ ಪಂಚಾಕ್ಷರಿಯನ್ನುಚ್ಚರಿಸುತ್ತಿದ್ದ ಅದನ್ನು ಆ ಶಿರಸ್ಸುಗಳ ಪಕ್ಕದಲ್ಲೇ ಇರಿಸಿದನು. ಅದೇ ಕಾಲಕ್ಕೆ ಆ ಸಭಾಮಂದಿರಕ್ಕೆ ಆಗಮಿಸಿದ ಮಿತವಚನನು ಶಿವಪಂಚಾಕ್ಷರಿಯನ್ನುಚ್ಚರಿಸುತ್ತಾ ಅಮಿತ ತೇಜಸ್ಸಿನಿಂದ ಹೊಳೆಯುತ್ತಿದ್ದ ಆ ಆರೂ ಶಿರಸ್ಸುಗಳನ್ನು ನೋಡಿ, 'ನನ್ನಿಂದಾದ ಅಪರಾಧಕ್ಕೆ ನಿರಪರಾಧಿಗಳಿಗೆ ಈ ಶಿಕ್ಷೆಯೇ? ಈ ಶಿಕ್ಷೆ ಮೊಟ್ಟಮೊದಲು ನನಗೇ ಸಂಭವಿಸಬೇಕಾಗಿತ್ತು. ಶಿವ ಶಿವಾ! ನನ್ನಿಂದಾದ ಅಪರಾಧವನ್ನು ಕ್ಷಮಿಸು' ಎಂದು ಮನದಲ್ಲಿ ಪ್ರಾರ್ಥಿಸಿ, ತನ್ನ ಖಡ್ಗವನ್ನು ಹೊರಸೆಳೆದು ಶಿವನನ್ನು ಧ್ಯಾನಿಸುತ್ತಾ ತನ್ನ ಶಿರವನ್ನು ಕತ್ತರಿಸಿ ಆ ಆರು ಶಿರಸ್ಸುಗಳ ಪಕ್ಕದಲ್ಲಿರಿಸಿದನು. ಆ ಕೂಡಲೇ ಆತನ ಶಿರಸ್ಸು ಸಹ ಪಂಚಾಕ್ಷರಿಯನ್ನುಚ್ಚರಿಸಲಾರಂಭಿಸಿತು. ಅಗಣಿತವಾದ ಜನಸ್ತೋಮವು ಈ ಮಹದದ್ಭುತವನ್ನು ನೋಡುತ್ತಾ ನಿಬ್ಬೆರಗಾಗಿ ನಿಂತಿತು.

ಈ ವೇಳೆಗೆ ವಿಷಯವನ್ನು ತಿಳಿದ ಅಮೃತಮತಿ ಮಹಾದೇವಿಯು ವೈಭವದ ಶಿವಪೂಜೆಯನ್ನು ಕೈಕೊಂಡು, ಅಂತೆಯೇ ಶಿವಾನಂದಿಗಳಾಗಿದ್ದ ರಾಜಶೇಖರನ ಪತ್ನಿ, ಪತಿವ್ರೋಹಿಯ ಪತ್ನಿ ಮತ್ತು ಮಿತವಚನನ ಪತ್ನಿ

ಮುಂತಾದ ಅಂತಃಪುರದವರೊಂದಿಗೆ ಅಲ್ಲಿಗಾಗಮಿಸಿದಳು. ಒಂದೊಂದು ಶಿರಸ್ಸನ್ನೂ ಹೆಸರಿಸಿ, 'ಇದು ಶಂಕರಕುಮಾರನದು, ಇದೇ ನನ್ನ ಸುಕುಮಾರ ರಾಜಶೇಖರನದು, ಇದು ನಿಷ್ಕಾಮವಂತ ಸೇವಕನಾದ ಸಂದಾಯಿಯದು, ಇದು ನೀತಿಕುಶಲನಾದ ಮಹಾಮಂತ್ರಿಯದು, ಇದು ಆ ಶಿವಭಕ್ತೆ ತಿರುಕೊಳವಿನಾಚಿಯದು, ಇದೇ ನನ್ನ ಹೃದಯೇಶ್ವರನದು, ಇದೇ ಮಂತ್ರಿಸುತ ಮಿತವಚನನದು' ಎಂದು ತೋರಿಸುತ್ತಾ ಆವೇಶಬಂದವಳಂತೆ ಮತ್ತು ಉನ್ಮತ್ತಳಂತೆ ಕಾಣುತ್ತಾ, ತಾನೂ ಸಹ ತೀಕ್ಷ್ಣವಾದ ಖಡ್ಗವನ್ನು ಹಿಡಿದು ನಿಂತಳು. ಆಗ ಸರ್ವಮಂಗಳೆ, ಮಂತ್ರಿಯ ಪತ್ನಿ ಮತ್ತು ಮಿತವಚನನ ಪತ್ನಿ ಈ ಮೂವರೂ ಸಹ ರಾಣಿಯ ಪಾದಗಳಿಗೆ ನಮಸ್ಕರಿಸಿ ತಾವೂ ಖಡ್ಗಗಳನ್ನು ಸೆಳೆದು ತಮ್ಮ ತಮ್ಮ ಪತಿಯರ ಶಿರಸ್ಸುಗಳೆದುರು ನಿಂತರು. ಎಲ್ಲರೂ ಶ್ರೀ ಪಾರ್ವತೀಧವನನ್ನು ಏಕಮನಸ್ಸಿನಿಂದ ಧ್ಯಾನಿಸುತ್ತಾ ತಮ್ಮ ತಮ್ಮ ಪತಿಯರ ಶಿರಸ್ಸುಗಳೆಂಬ ಲಿಂಗಗಳಿಗೆ ತಮ್ಮ ತಮ್ಮ ಮುಖಗಳೆಂಬ ಮನೋಹರ ಕಮಲಗಳನ್ನು ಸಮರ್ಪಿಸಿ ಪೂಜಿಸತಕ್ಕವರಾಗಿ ತಮ್ಮ ಶಿರಸ್ಸುಗಳನ್ನು ಕತ್ತರಿಸತೊಡಗುವಷ್ಟರಲ್ಲಿಯೇ ಕರುಣಾಕರನಾದ ಶ್ರೀ ಶಂಕರಮೂರ್ತಿಯು ಮಂಗಳಾಲಂಕೃತನಾಗಿ ಶ್ರೀ ಸರ್ವಮಂಗಳೆಯೊಂದಿಗೆ ಪ್ರತ್ಯಕ್ಷನಾಗಿ ಅವರ ಕೈಗಳಲ್ಲಿದ್ದ ಖಡ್ಗಗಳನ್ನು ಕಿತ್ತೆಸೆದನು. ದೇವದುಂದುಭಿಗಳು ಮೊಳಗಿದವು. ಸ್ವರ್ಗದಿಂದ ಪುಷ್ಪವೃಷ್ಟಿಯಾಯ್ತು.

ಆಗ ಶಂಕರನು ಅಮೃತಮತಿ ದೇವಿಯನ್ನು ಕುರಿತು, 'ಮಗಳೆ! ಈ ಸಾಹಸಬೇಡ, ನಿನ್ನ ಬೇಡಿಕೆಯೇನು?' ಎಂದು ಕೇಳಿದನು. ಆಗ ದೇವಿಯು ಕೈಮುಗಿದು ನಿಂದು, 'ದೇವಾ! ಮೊದಲು ಮಡಿದ ಶಂಕರಕುಮಾರನಿಗೆ ಪ್ರಾಣದಾನಮಾಡಿ ಕಾಪಾಡಬೇಕು' ಎಂದು ಬೇಡಿದಳು. ಶಂಕರನು ಮೆಚ್ಚಿ ಸಂತೋಷಗೊಂಡು, 'ಭಕ್ತೆ! ಮೆಚ್ಚಿದೆ, ಮತ್ತೊಂದು ಕೋರಿಕೆಯೇನು?' ಎಂದನು. ಆಗ, 'ಸ್ವಾಮಿ! ಶಂಕರನ ತಾಯಿ ತಿರುಕೊಳವಿನಾಚಿಗೆ ಪ್ರಾಣದಾನ ನೀಡು', ಎಂದು ಪ್ರಾರ್ಥಿಸಿದಳು. ಮಹಾದೇವಿಯ ನಿಃಸ್ವಾರ್ಥ ಮನೋಭಾವ ಮತ್ತು ಶಿವಭಕ್ತಿಪ್ರಿಯತೆಗೆ ಆನಂದಿಸಿ ಶಿವನು, 'ಮಗಳೇ! ಈ ಶಿರಸ್ಸುಗಳನ್ನು ಕ್ರಮವಾಗಿ ಎಣಿಸು' ಎಂದಪ್ಪಣೆಯಿತ್ತನು. ದೇವಿಯು 'ಮಹಾಪ್ರಸಾದ'ವೆಂದಂಗೀಕರಿಸಿ

ಭಕ್ತಿಯಿಂದ ಶಿವನಿಗಭಿವಂದಿಸಿ, ಆ ಎಲ್ಲ ಶಿರಸ್ಸುಗಳನ್ನು ಒಂಮ ಸಾರಿ ನೋಡಿ, 'ಒಂದು-ಎರಡು-ಮೂರು-ನಾಲ್ಕು-ಐದು-ಆರು-ಏಳು' ಎಂದೆಣಿಸು ವಷ್ಟರಲ್ಲಿಯೇ ಆ ಏಳು ಮಂದಿಯು ಶಿವಪ್ರಭಾವದಿಂದ ಪೂರ್ಣಶರೀರಿಗಳಾಗಿ ಮೇಲೆದ್ದರು. 'ಶಿವ ಶಿವ ಜಯ ಜಯ, ಹರಶಂಭೋ ಮಹಾದೇವ' ಎಂಬ ಶಬ್ದವು ದಿಗಂತವನ್ನೇ ವ್ಯಾಪಿಸಿತು. ಪರಮೇಶ್ವರನ ಮಂಗಳಮೂರ್ತಿಯನ್ನು ನೋಡಿ ಕೊಂಡಾಡಿ ಅಡಿಗಡಿಗೆ ಆತನ ಪಾದಾರವಿಂದಗಳಿಗಭಿವಂದಿಸಿ ಮಹಾರಾಜನೇ ಮುಂತಾಗಿ ಸರ್ವರೂ ಭಕ್ತಿಯಿಂದ ಸ್ತುತಿಸಿದರು. ಆತ್ಮಜ್ಯೋತಿಯಾಗಿದ್ದು ಈಗ ಪ್ರತ್ಯಕ್ಷಪರಂಜ್ಯೋತಿಯಾಗಿ ಬೆಳಗುತ್ತಿದ್ದ ಗಿರಿಜಾರಮಣನನ್ನು ಕಂಡ ರಾಜಶೇಖರನು, 'ಪುರಹರ, ಪೂರ್ಣರೂಪ, ಪುರುಷೋತ್ತಮವಂದ್ಯ, ಪುರಂದರಾರ್ಚ್ಯ, ಪರಮೇಶ್ವರ, ಪನ್ನಗಭೂಷ, ಪಾರ್ವತೀವರ, ಶಂಕರ, ಜಯದೇವದೇವ, ಜಗತೀಧರಮಂದಿರ, ಮಂಗಳೋದಯ' ಎಂದು ಕೊಂಡಾಡಿದನು. ಆಗ ಶಂಕರಮೂರ್ತಿಯು ಮುಗುಳು ನಗುತ್ತಾ, 'ಬಾ ಮಗನೆ!' ಎಂದು ಕರೆದು ಬಿಗಿದಪ್ಪಿ, 'ಕುಮಾರಾ! ನನ್ನ ಮಂತ್ರದ ಮಹಿಮೆಯನ್ನರಿತು ಅದರ ಪ್ರಭಾವವನ್ನು ಜಗತ್ತಿಗೆ ಪ್ರತ್ಯಕ್ಷಮಾಡಿಕೊಟ್ಟ ನಿನ್ನ ಈ ಭಕ್ತಿಚರಿತ್ರೆಯು ಜಗತ್ತಿನಲ್ಲಿ ಪವಿತ್ರವೂ ಶಾಶ್ವತವೂ ಆಗಿ ಮೆರೆಯುತ್ತದೆ' ಎಂದಾಶೀರ್ವದಿಸಿ ಎಲ್ಲರನ್ನೂ ಪುಷ್ಪಕ ವಿಮಾನದಲ್ಲಿ ಕೈಲಾಸಕ್ಕೆ ಕರೆದೊಯ್ದನು.

|| ಓಂ ತತ್ಸತ್ ||



SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ........... 510